ಶುಕ್ರವಾರ, ಜನವರಿ 19, 2024 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

ದೇಗುಲಕ್ಕೆ ಭೇಟಿ

ಗುಜರಾತ್‌ನ ಗಿರ್ ಸೋಮನಾಥ ಜಿಲ್ಲೆಯ ಸೋಮನಾಥ ದೇವಾಲಯದಲ್ಲಿ ಚಿತ್ರನಟಿ ರವೀನಾ ಟಂಡನ್ ಹಾಗೂ ಪುತ್ರಿ ರಾಶಾ ಥಡಾನಿ ಪೂಜೆ ಸಲ್ಲಿಸಿದರು



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ರಂಗಸಮುದ್ರ' ಸಿನಿಮಾ ಮೂಲಕ ಹೊಸ ಚಿಗುರುಗಳ ಜೊತೆ ಹಳೆ ಬೇರಾಗಿ ರಂಗಾಯಣ ರಘು ಕೈಜೋಡಿಸಿದ್ದಾರೆ.



ಆಳ-ಅಗಲ
ಏಡನ್ ಕೊಲ್ಲಿ: ಹಡಗುಗಳ ಮೇಲೆ ದಾಳಿ ಭಾರತಕ್ಕೂ ತಟ್ಟಿದ ಬಿಸಿ

ಜನ್ಮ ದಿನಾಂಕ ತಿದ್ದುಪಡಿಗೆ ಆಧಾರ್ ಪರಿಗಣಿಸಲ್ಲ 10
ಪುತ್ತಿಗೆ ಮಠದ ಪರ್ಯಾಯ ಗೀತಾಮಯ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,186 ▼	21,462 ▼	₹63,800 (ಬೆಂಗಳೂರು) ▼	₹72,800 (ಬೆಂಗಳೂರು) ▼	83.13 ▲

ಶಿವಮೊಗ್ಗ ಉದ್ಯಾನಕ್ಕೆ ಅಲ್ಲಮ ಪ್ರಭು ಹೆಸರು • ಕಿತ್ತೂರಿಗೆ ವೀರರಾಣಿ ಚನ್ನಮ್ಮ ನಾಮಾಂಕಿತ

ಬಸವಣ್ಣ ಸಾಂಸ್ಕೃತಿಕ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹನ್ನೆರಡನೇ ಶತಮಾನದಲ್ಲಿ ಕಾಯಕ ಜೀವಿಗಳ ಚಳವಳಿಯ ಮೂಲಕ ಸಾಮಾಜಿಕ ಕ್ರಾಂತಿಯನ್ನೇ ನಡೆಸಿ, ವಚನಗಳ ಮೂಲಕ ಜಾಗೃತಿ ಮೂಡಿಸಿದ ಬಸವೇಶ್ವರರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ರಾಜ್ಯ ಸರ್ಕಾರ ಘೋಷಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ 'ಬಸವ ಪಥ'ಕ್ಕೆ ಅಗ್ರಸ್ಥಾನ ನೀಡಲು ಕಾಂಗ್ರೆಸ್ ನೇತೃತ್ವದ ಸರ್ಕಾರ ತೀರ್ಮಾನಿಸಿದೆ.

ಸಂಪುಟ ಸಭೆಯ ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು, 'ಬಸವಣ್ಣ ಅವರ ನೇತೃತ್ವದಲ್ಲಿ ಜಾತಿ ಭೇದ ಮತ್ತು ಲಿಂಗತಾರತಮ್ಯವಿಲ್ಲದ ಸಮಾಜವನ್ನು ರೂಪಿಸುವ ಕೆಲಸ ನಡೆಯಿತು. ಭಾರತದ ಸಂವಿಧಾನವೂ ಇದನ್ನೇ ಎತ್ತಿ ಹಿಡಿದಿದೆ. ಅಲ್ಲದೇ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ತಾತ್ವಿಕ ಮೌಲ್ಯಗಳನ್ನೂ ಬಸವಣ್ಣ ಪ್ರತಿಪಾದಿಸಿದ್ದರು. ಅವರು ವಿಶ್ವ ಶ್ರೇಷ್ಠ ಮೌಲ್ಯಗಳನ್ನು ಪ್ರತಿಪಾದಿಸಿದ್ದ ಮಹಾನ್ ವ್ಯಕ್ತಿ ಆಗಿರುವುದರಿಂದ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲು ತೀರ್ಮಾನಿಸಲಾಯಿತು. ಇದಕ್ಕಾಗಿ ನಾಡಿನ ಪ್ರಗತಿಪರರು, ಚಿಂತಕರು ಮತ್ತು ಮಠಾಧೀಶರು ಒತ್ತಡ ಹಾಕಿದ್ದರು' ಎಂದರು.

'ಲೋಕಸಭಾ ಚುನಾವಣೆ ಕಾರಣಕ್ಕೆ ಈ ಘೋಷಣೆ ಮಾಡಿಲ್ಲ. ನಮ್ಮ ದೇಶದ ಸಂವಿಧಾನದ ಆಶಯಗಳಿಗೆ ಅನುರೂಪವಾದ ಬಸವಣ್ಣ ಅವರ ಚಿಂತನೆಗಳು ಸಾಂಸ್ಕೃತಿಕ ನಾಯಕತ್ವಕ್ಕೆ ಸಮರ್ಥನೀಯ ನೆಲೆ ಒದಗಿಸಿವೆ' ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಈ ಘೋಷಣೆಯ ಬಳಿಕ ಬಸವಣ್ಣ ಅವರ ತತ್ವ ಆದರ್ಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಸಾರ ಮಾಡಲಾಗುವುದು. ಜಾತೀಯತೆ ತಾಂಡವವಾಡುತ್ತಿರುವ ಕಲುಷಿತ ವಾತಾವರಣದಲ್ಲಿ ಬಸವಣ್ಣ ಅವರ ತತ್ವಗಳು ಪ್ರೇರಣೆ ಆಗುವಂತಹ ವಾತಾವರಣ ನಿರ್ಮಿಸುವುದೇ ನಮ್ಮ ಉದ್ದೇಶ. ಅಲ್ಲದೇ, ₹600 ಕೋಟಿ ವೆಚ್ಚದಲ್ಲಿ ಅನುಭವ ಮಂಟಪ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಅದನ್ನು 2025ಕ್ಕೆ ಪೂರ್ಣಗೊಳಿಸಲಾಗುವುದು' ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಅಲ್ಲಮ ಪ್ರಭು ಉದ್ಯಾನ: ಶಿವಮೊಗ್ಗ ನಗರದ ಹಳೆ ಜೈಲು ಆವರಣದಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ ಪ್ರದೇಶವನ್ನು 'ಅಲ್ಲಮ ಪ್ರಭು ಉದ್ಯಾನವನ' ಎಂದು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ. ಅಲ್ಲಮಪ್ರಭು ಅದೇ ಜಿಲ್ಲೆಯ ಬಳ್ಳಿಗಾವಿಯಲ್ಲಿ ಜನಿಸಿದವರು. ಇವರು 12ನೇ ಶತಮಾನದ ಶಿವಶರಣ ಮತ್ತು ಅನುಭವ ಮಂಟಪದ ಮುಖ್ಯಸ್ಥರಾಗಿದ್ದರು. ಅವರ ನೆನಪು ಸದಾ ಉಳಿಯಲು ಉದ್ಯಾನಕ್ಕೆ ಅವರ ಹೆಸರಿಡಲು ತೀರ್ಮಾನಿಸಲಾಯಿತು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

11ನೇ ಪುಟ ನೋಡಿ

ಒಳಮೀಸಲು: ಕೇಂದ್ರಕ್ಕೆ ಶಿಫಾರಸು

ಪರಿಶಿಷ್ಟ ಜಾತಿಗಳ ವರ್ಗೀಕರಣ (ಒಳಮೀಸಲಾತಿ) ಕುರಿತು ಸಂವಿಧಾನದ ಅನುಚ್ಛೇದ 341ಕ್ಕೆ ತಿದ್ದುಪಡಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

'ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳಿಗೆ ಅನ್ಯಾಯವಾಗಬಾರದು. ಸದಾಶಿವ ಆಯೋಗದ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಿ, ಜಾರಿ ಮಾಡುತ್ತೇವೆ ಎಂದು ಚುನಾವಣೆ ಸಂದರ್ಭದಲ್ಲಿ ಮಾತು-ಕೊಟ್ಟಿದ್ದೆವು. ಆದರೆ, ಒಳಮೀಸಲಾತಿ ನಿಗದಿ ಮಾಡುವ ಅಧಿಕಾರ ರಾಜ್ಯಗಳಿಗೆ ಸಿಗಬೇಕಾದರೆ, ಸಂವಿಧಾನ ತಿದ್ದುಪಡಿ ಅನಿವಾರ್ಯ. ಆದ್ದರಿಂದ ಕೇಂದ್ರಕ್ಕೆ ಶಿಫಾರಸು ಮಾಡಲು ನಿರ್ಧರಿಸಿದ್ದೇವೆ' ಎಂದರು. ಭೋವಿ, ಬಂಜಾರ, ಕೊರಮ ಮತ್ತು ಕೊರಚ ಜಾತಿಗಳು ಹಾಗೂ ಅದರ ಪರ್ಯಾಯ ಜಾತಿಗಳು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿವೆ. ಈ ಸಮುದಾಯಗಳನ್ನು ಅದೇ ಪಟ್ಟಿಯಲ್ಲಿ ಉಳಿಸಿಕೊಳ್ಳಲು ಮತ್ತು ಕರ್ನಾಟಕ ರಾಜ್ಯಕ್ಕೆ ಸೇರಿದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಅವುಗಳನ್ನು ಮುಂದುವರಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಲು ಸಂಪುಟ ಅನುಮೋದನೆ ನೀಡಿತು ಎಂದರು.

11ನೇ ಪುಟ ನೋಡಿ

ಗೃಹ ಜ್ಯೋತಿ: ಹೆಚ್ಚುವರಿ 10 ಯೂನಿಟ್



'ಗೃಹ ಜ್ಯೋತಿ' ಯೋಜನೆಯಡಿ ತಿಂಗಳಿಗೆ 48 ಯೂನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಎಲ್‌ಟಿ 2 ಗ್ರಾಹಕರಿಗೆ ಹೆಚ್ಚುವರಿ ಶೇ 10 ಬದಲು ಹೆಚ್ಚುವರಿ 10 ಯೂನಿಟ್‌ಗಳನ್ನು ಅರ್ಹತಾ ಯೂನಿಟ್‌ಗಳನ್ನಾಗಿ ಒದಗಿಸಲು ನಿರ್ಧರಿಸಲಾಗಿದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಒಬ್ಬ ಗ್ರಾಹಕ 150 ಯೂನಿಟ್ ಬಳಸುತ್ತಿದ್ದರೆ, ಈಗ 15 ಯೂನಿಟ್ ಹೆಚ್ಚುವರಿಯಾಗಿ ಸಿಗುತ್ತಿದೆ. ಹೊಸ ತೀರ್ಮಾನದಿಂದ 5 ಯೂನಿಟ್ ಕಡಿತ ಆಗುತ್ತದೆ. ಆದರೆ, 48 ಯೂನಿಟ್‌ಗಿಂತ ಕಡಿಮೆ ಬಳಸುವ ಗ್ರಾಹಕರಿಗೆ 10 ಯೂನಿಟ್ ಕೊಡುವುದರಿಂದ ಅನುಕೂಲವಾಗುತ್ತದೆ ಎಂದರು. 30 ಯೂನಿಟ್‌ಗಳನ್ನು ಬಳಸುವ ಬಡ ಕುಟುಂಬಗಳಿಗೆ ಅರ್ಹತಾ ಯೂನಿಟ್‌ಗಳು ಕೇವಲ 3 ಆಗಿದೆ. ರಾಜ್ಯದಲ್ಲಿ 1.95 ಕೋಟಿ ಗೃಹ ಬಳಕೆಯ ಗ್ರಾಹಕರು ಸರಾಸರಿ 53 ಯೂನಿಟ್ ಬಳಕೆ ಮಾಡುತ್ತಾರೆ. ಬೆಸ್ಕಾಂನಲ್ಲಿ 69.73 ಲಕ್ಷ ಕುಟುಂಬಗಳು 48 ಯೂನಿಟ್‌ಗಿಂತ ಕಡಿಮೆ ಬಳಕೆ ಮಾಡುತ್ತಿದ್ದು, 10 ಯೂನಿಟ್‌ಗಳ ಹೆಚ್ಚಳದಿಂದಾಗಿ ₹33 ಕೋಟಿ ವೆಚ್ಚ ಆಗಲಿದೆ ಎಂದು ಹೇಳಿದರು.



ಫಲಪುಷ್ಪ ಪ್ರದರ್ಶನ

ಗಣರಾಜ್ಯೋತ್ಸವದ ಪ್ರಯುಕ್ತ ತೋಟಗಾರಿಕೆ ಇಲಾಖೆಯು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ 'ಬಸವಣ್ಣ ಮತ್ತು ವಚನ ಸಾಹಿತ್ಯ'ವನ್ನು ಆಧರಿಸಿ ಹಮ್ಮಿಕೊಂಡಿರುವ 215ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಚಾಲನೆ ನೀಡಿದರು. ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

3A

ಕೋಚಿಂಗ್: ಮಾರ್ಗಸೂಚಿ ಪ್ರಕಟ



ನವದೆಹಲಿ (ಪಿಟಿಐ): ಕೋಚಿಂಗ್ ಕೇಂದ್ರಗಳು 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವಂತಿಲ್ಲ ಮತ್ತು ಉತ್ತಮ ಅಂಕಗಳು ಅಥವಾ ರ‍್ಯಾಂಕ್ ಕುರಿತು ತಪ್ಪು ದಾರಿಗೆಳೆಯುವಂತಹ ಭರವಸೆಗಳನ್ನು ನೀಡುವಂತಿಲ್ಲ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಹೆಚ್ಚುತ್ತಿರುವ ಖಾಸಗಿ ಕೋಚಿಂಗ್ ಕೇಂದ್ರಗಳ ಅನಿಯಂತ್ರಿತ ಬೆಳವಣಿಗೆಗೆ ಕಡಿವಾಣ ಹಾಕುವುದಕ್ಕಾಗಿ ಶಿಕ್ಷಣ ಸಚಿವಾಲಯ ಗುರುವಾರ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಈ ಮೂಲಕ ಕೋಚಿಂಗ್ ಕೇಂದ್ರಗಳನ್ನು ಕಾನೂನಿನ ಚೌಕಟ್ಟಿನ ಪರಿಮಿತಿಯೊಳಗೆ ತಂದಿದೆ.

ಕೋಚಿಂಗ್ ಕೇಂದ್ರಗಳಲ್ಲಿನ ಸೌಲಭ್ಯಗಳ ಕೊರತೆ, ಅವು ಅಳವಡಿಸಿಕೊಂಡಿರುವ ಬೋಧನಾ ವಿಧಾನ, ಹೆಚ್ಚುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ, ಅಗ್ನಿ ಅವಘಡಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಹಲವು ದೂರುಗಳು ಬಂದಿದ್ದವು. ಇದರ ಬೆನ್ನಲ್ಲೇ ಸಚಿವಾಲಯ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದೆ.

11ನೇ ಪುಟ ನೋಡಿ

ಫೆ.16ರಂದು ರಾಜ್ಯ ಬಜೆಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಬಜೆಟ್ ಫೆಬ್ರುವರಿ 16ರಂದು ಮಂಡನೆಯಾಗಲಿದೆ.

ಫೆಬ್ರುವರಿ ಅಂತ್ಯ ಅಥವಾ ಮಾರ್ಚ್ ಮೊದಲ ವಾರದಲ್ಲಿ ಲೋಕಸಭೆ ಚುನಾವಣೆ ಘೋಷಣೆಯಾಗುವ ಸಂಭವ ಇದೆ. ಹೀಗಾಗಿ, ಫೆಬ್ರುವರಿಯಲ್ಲೇ ಬಜೆಟ್ ಮಂಡನೆಯಾಗಲಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಫೆ.12ರಿಂದ 23ರವರೆಗೆ ವಿಧಾನಮಂಡಲ ಅಧಿವೇಶನ ನಡೆಸಲು ತೀರ್ಮಾನಿಸಲಾಗಿದೆ. ಮೊದಲ ದಿನ ಉಭಯ ಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಭಾಷಣ ಮಾಡಲಿದ್ದಾರೆ.

ಕಾರಂತ ಬಡಾವಣೆ: ಅಧಿಸೂಚನೆ ಹೊರಡಿಸದಂತೆ ತಡೆ

ಬೆಂಗಳೂರು: 'ಶಿವರಾಮ ಕಾರಂತ ಬಡಾವಣೆಯ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಕೋರ್ಟ್ ಅನುಮತಿ ಇಲ್ಲದೆ ಅಧಿಸೂಚನೆ ಹೊರಡಿಸಬಾರದು' ಎಂದು ಹೈಕೋರ್ಟ್ ವಿಭಾಗೀಯ ನ್ಯಾಯ ಪೀಠವು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಬಡಾವಣೆ ನಿರ್ಮಾಣದ ಕುರಿತಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆಯೂ ತಾಕೀತು ಮಾಡಿದೆ.

2

ಚಿನಕುರಳಿ

ಪ್ರಕಾಶ್ ಶೆಟ್ಟಿ



ದೇಶದ ವಿವಿಧ ನದಿಗಳ ನೀರಿನಿಂದ ವಿಗ್ರಹಕ್ಕೆ ಪವಿತ್ರಸ್ನಾನ

ಅಯೋಧ್ಯೆ: ಗರ್ಭಗುಡಿಯಲ್ಲಿ ರಾಮಲಲ್ಲಾ ವಿರಾಜಮಾನ

ಪ್ರಜಾವಾಣಿ ವಾರ್ತೆ

ಲಖನೌ: ವೇದಘೋಷಗಳ ನಡುವೆ ರಾಮಮಂದಿರದ ಗರ್ಭಗುಡಿಯ ಪೀಠದ ಮೇಲೆ ರಾಮಲಲ್ಲಾ ವಿಗ್ರಹವನ್ನು ಗುರುವಾರ ವಿರಾಜಮಾನ ಮಾಡಲಾಯಿತು.

ಪ್ರಾಣ ಪ್ರತಿಷ್ಠಾಪನೆ ಮಹೋತ್ಸವದ ಪೂರ್ವಭಾವಿ ಆಚರಣೆಗಳ ಭಾಗವಾಗಿ ವಿಗ್ರಹವನ್ನು ವಿರಾಜಮಾನ ಮಾಡಲಾಯಿತು.

ಇದಕ್ಕೂ ಮೊದಲು, ದೇಶದ ನದಿಗಳ ನೀರಿನಿಂದ ವಿಗ್ರಹಕ್ಕೆ ಪವಿತ್ರ ಸ್ನಾನ ಮಾಡಿಸಲಾಯಿತು. ಜೊತೆಗೆ, ಔಷಧೀಯ ಗುಣಗಳಿರುವ ಸಸ್ಯಗಳನ್ನು ನೆನೆಸಿರುವ ನೀರಿನಿಂದ ವಿಗ್ರಹವನ್ನು ಸ್ವಚ್ಛಗೊಳಿಸಲಾಯಿತು ಎಂದು ಮಂದಿರದ ಅರ್ಚಕರೊಬ್ಬರು ತಿಳಿಸಿದರು.

ಗುರುವಾರ ಬೆಳಿಗ್ಗೆಯೇ ರಾಮಮಂದಿರದ ಗರ್ಭಗುಡಿಯಲ್ಲಿ 'ಗಣೇಶ ಪೂಜೆ' ಮತ್ತು 'ವರುಣ ಪೂಜೆ'ಯನ್ನೂ ನೆರವೇರಿಸಲಾಯಿತು. 150 ಕೆ.ಜಿ ತೂಕದ ಬಾಲರಾಮನ ವಿಗ್ರಹವನ್ನು ಟ್ರಕ್ ಮೂಲಕ ಬುಧವಾರ ರಾತ್ರಿಯೇ ಮಂದಿರಕ್ಕೆ ತರಲಾಗಿತ್ತು.

ಪೂರ್ವಭಾವಿ ವಿಧಿವಿಧಾನಗಳ ಭಾಗವಾಗಿ, ಪ್ರಮುಖ ತೀರ್ಥಕ್ಷೇತ್ರಗಳನ್ನು ಆರಾಧಿಸುವ 'ತೀರ್ಥ ಪೂಜೆ'ಯನ್ನು ಅರ್ಚಕರು ನೆರವೇರಿಸಿದರು.

21ರಂದೇ ಮೋದಿ ಅಯೋಧ್ಯೆಗೆ: ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ 'ಮುಖ್ಯ ಯಜಮಾನ'ರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು ಸಮಾರಂಭಕ್ಕೆ ಒಂದು ದಿನ ಬಾಕಿ ಇರುವಂತೆ ಭಾನುವಾರವೇ ಅಯೋಧ್ಯೆಯನ್ನು ತಲುಪಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸೋಮವಾರ ಮಧ್ಯಾಹ್ನ 12:30ರಿಂದ ಪ್ರಾಣ ಪ್ರತಿಷ್ಠಾಪನೆಯ ವಿಧಿಗಳು ಆರಂಭವಾಗಲಿವೆ.

9ನೇ ಪುಟ ನೋಡಿ

22ರಂದು ಕೇಂದ್ರದಿಂದ ಅರ್ಧದಿನ ರಜೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಎಲ್ಲಾ ಕೇಂದ್ರ ಸರ್ಕಾರಿ ಕಚೇರಿಗಳಿಗೆ ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಜನವರಿ 22ರಂದು ಅರ್ಧದಿನ ರಜೆ ನೀಡುವುದಾಗಿ ಕೇಂದ್ರ ಸರ್ಕಾರವು ಗುರುವಾರ ಘೋಷಿಸಿದೆ.

ಪ್ರಾಣ ಪ್ರತಿಷ್ಠಾಪನೆ ಸಮಾರಂಭವನ್ನು ದೇಶದಾದ್ಯಂತ ಆಚರಿಸಲಾಗುತ್ತದೆ. ಸರ್ಕಾರಿ ನೌಕರರೂ ಸಂಭ್ರಮದಲ್ಲಿ ಭಾಗಿಯಾಗಲಿ ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಎಲ್ಲಾ ಕಚೇರಿಗಳು, ಸಂಸ್ಥೆಗಳು, ಕೈಗಾರಿಕೆಗಳನ್ನು ಸೋಮವಾರ ಮಧ್ಯಾಹ್ನ 2:30ರ ವರೆಗೆ ಮುಚ್ಚಲಾಗುವುದು ಎಂದು ಸಿಬ್ಬಂದಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ಸಮಾರಂಭ ದಿನದಂದು ಅರ್ಧದಿನ ರಜೆ ನೀಡಬೇಕೆಂಬುದು ಸಾರ್ವಜನಿಕರ ಬೇಡಿಕೆಯಾಗಿತ್ತು. ಸಾರ್ವಜನಿಕರ ಭಾವನೆಗಳಿಗೆ ಸ್ಪಂದಿಸಿ ಈ ನಿರ್ಧಾರ ತೆಗೆದು-ಕೊಳ್ಳಲಾಗಿದೆ' ಎಂದು ಕೇಂದ್ರ ಸಿಬ್ಬಂದಿ ರಾಜ್ಯ ಖಾತೆ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಮಂಜುನಾಥ್ ವಿರುದ್ಧ ಕ್ರಮಕ್ಕೆ ಆದೇಶ

ಪ್ರಜಾವಾಣಿ ವಾರ್ತೆ


ಕೊತ್ತೂರು ಮಂಜುನಾಥ್



ಸುಳ್ಳು ಜಾತಿ ಪ್ರಮಾಣ ಪತ್ರ

ಬೆಂಗಳೂರು: 'ಪರಿಶಿಷ್ಟ ಜಾತಿಗೆ ಮೀಸಲಾದ ಮುಳಬಾಗಿಲು ಕ್ಷೇತ್ರಕ್ಕೆ 2013ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಆಯ್ಕೆಯಾಗಿದ್ದ ಅಂದಿನ ಶಾಸಕ ಜಿ.ಮಂಜುನಾಥ್ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಜಾತಿ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಕೋಲಾರ ಜಿಲ್ಲಾಧಿಕಾರಿ ನೇತೃತ್ವದ ಜಾತಿ ಪರಿಶೀಲನಾ ಸಮಿತಿ ಕೈಗೊಂಡಿದ್ದ ನಿರ್ಣಯವನ್ನು ಪ್ರಶ್ನಿಸಿ ಸದ್ಯ ಕೋಲಾರ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಕಾಂಗ್ರೆಸ್ ಪಕ್ಷದ ಜಿ.ಮಂಜುನಾಥ್ (ಕೊತ್ತೂರು ಮಂಜುನಾಥ್) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತ ತೀರ್ಪು ಪ್ರಕಟಿಸಿದೆ.

'ಪರಿಶಿಷ್ಟ ಜಾತಿಗೆ ಮೀಸಲಿಟ್ಟಿದ್ದ ಕ್ಷೇತ್ರವನ್ನು ಕಸಿದುಕೊಳ್ಳುವ ಮೂಲಕ ಮಂಜುನಾಥ್ ಪರಿಶಿಷ್ಟ ಜಾತಿಗಳ ವರ್ಗಕ್ಕೆ ವಂಚಿಸಿದ್ದಾರೆ. ಇದು ಸಂವಿಧಾನಕ್ಕೆ ಎಸಗಿದ ಮೋಸ. ಹೀಗಾಗಿ, ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯ ವರದಿಯಲ್ಲಿ ಹೈಕೋರ್ಟ್ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲ' ಎಂದು ತಿಳಿಸಿದೆ. ಅಂತೆಯೇ, 'ಮಂಜುನಾಥ್ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬುದನ್ನು ಸರ್ಕಾರವೇ ನಿರ್ಧರಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: ಜಿ.ಮಂಜುನಾಥ್ 2013ರಲ್ಲಿ ಮುಳಬಾಗಿಲು ಮೀಸಲು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದರು. ಚುನಾವಣಾ ಆಯೋಗಕ್ಕೆ ಸಲ್ಲಿಸಲಾದ ಪ್ರಮಾಣ ಪತ್ರದಲ್ಲಿ, 'ನಾನು ಬುಡಗ ಜಂಗಮ ಜಾತಿಗೆ ಸೇರಿದ್ದೇನೆ' ಎಂದು ಸಾರಿಕೊಂಡಿದ್ದರು. ಜೆಡಿಎಸ್‌ನ ಪರಾಜಿತ ಅಭ್ಯರ್ಥಿ ಮುನಿನಂಜಪ್ಪ ಇವರ ಜಾತಿ ಪ್ರಮಾಣದ ಸಿಂಧುತ್ವ ಪ್ರಶ್ನಿಸಿದ್ದರು. ಈ ಪ್ರಕರಣ ತಹಶೀಲ್ದಾರ್, ಜಿಲ್ಲಾಧಿಕಾರಿ, ಸಿವಿಲ್ ನ್ಯಾಯಾಲಯ ಮತ್ತು ಹೈಕೋರ್ಟ್‌ನಲ್ಲಿ ವಿಚಾರಣೆಗೆ ಒಳಪಟ್ಟಿತ್ತು. ಅಂತಿಮವಾಗಿ ಹೈಕೋರ್ಟ್ ಮಂಜುನಾಥ್ ಆಯ್ಕೆಯನ್ನು 2018ರ ಏಪ್ರಿಲ್‌ನಲ್ಲಿ ಅಸಿಂಧು ಗೊಳಿಸಿ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಮಂಜುನಾಥ್ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಈ ಮೇಲ್ಮನವಿ ವಜಾಗೊಳಿಸಿದ್ದ ಸುಪ್ರೀಂ ಕೋರ್ಟ್, ಮಂಜುನಾಥ್ ಅವರ ಜಾತಿ ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿಗೆ ನಿರ್ದೇಶಿಸಿತ್ತು.

11ನೇ ಪುಟ ನೋಡಿ

ಶಿವರಾಮ ಕಾರಂತ ಬಡಾವಣೆ; ಹೈಕೋರ್ಟ್ ವಿಭಾಗೀಯ ಪೀಠ ಆದೇಶ

ಅಧಿಸೂಚನೆ ಹೊರಡಿಸದಂತೆ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಶಿವರಾಮ ಕಾರಂತ ಬಡಾವಣೆಯ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಕೋರ್ಟ್ ಅನುಮತಿ ಇಲ್ಲದೆ ಅಧಿಸೂಚನೆ ಹೊರಡಿಸಬಾರದು' ಎಂದು ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ. ಬಡಾವಣೆ ನಿರ್ಮಾಣದ ಕುರಿತಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆಯೂ ತಾಕೀತು ಮಾಡಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮತ್ತು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ಪ್ರಕರಣದ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಬಡಾವಣೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ದೂರುಗಳು ಬಾಕಿ ಇವೆ. ಹಲವರು ಹಕ್ಕು ಮಂಡಿಸಿದ್ದಾರೆ. ಬಡಾವಣೆ ನಿರ್ಮಾಣ ಕಾಮಗಾರಿ ಮುಂದುವರಿಸಬಹುದು. ಆದರೆ, ಹಂಚಿಕೆ ಮಾಡಿದರೆ ಅರ್ಜಿದಾರರ ಹಕ್ಕುಗಳನ್ನು ಮೊಟಕು ಮಾಡಿದಂತಾಗುತ್ತದೆ. ಆದ್ದರಿಂದ, ನಿವೇಶನ ಹಂಚಿಕೆಗೆ ಅವಕಾಶ ನೀಡಬಾರದು' ಎಂದು ಮನವಿ ಮಾಡಿದರು.

ನಿರ್ಬಂಧ: 'ಬಡಾವಣೆಯ ಸಮಸ್ಯೆಗಳನ್ನು ಪರಿಹರಿಸದೇ ಬಿಡಿಎ ವತಿಯಿಂದ ನಿವೇಶನ ಹಂಚಿಕೆ ಮಾಡಲಾಗುತ್ತಿದೆ' ಎಂಬ ಅರ್ಜಿದಾರರ ಆರೋಪಗಳನ್ನು ಮಾನ್ಯ ಮಾಡಿದ ನ್ಯಾಯಪೀಠ, ನಿವೇಶನ ಹಂಚಿಕೆಗೆ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸದಂತೆ ನಿರ್ಬಂಧ ವಿಧಿಸಿತು.

'ಕೀಲಿ ಕೈ ಕೊಟ್ಟಿಲ್ಲ, ಸಮಿತಿ ಬಳಿ ಇದೆ'

ಬಿಡಿಎ ಪರ ವಕೀಲರು, 'ಶಿವರಾಮ ಕಾರಂತ ಬಡಾವಣೆಯ ದಾಖಲೆಗಳನ್ನು ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ನೇತೃತ್ವದ ಸಮಿತಿ ತನ್ನ ಬಳಿಯೇ ಇರಿಸಿಕೊಂಡಿದೆ. ಸುಪ್ರೀಂ ಕೋರ್ಟ್‌ನ ಆದೇಶದಂತೆ ಸಮಿತಿಯು ದಾಖಲೆಗಳನ್ನು ಬಿಡಿಎಗೆ ಹಸ್ತಾಂತರ ಮಾಡಿಲ್ಲ. ದಾಖಲೆಗಳಿರುವ ಕೊಠಡಿಯ ಬೀಗದ ಕೀಲಿ ಕೈ ಸಮಿತಿಯ ಬಳಿ ಇದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಆ ಕೊಠಡಿಗೆ ಮತ್ತೊಂದು ಬೀಗ ಹಾಕಿ ಅದನ್ನು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ನೀಡಿ' ಎಂದು ಬಿಡಿಎಗೆ ಸೂಚಿಸಿತು.

ಬಿಡಿಎ ಪರ ಹಾಜರಾಗಿದ್ದ ನಿಯೋಜಿತ ವಕೀಲ ಶಿವಪ್ರಸಾದ್ ಶಾಂತನಗೌಡರ್ ಅವರು, 'ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಲ್ಲಾ ದಾಖಲೆಗಳನ್ನು ಸಲ್ಲಿಸಿ ಎಂದು ಸಮಿತಿಗೆ ಬಿಡಿಎ ಸೂಚನೆ ನೀಡಿತ್ತು. ಆದರೆ, ಸಮಿತಿಯು ದಾಖಲೆಗಳನ್ನು ಇನ್ನೂ ಹಸ್ತಾಂತರ ಮಾಡಿಲ್ಲ' ಎಂದು ತಿಳಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಅಧಿಸೂಚನೆ ಹೊರಡಿಸಬಾರದು ಎಂದು ಬಿಡಿಎ ಮತ್ತು ಸರ್ಕಾರಕ್ಕೆ ಆದೇಶಿಸಿತು. ಆದರೆ, ಬಡಾವಣೆ ಅಭಿವೃದ್ಧಿ ಕಾಮಗಾರಿ ಮುಂದುವರಿಸಲು ಅನುಮತಿ ನೀಡಿದ್ದು, 'ಇದು ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಅಕ್ರಮ ಜಾಹೀರಾತು, ಫ್ಲೆಕ್ಸ್ ಹಾವಳಿ

ದಂಡ ವಿಧಿಸಲು, ದೂರು ದಾಖಲಿಸಲು ಸೂಚನೆ: ಹೈಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಅನುಮತಿ ಪಡೆಯದೆ ಮತ್ತು ಶುಲ್ಕ ಪಾವತಿಸದೇ ಅಕ್ರಮ ಜಾಹೀರಾತು ಅಥವಾ ಹೋರ್ಡಿಂಗ್‌ಗಳನ್ನು ಅಳವಡಿಸಿದ್ದರೆ ತಪ್ಪಿತಸ್ಥ ವ್ಯಕ್ತಿಗಳು ಮತ್ತು ಸಂಸ್ಥೆಗಳ ವಿರುದ್ಧ ದುಬಾರಿ ದಂಡ ವಿಧಿಸಲಾಗುವುದು ಹಾಗೂ ವ್ಯಾಪ್ತಿ ಪ್ರದೇಶದ ಪೊಲೀಸರಿಗೆ ಪ್ರಕರಣ ದಾಖಲಿಸಲು ಸೂಚಿಸಲಾಗುವುದು' ಎಂದು ಹೈಕೋರ್ಟ್ ಖಡಕ್ ಎಚ್ಚರಿಕೆ ನೀಡಿದೆ.

'ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ತಡೆಯಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಮಾಯಿಗೇಗೌಡ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ರವಿವರ್ಮ ಕುಮಾರ್ ಅವರು, 'ನ್ಯಾಯಾಲಯದ ಹಲವು ಆದೇಶಗಳ ಹೊರತಾಗಿಯೂ ಅಕ್ರಮ ಜಾಹೀರಾತುಗಳ ಹಾವಳಿ ತಪ್ಪಿಲ್ಲ. ಸಂಚಾರ ದಟ್ಟಣೆ ಇರುವ ಪ್ರದೇಶಗಳಲ್ಲಿ ಈ ಫಲಕಗಳನ್ನು ಅಳವಡಿಸಲಾಗಿದ್ದು, ಇದು ಸಾರ್ವಜನಿಕರಿಗೆ ಅತೀವ ಸಮಸ್ಯೆಯಾಗಿದೆ' ಎಂದು ನ್ಯಾಯಪೀಠದ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ. ಅಕ್ರಮ ಜಾಹೀರಾತು ಅಳವಡಿಸಿರುವ ಮಾಹಿತಿಯನ್ನು ವ್ಯಾಪ್ತಿ ಹೊಂದಿದ ಪೊಲೀಸರಿಗೆ ತಿಳಿಸಿರುವುದಕ್ಕೆ ಅವರು ಕೈಗೊಂಡಿರುವ ಕ್ರಮವನ್ನು ತಿಳಿಸಬೇಕು' ಎಂದಿರುವ ನ್ಯಾಯಪೀಠ, 'ವ್ಯಾಪ್ತಿಯಲ್ಲಿನ ಅಕ್ರಮ ಹೋರ್ಡಿಂಗ್ ಮತ್ತು ಜಾಹೀರಾತುಗಳ ತೆರವಿಗೆ ಮತ್ತು ಹೊಸದಾಗಿ ಜಾಹೀರಾತು ಫಲಕಗಳ ಅಳವಡಿಕೆಗೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಕ್ರಮಗಳ ಕುರಿತಾದ ಸಮಗ್ರ ವರದಿ ಸಲ್ಲಿಸಿ' ಎಂದು ಬಿಬಿಎಂಪಿಗೆ ಆದೇಶಿಸಿದೆ.

'ಭ್ರೂಣ ಹತ್ಯೆ ತಡೆಗೆ ಕಾರ್ಯಪಡೆ ರಚನೆ'

ಪ್ರಜಾವಾಣಿ ವಾರ್ತೆ



ದಿನೇಶ್ ಗುಂಡೂರಾವ್

ಬೆಂಗಳೂರು: 'ಭ್ರೂಣ ಹತ್ಯೆ ತಡೆಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯಪಡೆ ರಚಿಸಲಾಗುವುದು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಗರ್ಭಪೂರ್ವ ಲಿಂಗ ಆಯ್ಕೆ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ ಅಡಿ (ಪಿಸಿಪಿಎನ್‌ಡಿಟಿ) ರಚಿಸಲಾಗಿದ್ದ ಮೇಲ್ವಿಚಾರಣಾ ಸಮಿತಿಯ ಜೊತೆಗೆ ನಗರದಲ್ಲಿ ಗುರುವಾರ ಸಭೆ ನಡೆಸಿದ ಅವರು, ಭ್ರೂಣ ಹತ್ಯೆ ತಡೆಗೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸಮಿತಿಯ ಸದಸ್ಯರ ಜತೆಗೆ ಚರ್ಚಿಸಿದರು. ಶಾಸಕಿಯರಾದ ರೂಪಕಲಾ, ನಯನಾ ಮೋಟಮ್ಮ, ಲತಾ ಮಲ್ಲಿಕಾರ್ಜುನ್ ಅವರೂ ಅಗತ್ಯ ಸಲಹೆಗಳನ್ನು ನೀಡಿದರು. ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ವೈದ್ಯಕೀಯ ತಜ್ಞರು ಪಾಲ್ಗೊಂಡಿದ್ದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಆರೋಗ್ಯ ಇಲಾಖೆಯ ಸಕ್ಷಮ ಪ್ರಾಧಿಕಾರಕ್ಕೆ ಎಸಿಪಿ ಮಟ್ಟದ ಅಧಿಕಾರಿ ಹಾಗೂ ಸಿಬ್ಬಂದಿ ನಿಯೋಜಿಸಲು ಗೃಹ ಇಲಾಖೆಗೆ ಮನವಿ ಸಲ್ಲಿಸಲಾಗುವುದು. ಪ್ರತಿ ಹಂತದಲ್ಲಿ ಮೇಲ್ವಿಚಾರಣೆ ನಡೆಸುವುದರ ಜೊತೆಗೆ ಹೆಣ್ಣುಮಕ್ಕಳು ಸಮಾಜಕ್ಕೆ ಎಷ್ಟು ಮುಖ್ಯ ಎಂಬುದರ ಬಗ್ಗೆ ದೊಡ್ಡ ಮಟ್ಟದಲ್ಲಿ ಜಾಗೃತಿ ಮೂಡಿಸಲಾಗುವುದು' ಎಂದರು.

'ಭ್ರೂಣ ಹತ್ಯೆ ತಡೆಗೆ ರಾಜ್ಯಮಟ್ಟದಲ್ಲಿ ಆರೋಗ್ಯ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲು ನಿರ್ಧರಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಆರೋಗ್ಯ ಇಲಾಖೆ ಅಧಿಕಾರಿಗಳನ್ನೊಳಗೊಂಡ ಕಾರ್ಯಪಡೆ ರಚಿಸಲಾಗುವುದು. ಈ ಕಾರ್ಯಪಡೆಗಳು ಭ್ರೂಣ ಹತ್ಯೆ ಪ್ರಕರಣಗಳ ವಿಚಾರದಲ್ಲಿ ಪಿಸಿಪಿಎನ್‌ಡಿಟಿ ಕಾಯ್ದೆ ಅಡಿ ಕಾರ್ಯನಿರ್ವಹಿಸಿ, ಹೆಚ್ಚು ನಿಗಾ ವಹಿಸಲಿವೆ' ಎಂದು ಹೇಳಿದರು.

'ಭ್ರೂಣ ಹತ್ಯೆ ನಡೆಸುತ್ತಿರುವವರ ಮೇಲೆ ಕಠಿಣ ಕ್ರಮಗಳು ಆಗಬೇಕು. ಈಗ ಕಾಯ್ದೆಯಡಿ ತಪ್ಪಿತಸ್ಥರಿಗೆ ₹ 10 ಸಾವಿರ ದಂಡ ಹಾಗೂ 3 ವರ್ಷ ಜೈಲು ಶಿಕ್ಷೆಯಿದೆ. ಶಿಕ್ಷೆ ಪ್ರಮಾಣ ಹೆಚ್ಚಿಸಲು ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆಯೂ ಚರ್ಚಿಸಲಾಗಿದೆ. ₹ 5 ಲಕ್ಷದವರೆಗೆ ದಂಡ ವಿಧಿಸಿ, 5 ವರ್ಷ ಜೈಲು ಶಿಕ್ಷೆ ವಿಧಿಸಬೇಕೆಂಬ ಸಲಹೆಗಳು ಬಂದಿದ್ದು, ಈ ಪ್ರಕರಣಗಳಲ್ಲಿ ಜಾಮೀನು ಸಿಗಬಾರದು. ಈ ಬಗ್ಗೆ ಮುಂದಿನ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಬೆಂಗಳೂರು ರೇಸ್

ಎಲ್ವೆನಾರ್ ಗೆಲ್ಲುವ ನಿರೀಕ್ಷೆ

ನರಸಿಂಹರಾಜ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಲ್ವೆನಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಹೆಡ್ ಆಫ್ ದಿ ಕರ್ವ್ 1, ರಾಂಕ್ವೆಲಿನೊ 5, ಲಾ ಮ್ಯಾಕ್ವಿನ್ 3
2ನೇ ರೇಸ್: ದಿವಿಸ್ಪರ್‌ಕ್ವೈಯ್ಟ್ಲಿ 6, ಸಿಂಗ್‌ಸಾಬ್ 2, ಪೆಲೂಚೆ 1
3ನೇ ರೇಸ್: ಅರ್ಡಕನ್ 4, ಕ್ಯಾಸ್ಟನೆಡ 2, ರಷಿಯನ್ ರೊಮಾನ್ಸ್ 7
4ನೇ ರೇಸ್: ಟ್ರಿಪಿಟಾಕ 5, ಸೋಲೊ ಪ್ರಿನ್ಸ್ 4, ಕ್ಲಾಸಿಕ್ ಚಾರ್ಮ್ 6
5ನೇ ರೇಸ್: ಇನ್ ದೈ ಲೈಟ್ 2, ರಿವರ್ ಆಫ್ ಗೋಲ್ಡ್ 6. ಸ್ಟೆಲ್ಲಾಂಟಿಸ್ 1
6ನೇ ರೇಸ್: ಎಲ್ವೆನಾರ್ 7, ಇನ್‌ಯುವಿಬಿಲೀವ್ 2, ಪೆಯೊ 1
7ನೇ ರೇಸ್: ರೈನ್‌ಬೊ ಡ್ರೀಮರ್ 2, ಕ್ರಾಸ್‌ವಾಟರ್ 1, ಬೋಲ್ಡ್ ಆಕ್ಟ್ 3

ಉತ್ತಮ ಬೆಟ್: ಇನ್ ದೈ ಲೈಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಒಳಮೀಸಲಾತಿ ಕೊಡದಿರಲು ಕಾಂಗ್ರೆಸ್ ನಾಟಕ: ಕಾರಜೋಳ

ಬೆಂಗಳೂರು: ಒಳ ಮೀಸಲಾತಿ ಜಾರಿಗೊಳಿಸಲು ಇಚ್ಛೆ ಇರದ ರಾಜ್ಯದ ಕಾಂಗ್ರೆಸ್ ಸರ್ಕಾರ ನಾಟಕ ಮಾಡುತ್ತಿದೆ ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ಟೀಕಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೊದಲ ಸಂಪುಟ ಸಭೆಯಲ್ಲೇ ಮೀಸಲಾತಿಯ ಅನ್ಯಾಯ ಸರಿಪಡಿಸಲಾಗುವುದು ಎಂದು ಚುನಾವಣೆ ಸಮಯದಲ್ಲಿ ಭರವಸೆ ನೀಡಿದ್ದರು. ಅಧಿಕಾರಕ್ಕೆ ಬಂದ ನಂತರ ವರಸೆ ಬದಲಾಯಿಸಿದರು. ಅಧಿಕಾರಕ್ಕೆ ಬಂದ ಎಂಟು ತಿಂಗಳ ಬಳಿಕ, ಲೋಕಸಭಾ ಚುನಾವಣೆಯಲ್ಲಿ ಸಮುದಾಯಗಳ ದಾರಿ ತಪ್ಪಿಸಲು 341ನೇ ವಿಧಿ ತಿದ್ದುಪಡಿಗೆ ಕೇಂದ್ರಕ್ಕೆ ಶಿಫಾರಸು ಮಾಡುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ದೂರಿದರು.

ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿ ಇದ್ದಾಗ 2012ರಲ್ಲಿ ಕೇಂದ್ರಕ್ಕೆ ಪತ್ರ ಬರೆಯಲಾಗಿತ್ತು. ನಂತರ 2020ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ತಿದ್ದುಪಡಿ ಅಗತ್ಯವೇ ಇಲ್ಲ. ಒಳ ಮೀಸಲಾತಿ ನೀಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಹೆಚ್ಚುವರಿ ಸೇರಿಸಲು ಅಥವಾ ಇರುವ ಜಾತಿಗಳನ್ನು ತೆಗೆಯಲು ಅವಕಾಶ ಇಲ್ಲ ಎಂದು ನ್ಯಾಯಮೂರ್ತಿ ಅರುಣ್ ಕುಮಾರ್ ಮಿಶ್ರಾ ತೀರ್ಪಿನಲ್ಲಿ ಹೇಳಿದ್ದರು. ಹಾಗಿದ್ದರೂ, ರಾಜ್ಯ ಸರ್ಕಾರ ರಾಜಕೀಯ ಮಾಡುತ್ತಿದೆ ಎಂದು ಟೀಕಿಸಿದರು.

ಗಣರಾಜ್ಯೋತ್ಸವ: ಸಿದ್ಧತೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಮಟ್ಟದ ಗಣರಾಜ್ಯೋತ್ಸವ ದಿನಾಚರಣೆಗಾಗಿ ನಗರದ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

2024ನೇ ಸಾಲಿನ ಗಣರಾಜ್ಯೋತ್ಸವ ದಿನಾಚರಣೆ ಸಂಬಂಧ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅತಿ ಗಣ್ಯರು, ಗಣ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ನಿಗದಿಪಡಿಸಿದ ದ್ವಾರದಲ್ಲಿ ಬರಬೇಕು. ವಾಹನಗಳ ಪಾರ್ಕಿಂಗ್ ಸ್ಥಳ ವಿಚಾರವಾಗಿ ಯಾವುದೇ ಲೋಪಗಳಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

ಕವಾಯತು ಪ್ರದರ್ಶನಕ್ಕೆ ಅಗತ್ಯ ಏರ್ಪಾಡು ಮಾಡಿಕೊಂಡು ಪೊಲೀಸ್ ಇಲಾಖೆಯ ಶಿಷ್ಟಾಚಾರದಂತೆ ಕ್ರಮಗಳನ್ನು ಕೈಗೊಳ್ಳಬೇಕು. ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಸೂಚಿಸಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ್, ವಲಯ ಆಯುಕ್ತೆ ಸ್ನೇಹಲ್, ಉಪ ಆಯುಕ್ತ ಮಂಜುನಾಥಸ್ವಾಮಿ ಹಾಜರಿದ್ದರು.

ಶಿಕ್ಷಕರ ಕ್ಷೇತ್ರ: ಎ.ಪಿ.ರಂಗನಾಥ್ ಮೈತ್ರಿ ಅಭ್ಯರ್ಥಿ?

ಬೆಂಗಳೂರು: ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆಗೆ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯಾಗಿ ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ್ ಅವರು ಕಣಕ್ಕೆ ಇಳಿಯಲಿದ್ದಾರೆ ಎಂದು ಜೆಡಿಎಸ್ ಮುಖಂಡ ಎಚ್.ಎಂ.ರಮೇಶ್ ಗೌಡ ಹೇಳಿದರು.

ಜೆಪಿ ಭವನದಲ್ಲಿ ಗುರುವಾರ ನಡೆದ ಬೆಂಗಳೂರು ಮಹಾನಗರ ಜನತಾದಳ (ಜಾತ್ಯತೀತ) ಪಕ್ಷದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

‘ಮಿತ್ರಪಕ್ಷವಾದ ಬಿಜೆಪಿ ಕಾರ್ಯಕರ್ತರು, ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಕಾಂಗ್ರೆಸ್ ಆಡಳಿತಕ್ಕೆ ಶಿಕ್ಷಕರು ರೋಸಿ ಹೋಗಿದ್ದಾರೆ. ಶಿಕ್ಷಣ ಹಾಗೂ ಶಿಕ್ಷಕರ ಬಗ್ಗೆ ಸರ್ಕಾರದ ಅಸಡ್ಡೆ ಅಪಾಯಕಾರಿಯಾಗಿದೆ. ಈ ವಿಷಯಗಳನ್ನು ಶಿಕ್ಷಕರ ಗಮನಕ್ಕೆ ತರಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಹೇಳಿದರು.

ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಲೀಲಾದೇವಿ ಆರ್. ಪ್ರಸಾದ್, ಅಭ್ಯರ್ಥಿ ಎ.ಪಿ.ರಂಗನಾಥ್, ಮಾಜಿ ಶಾಸಕ ದೊಡ್ಡನಗೌಡ ಪಾಟೀಲ, ಹಿರಿಯ ಮುಖಂಡರಾದ ಮಂಜುನಾಥ್, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಸಯ್ಯದ್ ರೋಷನ್ ಅಬ್ಬಾಸ್, ಯುವ ಮುಖಂಡ ಪ್ರವೀಣ್ ಉಪಸ್ಥಿತರಿದ್ದರು.

ದೇವಾಲಯದಲ್ಲಿ ಸ್ವಚ್ಛತಾ ಕಾರ್ಯ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆಯ ಮಾರಮ್ಮ ದೇವಸ್ಥಾನದಲ್ಲಿ ಶಾಸಕ ಎಸ್. ಮುನಿರಾಜು ನೇತೃತ್ವದಲ್ಲಿ ಬಿಜೆಪಿ ಮುಖಂಡರು ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸಿದರು.

ಬಳಿಕ ಮಾತನಾಡಿದ ಅವರು ‘ದೇಶದ ಎಲ್ಲಾ ದೇಗುಲಗಳು ಹಾಗೂ ಪುಣ್ಯಕ್ಷೇತ್ರಗಳು ಸ್ವಚ್ಛ, ಸುಂದರವಾಗಿ ಕಂಗೊಳಿಸಬೇಕು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಕರೆಯ ಮೇರೆಗೆ ಮಾರಮ್ಮ ದೇವಸ್ಥಾನ, ದಾಸರಹಳ್ಳಿಯ ಮಹೇಶ್ವರಮ್ಮ ದೇವಸ್ಥಾನ ಸೇರಿದಂತೆ ಹಲವು ದೇವಸ್ಥಾನಗಳಲ್ಲಿ ಸ್ವಚ್ಛತಾ ಕಾರ್ಯ ಹಮ್ಮಿಕೊಂಡಿದ್ದೇವೆ’ ಎಂದರು.

‘22ರಂದು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಲೋಕಾರ್ಪಣೆ ಕಾರ್ಯಕ್ರಮ ನಡೆಯುತ್ತಿದ್ದು, ಆ ದಿನ ಸಂಜೆ 5 ಗಂಟೆಯ ನಂತರ ಪ್ರತಿ ಮನೆಯಲ್ಲೂ ಕನಿಷ್ಠ ಐದು ದೀಪಗಳನ್ನು ಹಚ್ಚಿ ಶ್ರೀರಾಮನ ಪೂಜೆ, ಭಜನೆ ಮಾಡಲು ವಿನಂತಿಸುತ್ತಿದ್ದೇನೆ’ ಎಂದರು.

ಇದೇ ವೇಳೆ ಸಮೀಪದ ಸರ್ಕಾರಿ ಪ್ರಾಥಮಿಕ ಶಾಲೆ ಹಿಂಭಾಗ ಕಸ ಸುರಿಯುತ್ತಿದ್ದ ಜಾಗವನ್ನು ಪೌರಕಾರ್ಮಿಕರು ಸ್ವಚ್ಛಗೊಳಿಸಿ, ರಂಗೋಲಿ ಹಾಕಿದರು. ಪೌರಕಾರ್ಮಿಕರಿಗೆ ಶಾಸಕ ಎಸ್.ಮುನಿರಾಜು ಅಭಿನಂದನೆ ಸಲ್ಲಿಸಿ, ಎಲ್ಲರಿಗೂ ಎಳನೀರು ಕೊಡಿಸಿದರು.

ದಕ್ಷಿಣ–ನೈರುತ್ಯ ವಲಯ: ಇಂದು ಹಿಂದಿ ಭಾಷಾ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯ್‌ನಗರದಲ್ಲಿ ಇರುವ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಮತ್ತು ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಕಚೇರಿಯಲ್ಲಿ ಜನವರಿ 19ರಂದು ಬೆಳಿಗ್ಗೆ 10 ಗಂಟೆಗೆ ದಕ್ಷಿಣ ಮತ್ತು ನೈರುತ್ಯ ವಲಯದ ಹಿಂದಿ ಭಾಷಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

‘ಇದಕ್ಕೂ ಮೊದಲು ಮುಂಬೈ ಮತ್ತು ಜೋಧಪುರದಲ್ಲಿ ಸಮ್ಮೇಳನ ಆಯೋಜಿಸಲಾಗಿತ್ತು. 2023–24ರಲ್ಲಿ ನಡೆಯುತ್ತಿರುವ ಮೂರನೇ ಸಮ್ಮೇಳನ ಇದಾಗಿದೆ’ ಎಂದು ಗೃಹ ಸಚಿವಾಲಯದ ಅಧೀನದಲ್ಲಿ ಬರುವ ಹಿಂದಿ ಭಾಷಾ ಇಲಾಖೆಯ ದಕ್ಷಿಣ ಮತ್ತು ನೈಋತ್ಯ ವಲಯದ ಜಂಟಿ ಕಾರ್ಯದರ್ಶಿ ಮೀನಾಕ್ಷಿ ಜೊಲ್ಲಿ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್‌ಕುಮಾರ್ ಮಿಶ್ರಾ ಅವರು ಸಮ್ಮೇಳನದ ಅಧ್ಯಕ್ಷತೆವಹಿಸಲಿದ್ದಾರೆ ಎಂದರು.

ದಕ್ಷಿಣ ಭಾಗವು ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕವನ್ನು ಒಳಗೊಂಡಿದೆ. ನೈರುತ್ಯ ಭಾಗದಲ್ಲಿ ಕೇರಳ, ತಮಿಳುನಾಡು, ಪುದುಚೇರಿ ಮತ್ತು ಲಕ್ಷದ್ವೀಪ ಸೇರಿವೆ. ಈ ಎರಡೂ ವಲಯದ ಭಾಷಾ ಸಮ್ಮೇಳನ ಇದಾಗಿದೆ ಎಂದು ಮೀನಾಕ್ಷಿ ಜೊಲ್ಲಿ ತಿಳಿಸಿದರು.

ಈ ಎರಡೂ ವಲಯಕ್ಕೆ ಸೇರಿದ ವಿವಿಧ ಬ್ಯಾಂಕ್‌ಗಳು, ಉದ್ದಿಮೆಗಳು ಮತ್ತು ಕಚೇರಿಗಳಲ್ಲಿ ಹಿಂದಿ ಭಾಷೆಯ ಅನುಷ್ಠಾನದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ನೀಡಲಾಗುತ್ತದೆ. ವಿವಿಧ ವಿಭಾಗಗಳಲ್ಲಿ ಒಟ್ಟು 32 ಪ್ರಶಸ್ತಿಗಳನ್ನು ನೀಡಲು ನಿರ್ಧರಿಸಲಾಗಿದೆ ಎಂದು ಮೀನಾಕ್ಷಿ ಜೊಲ್ಲಿ ವಿವರಿಸಿದರು.





ತೋಟಗಾರಿಕೆ ಇಲಾಖೆ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನದಲ್ಲಿ ಸಾರ್ವಜನಿಕರು ವಿವಿಧ ತಳಿಯ ಪುಷ್ಪಗಳನ್ನು ವೀಕ್ಷಿಸಿದರು (ಎಡಚಿತ್ರ) ಶಿವಶರಣರ ಮಾದರಿಗಳನ್ನು ಜನರು ಕಣ್ತುಂಬಿಕೊಂಡರು –ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ಇದೇ 28ರವರೆಗೆ ಲಾಲ್‌ಬಾಗ್‌ನಲ್ಲಿ ಆಯೋಜನೆ • ಪ್ರದರ್ಶನಕ್ಕೆ 32 ಲಕ್ಷ ಹೂವುಗಳ ಬಳಕೆ

215ನೇ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ತೋಟಗಾರಿಕೆ ಇಲಾಖೆಯು ಲಾಲ್‌ಬಾಗ್‌ನಲ್ಲಿ ಹಮ್ಮಿಕೊಂಡಿಕೊಂಡಿರುವ 215ನೇ ಫಲಪುಷ್ಪ ಪ್ರದರ್ಶನಕ್ಕೆ ಗುರುವಾರ ಚಾಲನೆ ದೊರೆಯಿತು. ಶುಕ್ರವಾರದಿಂದ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಸವಣ್ಣ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಿದರು. ಇದೇ ವೇಳೆ ತೋಟಗಾರಿಕೆ ಇಲಾಖೆ ಪರಿಚಯಿಸುತ್ತಿರುವ ಜೇನು ತುಪ್ಪದ ನೂತನ ಬ್ರ್ಯಾಂಡ್ 'ಝೇಂಕಾರ' ಲೋಕಾರ್ಪಣೆ ಮಾಡಿದರು. ಈ ಬಾರಿಯ ಫಲಪುಷ್ಪ ಪ್ರದರ್ಶನವು ಬಸವಣ್ಣ ಮತ್ತು ವಚನ ಸಾಹಿತ್ಯವನ್ನು ಆಧರಿಸಿದ್ದು, ಈ ಪ್ರದರ್ಶನ ಇದೇ 28ರವರೆಗೆ ನಡೆಯಲಿದೆ.

ಪ್ರವೇಶ ಶುಲ್ಕ	
ವಯಸ್ಕರಿಗೆ	₹80
ಮಕ್ಕಳಿಗೆ (12 ವರ್ಷದೊಳಗೆ)	₹30
ರಜಾ ದಿನಗಳಲ್ಲಿ	₹100
ಸಮವಸ್ತ್ರ ಧರಿಸಿದ 10ನೇ ತರಗತಿವರೆಗಿನ ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ	
ಪ್ರದರ್ಶನದ ಸಮಯ	
ಬೆಳಿಗ್ಗೆ 6ರಿಂದ ಸಂಜೆ 6.30	

ಟಿಕೆಟ್ ಎಲ್ಲಿ ಲಭ್ಯ?

ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಟಿಕೆಟ್ ದೊರೆಯಲಿದೆ. ತೋಟಗಾರಿಕೆ ಇಲಾಖೆಯ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿಯೂ ಟಿಕೆಟ್ ಪಡೆಯುವ ಅವಕಾಶ ನೀಡಲಾಗಿದೆ.

ಈ ಬಾರಿಯ ಪ್ರದರ್ಶನಕ್ಕೆ 32 ಲಕ್ಷ ಹೂವುಗಳನ್ನು ಬಳಸಲಾಗಿದೆ. ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ಅನುಭವ ಮಂಟಪದ ಪುಷ್ಪ ಮಾದರಿ ನಿರ್ಮಿಸಲಾಗಿದೆ. ಇದು ಬಸವಕಲ್ಯಾಣದಲ್ಲಿ ನಿರ್ಮಾಣದ ಹಂತದಲ್ಲಿರುವ ಅನುಭವ ಮಂಟಪದ ಯಥಾವತ್ ಕಿರು ಪುಷ್ಪ ಪ್ರತಿರೂಪವಾಗಿದ್ದು, 34 ಅಡಿ ಅಗಲ ಮತ್ತು 30 ಅಡಿ ಎತ್ತರವಿದೆ. ಇದಕ್ಕೆ 4.8 ಲಕ್ಷ ಹೂವುಗಳನ್ನು ಬಳಸಲಾಗಿದ್ದು, ಪ್ರದರ್ಶನದ ಅವಧಿಯಲ್ಲಿ ಎರಡು ಬಾರಿಗೆ 9.6 ಲಕ್ಷ ಹೂವುಗಳನ್ನು ಅಳವಡಿಸಲಾಗುತ್ತದೆ.

ಬಸವಣ್ಣ ಪ್ರತಿಮೆ ನಿರ್ಮಾಣ: ಅನುಭವ ಮಂಟಪದ ಪುಷ್ಪ ಮಾದರಿಯ ಮುಂದೆ ಬಸವಣ್ಣ ಅವರ 10 ಅಡಿ ಎತ್ತರದ ಪ್ರತಿಮೆ ಇದ್ದು, ಬಸವಣ್ಣ ಅವರು ವಚನ ರಚಿಸುವ ಭಂಗಿಯಲ್ಲಿ ಕುಳಿತುಕೊಂಡಿದ್ದಾರೆ. ಗಾಜಿನ ಮನೆಯ ಕೇಂದ್ರ ಭಾಗದ ಬಲಬದಿಗೆ ವಚನಾನುಭವ ಗೋಷ್ಠಿಯನ್ನು ನೆನಪಿಸುವಂತಹ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ. ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ಅನುಭವ ಮಂಟಪದ ಹಿಂಬದಿಗೆ ಬಸವಣ್ಣ ಅವರ ಬದುಕಿನ ವಿವಿಧ ಹಂತಗಳನ್ನು ಪ್ರತಿಬಿಂಬಿಸುವ 5 ಕಲಾಕೃತಿಗಳನ್ನು ವಿಶೇಷ ಹೂಗಿಡಗಳ ಜೋಡಣೆಯ ನಡುವೆ ಪ್ರದರ್ಶಿಸಲಾಗಿದೆ. ಕೇಂದ್ರಭಾಗದಲ್ಲಿ ಕೂಡಲಸಂಗಮದಲ್ಲಿರುವ ಬಸವಣ್ಣ ಅವರ ಐಕ್ಯ ಮಂಟಪದ ಪುಷ್ಪ ಮಾದರಿ ನಿರ್ಮಿಸಲಾಗಿದೆ.

ಗಾಜಿನ ಮನೆಯ ಒಳಾಂಗಣದ ಹಿಂಬದಿಯ ಆವರಣದಲ್ಲಿ ಅಕ್ಕ ಮಹಾದೇವಿ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಕುಂಬಾರ ಗುಂಡಣ್ಣ, ಅಕ್ಕ ನಾಗಲಾಂಬಿಕೆ, ಮಡಿವಾಳ ಮಾಚಿದೇವ, ಸಮಗಾರ ಹರಳಯ್ಯ, ಬಾಚಿಕಾಯಕದ ಬಸವಣ್ಣ ಮತ್ತು ಶರಣೆ ಸತ್ಯಕ್ಕನವರ ಪ್ರತಿಮೆಗಳನ್ನು ಪೀಠದ ಮೇಲಿರಿಸಿ, ಪೀಠವನ್ನು ಹೂಗಳಿಂದ ಅಲಂಕರಿಸಲಾಗಿದೆ. ಗಾಜಿನ ಮನೆಯ ಕೇಂದ್ರ ಭಾಗದ ಎಡಬದಿಗೆ ವರ್ಟಿಕಲ್ ಗಾರ್ಡನ್ ಮತ್ತು ಇಷ್ಟಲಿಂಗ ಪರಿಕಲ್ಪನೆಯ ಕಲಾಕೃತಿ ಪ್ರದರ್ಶಿಸಲಾಗಿದೆ.

ವಿವಿಧೆಡೆ ಪಾರ್ಕಿಂಗ್ ವ್ಯವಸ್ಥೆ

ಕಾರುಗಳು ಸೇರಿ ನಾಲ್ಕು ಚಕ್ರಗಳ ವಾಹನಗಳಿಗೆ ಶಾಂತಿನಗರ ಬಸ್‌ನಿಲ್ದಾಣದ ಬಹುಮಹಡಿ ವಾಹನ ನಿಲ್ದಾಣ, ಜೋಡಿ ರಸ್ತೆಯ ಬಳಿಯ ಹಾಪ್‌ಕಾಮ್ಸ್ ಆವರಣ ಹಾಗೂ ಜೆ.ಸಿ. ರಸ್ತೆಯಲ್ಲಿರುವ ಬಿಬಿಎಂಪಿ ಬಹುಮಹಡಿ ವಾಹನ ನಿಲ್ದಾಣದಲ್ಲಿ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ದ್ವಿಚಕ್ರ ವಾಹನಗಳಿಗೆ ಲಾಲ್‌ಬಾಗ್ ಮುಖ್ಯದ್ವಾರದ ಬಳಿ ಇರುವ ಅಲ್ ಅಮೀನ್ ಕಾಲೇಜು ಆವರಣದಲ್ಲಿ ಅವಕಾಶ ನೀಡಲಾಗಿದೆ.

ಲಾಲ್‌ಬಾಗ್ ಪಶ್ಚಿಮ ದ್ವಾರಕ್ಕೆ ಹೊಂದಿಕೊಂಡು ಮೆಟ್ರೊ ನಿಲ್ದಾಣವಿದ್ದು, ಲಾಲ್‌ಬಾಗ್ ಸುತ್ತಮುತ್ತ ವಾಹನ ಪಾರ್ಕಿಂಗ್‌ಗೆ ಸೂಕ್ತ ಸ್ಥಳಾವಕಾಶ ಇಲ್ಲದಿರುವುದರಿಂದ ಸಾಧ್ಯವಾದಷ್ಟು ಮೆಟ್ರೊ ರೈಲುಗಳನ್ನು ಬಳಸುವಂತೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

> **ಸಮಾಜದಲ್ಲಿ ಬದಲಾವಣೆ ಹಾಗೂ ಸಮಾನತೆ ತರಲು ಬಸವಾದಿ ಶರಣರು ಹೋರಾಟ ಮಾಡಿದರು. ಆ ಹೋರಾಟವನ್ನು ಜನರಿಗೆ ಪರಿಚಯಿಸಲು ಈ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸುದ್ದಿ 2 ನಿಮಿಷ

ಉದ್ಯಮಿ ಅಪಹರಣ ಪ್ರಕರಣ: ಆರೋಪಿಗಳಿಗೆ ಶೋಧ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರನ್ನು ಅಪಹರಿಸಿ ಕಿರುಕುಳ ನೀಡಿದ್ದ ಎಂಟು ಮಂದಿ ಆರೋಪಿಗಳ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳಿಗಾಗಿ ಶೋಧ ಕಾರ್ಯ ಮುಂದುವರಿದಿದೆ.

ಕೆಂಗೇರಿ ಉಪನಗರ ನಿವಾಸಿ, ಉದ್ಯಮಿ ಶಿವರಾಜ್ ಗೋನಿ ಅವರು ನೀಡಿದ್ದ ದೂರು ಆಧರಿಸಿ ವೀರೇಶ್ ಸೈದು, ರಶ್ಮಿ, ಕೃಷ್ಣಪ್ಪ, ರಾಜಶೇಖರ್, ಕಾರ್ತಿಕ್, ರಘು ಸೇರಿದಂತೆ ಎಂಟು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಅಶೋಕ್ ಶಿವರಾಜ್ ಅವರನ್ನು ಜ.12ರಂದು ಜ್ಞಾನಭಾರತಿ ಸಮುದಾಯ ಭವನದ ಬಳಿ ಆರೋಪಿಗಳು ಅಪರಿಸಿದ್ದರು.

'ಅಶೋಕ್ ಶಿವರಾಜ್ ಅವರು ಹಲವು ವರ್ಷಗಳಿಂದ ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿದ್ದರು. ಅವರಿಗೆ ಸೇರಿದ ಆಸ್ತಿ ಕಬಳಿಸುವ ಉದ್ದೇಶದಿಂದ ಆರೋಪಿಗಳು, ಕಳೆದ ಕೆಲವು ದಿನಗಳಿಂದ ಅಶೋಕ್ ಅವರನ್ನು ಗೃಹ ಬಂಧನದಲ್ಲಿಟ್ಟು, ಫ್ಲ್ಯಾಟ್ ಸೇರಿ ಕೆಲವು ಆಸ್ತಿಗಳನ್ನು ಅಕ್ರಮವಾಗಿ ಕಬಳಿಸಿದ್ದರು' ಎಂಬ ಆರೋಪವಿದೆ.

'ಗೃಹ ಬಂಧನದಿಂದ ತಪ್ಪಿಸಿಕೊಂಡು ಬಂದಿದ್ದ ಅಶೋಕ್ ಅವರು ಪೊಲೀಸರಿಗೆ ದೂರು ನೀಡಿದ್ದರು. ದೂರು ನೀಡಿದ್ದಕ್ಕೆ ಸಿಟ್ಟಿಗೆದ್ದು ಮತ್ತೆ ಅಶೋಕ್ ಅವರನ್ನು ಅಪಹರಿಸಿ ಕೊಲೆ ಮಾಡುವುದಾಗಿ ಬೆದರಿಸಿ ಬಿಟ್ಟು ಕಳುಹಿಸಿದ್ದರು' ಎಂದು ಮೂಲಗಳು ಹೇಳಿವೆ.

ಜಿಆರ್‌ಟಿ: ಗ್ರಾಹಕರಿಗೆ ಬಹುಮಾನ



ಬೆಂಗಳೂರು: ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್ ಇತ್ತೀಚೆಗೆ ಆಯೋಜಿಸಿದ್ದ ಬೆಂಗಳೂರು ಗೋಲ್ಡ್ ಶಾಪಿಂಗ್ ಫೆಸ್ಟಿವಲ್‌ನಲ್ಲಿ ಜಿಆರ್‌ಟಿ ಜ್ಯುವೆಲರ್ಸ್‌ನ 177 ಗ್ರಾಹಕರು ವಿವಿಧ ವಿಭಾಗದಲ್ಲಿ ಬಹುಮಾನ ಪಡೆದಿದ್ದಾರೆ.

ಗ್ರಾಹಕರು 20 ಗ್ರಾಂ ಚಿನ್ನ ಹಾಗೂ 1 ಕೆ.ಜಿ ಬೆಳ್ಳಿವರೆಗೆ ಬಹುಮಾನ ಗೆದ್ದಿದ್ದಾರೆ ಎಂದು ಅಸೋಸಿಯೇಷನ್ ತಿಳಿಸಿದೆ.

ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಆರ್‌ಟಿ ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತ ಪದ್ಮನಾಭನ್, ಗ್ರಾಹಕರ ಬೇಡಿಕೆಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಅವರಿಗೆ ಉತ್ತಮ ಸೇವೆ ಒದಗಿಸುವ ಜೊತೆಗೆ ಉತ್ತಮ ಕೊಡುಗೆ ನೀಡಲು ಬದ್ಧರಾಗಿದ್ದೇವೆ ಎಂದರು. ಜಿ.ಆರ್. ರಾಧಾಕೃಷ್ಣನ್ ಹಾಜರಿದ್ದರು.

ದೆಹಲಿ: ಐವರ ಸಜೀವ ದಹನ

ನವದೆಹಲಿ (ಪಿಟಿಐ): ವಾಯವ್ಯ ದೆಹಲಿಯ ಪಿತಾಂಪುರ ಪ್ರದೇಶದ ಬಹುಮಹಡಿ ಕಟ್ಟಡದ ಮೊದಲ ಮಹಡಿಯಲ್ಲಿ ಗುರುವಾರ ಸಂಭವಿಸಿದ ಬೆಂಕಿ ಅವಘಡದಲ್ಲಿ ಐವರು ಸಜೀವ ದಹನವಾಗಿದ್ದು, ಇಬ್ಬರು ಗಾಯಗೊಂಡಿದ್ದಾರೆ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಕಿ ಕಾಣಿಸಿದ ಬಗ್ಗೆ ರಾತ್ರಿ 8 ಗಂಟೆಗೆ ಕರೆ ಬಂದಿತ್ತು. ಸ್ಥಳಕ್ಕೆ ಎಂಟು ಅಗ್ನಿಶಾಮಕ ವಾಹನ ಕಳುಹಿಸಿದ್ದು, ಬೆಂಕಿ ನಂದಿಸಲಾಗಿದೆ. ಸ್ಥಳೀಯರ ನೆರವಿನಿಂದ ಏಳು ಮಂದಿಯನ್ನು ಪೊಲೀಸರು ರಕ್ಷಿಸಿದ್ದು, ಗಾಯಾಳುಗಳನ್ನು ಬಾಬು ಜಗಜೀವನ್ ರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ರೌಡಿಗಳಿಗೆ ಪಿಸ್ತೂಲ್ ಪೂರೈಸುತ್ತಿದ್ದ ಇಬ್ಬರು ಆರೋಪಿಗಳು

ಎರಡು ಪಿಸ್ತೂಲ್, 9 ಗುಂಡು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದ ರೌಡಿಗಳಿಗೆ ಅಕ್ರಮವಾಗಿ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಮಾರಾಟ ಮಾಡುತ್ತಿದ್ದ ಮಹಾರಾಷ್ಟ್ರದ ಇಬ್ಬರು ಆರೋಪಿಗಳನ್ನು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.



ರಾಹುಲ್



ಮಲ್ಲಿಕ್

ಸಾಂಗ್ಲಿಯ ವಸಂತ್ ಹೌಸಿಂಗ್ ಸೊಸೈಟಿ ನಿವಾಸಿ ರಾಹುಲ್ ಸತೀಶ್ ಮಾನೆ ಹಾಗೂ ಮಲ್ಲಿಕ್ ಸಲೀಂ ಶೇಖ ಬಂಧಿತ ಆರೋಪಿಗಳು.

ಮಧ್ಯಪ್ರದೇಶದ ಚೌಟು ಎಂಬಾತ ತಲೆಮರೆಸಿಕೊಂಡಿದ್ದು ಆತನಿಗೆ ಶೋಧ ಮುಂದುವರಿಸಲಾಗಿದೆ.

ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ಉಲ್ಲಾಳದ ಬಳಿ ಆರೋಪಿಗಳನ್ನು ಬಂಧಿಸಿ, ಎರಡು ಕಂಟ್ರಿಮೇಡ್ ಪಿಸ್ತೂಲ್, 9 ಜೀವಂತ ಗುಂಡು, ಒಂದು ಕಾರನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ. ಪ್ರಕರಣದ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಉಲ್ಲಾಳದ ಬಳಿ ರೌಡಿಗಳಿಗೆ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಮಾರಾಟ ಮಾಡಲು ಆರೋಪಿಗಳು ಪ್ರಯತ್ನಿಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ, ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ರಾಹುಲ್ ಸತೀಶ್ ಮಾನೆ ಪ್ರಕರಣವೊಂದರಲ್ಲಿ ಬಂಧಿತನಾಗಿ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹ ಸೇರಿದ್ದ. ಕಾರಾಗೃಹದಲ್ಲಿ ಒಂದು ವರ್ಷ ಶಿಕ್ಷೆ ಅನುಭವಿಸುತ್ತಿದ್ದ ವೇಳೆ ರೌಡಿಗಳ ಪರಿಚಯವಾಗಿತ್ತು. ಜೈಲಿನಿಂದ ಬಿಡುಗಡೆಯಾದ ಮೇಲೆ ಹಳೆಯ ಸಂಪರ್ಕ ಬಳಸಿ ನಗರದ ಬೇರೆ ಬೇರೆ ಠಾಣಾ ವ್ಯಾಪ್ತಿಯ ರೌಡಿಗಳಿಗೆ ಅಕ್ರಮವಾಗಿ ಶಸ್ತ್ರಾಸ್ತ್ರ ಪೂರೈಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಆರೋಪಿಗಳ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲಿ ಮಹಾರಾಷ್ಟ್ರದ ಮೀರಜ್ ಮಹಾತ್ಮ ಗಾಂಧಿ ಪೊಲೀಸ್ ಠಾಣೆಯಲ್ಲಿ 2, ಮೀರಜ್ ಟೌನ್ ಠಾಣೆಯಲ್ಲಿ 1, ಸಾಂಗ್ಲಿ ವೆಲ್‌ವಾಡಿ ಠಾಣೆಯಲ್ಲಿ 1, ಮೀರಜ್ ಎಂಐಡಿಸಿ ಠಾಣೆಯಲ್ಲಿ 1, ಬೆಂಗಳೂರು ನಗರದ ಬ್ಯಾಟರಾಯನಪುರ ಠಾಣೆಯಲ್ಲಿ 1 ಪ್ರಕರಣ ದಾಖಲಾಗಿತ್ತು' ಎಂದು ಮೂಲಗಳು ಹೇಳಿವೆ.

ರಾಹುಲ್ ಸತೀಶ್ ಮಾನೆ ನೇತೃತ್ವದಲ್ಲಿ ಮೂರು ರಾಜ್ಯಗಳಿಗೆ ಅಕ್ರಮವಾಗಿ ಶಸ್ತ್ರಾಸ್ತ್ರ ಪೂರೈಕೆ ಮಾಡಲಾಗುತ್ತಿತ್ತು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ. ಮಹಾರಾಷ್ಟ್ರದಿಂದ ಕಡಿಮೆ ದರಕ್ಕೆ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಖರೀದಿಸಿ ಹೆಚ್ಚಿನ ದರಕ್ಕೆ ಆರೋಪಿಗಳು ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ದರೋಡೆ: ಆರೋಪಿ ಬಂಧನ

ಬೆಂಗಳೂರು: ವೃದ್ಧೆಯ ಕೈ–ಕಾಲಿಗೆ ಹಗ್ಗ ಬಿಗಿದು ಮನೆಯಲ್ಲಿದ್ದ ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಆರೋಪಿಯನ್ನು ರಾಜರಾಜೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರೌಡಿ ಕುಮಾರ ಅಲಿಯಾಸ್ ಲೊಡ್ಡೆ ಕುಮಾರ (30) ಬಂಧಿತ ಆರೋಪಿ. ಬಂಧಿತ ಆರೋಪಿಯಿಂದ ನಗದು ಹಾಗೂ ಚಿನ್ನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಉಳಿದ ಆರೋಪಿಗಳಿಗಾಗಿ ಶೋಧ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಜ.9ರಂದು ರಾಜರಾಜೇಶ್ವರಿ ನಗರದ ನಿವಾಸಿ ಗೌರಮ್ಮ ಅವರ ಮನೆಗೆ ನುಗ್ಗಿದ್ದ ಆರೋಪಿಗಳು, ಆಕೆಯ ಕೈ, ಕಾಲು ಕಟ್ಟಿ ಬಾಯಿಗೆ ಬಟ್ಟೆ ತುರುಕಿ ಚಿನ್ನಾಭರಣ ಹಾಗೂ ನಗದು ದೋಚಿದ್ದರು. ಮೊಮ್ಮಕ್ಕಳನ್ನು ಟ್ಯೂಷನ್‌ಗೆ ಬಿಟ್ಟು ಮನೆಗೆ ವಾಪಸ್ ಆಗಿದ್ದರು. ಮನೆಯಲ್ಲಿ ಯಾರೂ ಇರಲಿಲ್ಲ. ಆಗ ಮನೆಗೆ ನುಗ್ಗಿದ ಆರೋಪಿಗಳು, ಮನೆಯಲ್ಲಿದ್ದ 120 ಗ್ರಾಂ ಚಿನ್ನ, 100 ಗ್ರಾಂ ಬೆಳ್ಳಿ, ₹ 50 ಸಾವಿರ ನಗದು ದರೋಡೆ ಮಾಡಿ ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ಇಂದು ಪ್ರಧಾನಿ ಮೋದಿ ಭೇಟಿ ಸಂಚಾರ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಳಿಯ ಏರೊಸ್ಪೇಸ್ ಪಾರ್ಕ್‌ನಲ್ಲಿ ಅತ್ಯಾಧುನಿಕ ಬೋಯಿಂಗ್ ಇಂಡಿಯಾ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕೇಂದ್ರ ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಆಗಮಿಸುತ್ತಿದ್ದು ಅವರು ಸಂಚರಿಸುವ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಅಲ್ಲದೇ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ವಾಹನಗಳಿಗೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ವಾಹನ ನಿಲುಗಡೆ ನಿರ್ಬಂಧ: ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಗೊಲ್ಲರಹಳ್ಳಿ ಗೇಟ್–ಹುಣಚೂರು ಗ್ರಾಮ (ಕೆಐಎಡಿಬಿ ಕೈಗಾರಿಕಾ ಪ್ರದೇಶ), ಡಾಬಾ ಗೇಟ್‌ನಿಂದ (ಎನ್.ಎಚ್. 648) ವಿಮಾನ ನಿಲ್ದಾಣದ ಕಡೆಗೆ, ಹೆಣ್ಣೂರು ಬಾಗಲೂರು ಮುಖ್ಯರಸ್ತೆಯಿಂದ ವಿಮಾನ ನಿಲ್ದಾಣದ ಕಡೆಗೆ, ಚಿಕ್ಕಜಾಲ ಕೋಟೆ ಕಡೆಯಿಂದ ಕೆಂಪೇಗೌಡ ವಿಮಾನ ನಿಲ್ದಾಣವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಸಂಚಾರ ಮಾರ್ಗ ಬದಲಾವಣೆ: ವೈಟ್‌ಫೀಲ್ಡ್, ಕೆ.ಆರ್.ಪುರಂ ಕಡೆಯಿಂದ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಗೊಲ್ಲಹಳ್ಳಿ ಗೇಟ್ ಮಾರ್ಗವಾಗಿ ಸಂಚರಿಸುವ ವಾಹನಗಳಿಗೆ ಪರ್ಯಾಯ ಮಾರ್ಗ: ಗೊಲ್ಲಹಳ್ಳಿ ಗೇಟ್–ಬಲತಿರುವು– ಹೊನ್ನಹಳ್ಳಿ ಗೇಟ್ – ಬೆಟ್ಟಕೋಟೆ – ಏರ್‌ಲೈನ್ ಡಾಬಾ–ಎಡತಿರುವು– ದೇವನಹಳ್ಳಿ ಬಸ್ ನಿಲ್ದಾಣ –ಎಡ ತಿರುವು–ದೇವನಹಳ್ಳಿ ಬೈಪಾಸ್ –ಎಡ ತಿರುವು–ಬಿ.ಬಿ. ರಸ್ತೆ–ದೇವನಹಳ್ಳಿ ಟೋಲ್‌ನಲ್ಲಿ ಎಡಕ್ಕೆ ತಿರುವು ಪಡೆದು ಕೆಂಪೇಗೌಡ ವಿಮಾನ ನಿಲ್ದಾಣ ತಲುಪಬಹುದು.

ರಾಷ್ಟ್ರೀಯ ಹೆದ್ದಾರಿ-648 ಏರ್‌ಲೈನ್ಸ್ ಡಾಬಾ ಜಂಕ್ಷನ್ ಕಡೆಯಿಂದ ವಿಮಾನ ನಿಲ್ದಾಣದ ಕಡೆಗೆ ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾದ ಮೂಲಕ ಸಂಚರಿಸುವ ವಾಹನಗಳಿಗೆ ಮಾರ್ಗಗಳು: ಏರ್‌ಲೈನ್ಸ್ ಡಾಬಾ –ದೇವನಹಳ್ಳಿ ಬಸ್ ನಿಲ್ದಾಣ –ಎಡತಿರುವು– ದೇವನಹಳ್ಳಿ ಬೈಪಾಸ್–ಎಡ ತಿರುವು –ಬಿಬಿ ರಸ್ತೆ– ದೇವನಹಳ್ಳಿ ಟೋಲ್‌ನಲ್ಲಿ ಎಡ ತಿರುವು ಪಡೆದು ವಿಮಾನ ನಿಲ್ದಾಣ ತಲುಪಬಹುದು.

ಹೆಣ್ಣೂರು-ಬಾಗಲೂರು ಕಡೆಯಿಂದ ವಿಮಾನ ನಿಲ್ದಾಣಕ್ಕೆ ಗಾಳಮ್ಮ ಸರ್ಕಲ್ ಮಾರ್ಗವಾಗಿ ಸಂಚರಿಸುವ ವಾಹನಗಳು, ಬಾಗಲೂರು ಗುಂಡಪ್ಪ ವೃತ್ತ- ಎಡ ತಿರುವು – ರೇವಾ ಕಾಲೇಜು ಜಂಕ್ಷನ್ – ಬಾಗಲೂರು ಕ್ರಾಸ್ –ಬಲ ತಿರುವು –ಚಿಕ್ಕಜಾಲ–ಸಾದಹಳ್ಳಿ ಟೋಲ್ – ವಿಮಾನ ನಿಲ್ದಾಣ ಬಳಿಯ ಮೇಲ್ಸೇತುವೆ ಪ್ರವೇಶಿಸಿ ಕೆಂಪೇಗೌಡ ವಿಮಾನ ನಿಲ್ದಾಣ ತಲುಪಬಹುದಾಗಿದೆ.

ಚಿಕ್ಕಜಾಲ ಕೋಟೆ ಕ್ರಾಸ್ ಕಡೆಯಿಂದ ವಿಮಾನ ನಿಲ್ದಾಣಕ್ಕೆ ಗಾಳಮ್ಮ ಸರ್ಕಲ್ ಮಾರ್ಗವಾಗಿ ಸಂಚರಿಸುವ ವಾಹನಗಳು ಚಿಕ್ಕಜಾಲ-ಸಾದಹಳ್ಳಿ ಟೋಲ್ – ವಿಮಾನ ನಿಲ್ದಾಣ ಬಳಿಯ ಮೇಲ್ಸೇತುವೆ ಮೂಲಕ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಹೋಗಬಹುದು.

ಬಾಗಲೂರು ಕಡೆಯಿಂದ ವಿಮಾನ ನಿಲ್ದಾಣಕ್ಕೆ ಗಾಳಮ್ಮ ವೃತ್ತದ ಮಾರ್ಗವಾಗಿ ಸಂಚರಿಸುವ ವಾಹನಗಳು ಬಾಗಲೂರು ಕಾಲೊನಿಯಲ್ಲಿ ಬಲ ತಿರುವು ಪಡೆದು ರಜಾಕ್ ಪಾಳ್ಯ – ಎಂ.ವಿ.ಐ.ಟಿ ಕಾಲೇಜು–ಚಿಕ್ಕಜಾಲ–ಬಲ ತಿರುವು – ಬಿಬಿ ರಸ್ತೆ –ಸಾದಹಳ್ಳಿ ಟೋಲ್– ವಿಮಾನ ನಿಲ್ದಾಣ ಬಳಿಯ ಮೇಲ್ಸೇತುವೆ ಮೂಲಕ ತಲುಪಬಹುದು ಎಂದು ಸಂಚಾರ ಪೊಲೀಸರು ಪ್ರಕಟಣೆ ಹೊರಡಿಸಿದ್ದಾರೆ.

ಅಧಿಕ ಬಡ್ಡಿ ಆಮಿಷ: ₹2.5 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕ ಬಡ್ಡಿಯ ಆಮಿಷವೊಡ್ಡಿ ಆಂಧ್ರಪ್ರದೇಶದ ಇಬ್ಬರಿಂದ ₹2.5 ಕೋಟಿ ಹೂಡಿಕೆ ಮಾಡಿಸಿಕೊಂಡು ವಂಚಿಸಿದ ಆರೋಪದಡಿ ಎಸ್‌5ಎಸ್ ಗ್ಲೋಬಲ್ ಡೆವಲಪರ್ಸ್ ಕಂಪನಿ ಮಾಲೀಕ ಸೇರಿ ಆರು ಮಂದಿ ವಿರುದ್ಧ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಂಧ್ರಪ್ರದೇಶದ ಕಡಪದ ಸಂದಡಿ ನರಸಿಂಹರೆಡ್ಡಿ ಅವರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ.

ಕೆ.ಆರ್.ಪುರ ಕಸ್ತೂರಿನಗರದ ಎಸ್‌5ಎಸ್ ಗ್ಲೋಬಲ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮುಖ್ಯಸ್ಥ ಪ್ರತಾಪ್, ಆತನ ಪತ್ನಿ ಶ್ವೇತಾ, ಕಂಪನಿಯ ಕಾನೂನು ಸಲಹೆಗಾರ ಓಬಲೇಶ್, ಅಕೌಂಟೆಂಟ್ ಮಣಿ, ಚಾಲಕ ಗೋಪಿ ಹಾಗೂ ಮೊಹಮ್ಮದ್ ಮುಸ್ತಾಫ ವಿರುದ್ಧ ದೂರು ದಾಖಲಾಗಿದೆ.

ವಂಚನೆ, ನಂಬಿಕೆ ದ್ರೋಹ, ಹಲ್ಲೆ, ಜೀವ ಬೆದರಿಕೆ ಆರೋಪದಡಿ ಪ್ರಕರಣ ದಾಖಲಾಗಿದೆ.

ಕೃಷಿಕರಾದ ಸಂದಡಿ ನರಸಿಂಹ ರೆಡ್ಡಿಗೆ ಒಂದೂವರೆ ವರ್ಷದ ಹಿಂದೆ ಬೆಂಗಳೂರಿನ ಮಹಮ್ಮದ್ ಮುಸ್ತಾಫನ ಪರಿಚಯವಾಗಿತ್ತು. ಬಳಿಕ ಇಬ್ಬರು ತಮ್ಮ ವ್ಯವಹಾರಗಳ ಬಗ್ಗೆ ಚರ್ಚಿಸಿಕೊಂಡಿದ್ದಾರೆ. ಆ ನಂತರ 2023ರ ಜನವರಿಯಲ್ಲಿ ಮುಸ್ತಾಫಾ, ಪ್ರತಾಪ್‌ನನ್ನು ತಿರುಪತಿಯಲ್ಲಿ ನರಸಿಂಹರೆಡ್ಡಿಗೆ ಪರಿಚಯಿಸಿದ್ದಾರೆ.

ಆಗ ಪ್ರತಾಪ್, 'ನಾನು ಬೆಂಗಳೂರಿನಲ್ಲಿ ಅಧಿಕ ಬಡ್ಡಿ ಬರುವ ಪ್ಯಾಕೇಜ್ ನಡೆಸುತ್ತಿದ್ದು, ನೀವು ನನಗೆ ₹ 1 ಲಕ್ಷ ನೀಡಿದರೆ 10 ತಿಂಗಳ ಬಳಿಕ ₹1.90 ಲಕ್ಷ ವಾಪಸ್ ನೀಡುತ್ತೇನೆಂದು ಹೇಳಿದ್ದರು. ಅದನ್ನೇ ನಂಬಿ, ಹಣ ಹೂಡಿಕೆ ಮಾಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಪಾಕ್ ಪ್ರತಿ ದಾಳಿ: 9 ಜನ ಸಾವು

ಇಸ್ಲಾಮಾಬಾದ್ (ಪಿಟಿಐ): ಇರಾನ್‌ನ ಗಡಿಯೊಳಗೆ ಎರಡು ಉಗ್ರ ಸಂಘಟನೆಗಳ ನೆಲೆಗಳನ್ನು ಗುರಿಯಾಗಿಸಿ ಪಾಕ್ ಸೇನೆ ಗುರುವಾರ ವಾಯುದಾಳಿ ನಡೆಸಿದೆ. ಡ್ರೋನ್‌ಗಳು ಹಾಗೂ ರಾಕೆಟ್‌ಗಳನ್ನು ಬಳಸಿ ಪರಿಣಾಮಕಾರಿ ದಾಳಿ ನಡೆಸಲಾಗಿದೆ ಎಂದೂ ಪಾಕಿಸ್ತಾನ ತಿಳಿಸಿದೆ.

ಗುಪ್ತದಳದ ಮಾಹಿತಿ ಆಧರಿಸಿ ಈ ಕಾರ್ಯಾಚರಣೆ ನಡೆಸಲಾಯಿತು. ಬಲೂಚಿಸ್ತಾನ್ ಲಿಬರೇಷನ್ ಆರ್ಮಿ (ಬಿಎಲ್‌ಎ), ಬಲೂಚಿಸ್ತಾನ್ ಲಿಬರೇಷನ್ ಫ್ರಂಟ್ (ಬಿಎಲ್‌ಎಫ್) ಸಂಘಟನೆಗಳ ನೆಲೆಗಳ ಮೇಲೆ ದಾಳಿ ನಡೆಸಲಾಗಿದ್ದು, ಒಂಬತ್ತು ಉಗ್ರರು ಹತರಾಗಿದ್ದಾರೆ ಎಂದು ಪಾಕಿಸ್ತಾನ ಸೇನೆಯು ತಿಳಿಸಿದೆ.

ಈ ಮಧ್ಯೆ, ಇರಾನ್‌ನ ಅಧಿಕೃತ ಸುದ್ದಿಸಂಸ್ಥೆ 'ಇರ್ನಾ', 'ದೇಶದ ಸರವನ್ ಪ್ರದೇಶದ ಗ್ರಾಮವೊಂದನ್ನು ಗುರಿಯಾಗಿಸಿ ಪಾಕಿಸ್ತಾನ ನಡೆಸಿದ ದಾಳಿಯಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ ಎಂದು ವರದಿ ಮಾಡಿದೆ. 'ಮೃತಪಟ್ಟ ಎಲ್ಲರೂ ವಿದೇಶಿ ಪ್ರಜೆಗಳಾಗಿದ್ದಾರೆ' ಎಂದು ಇರಾನ್ ಸಚಿವ ಅಹ್ಮದ್ ವಾಹಿದಿ ಅವರು ಪ್ರತಿಕ್ರಿಯಿಸಿದ್ದಾರೆ.

ಐ.ಎಸ್: ಅಪರಾಧ ಸಾಬೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ವಿಟರ್ (ಈಗಿನ 'ಎಕ್ಸ್' ಖಾತೆ)ನಲ್ಲಿ ನಿಷೇಧಿತ ಸಂಘಟನೆಯಾದ ಐ.ಎಸ್ ಪರ ಪ್ರಚಾರ ನಡೆಸುತ್ತಿದ್ದ ಮೆಹದಿ ಮಸ್ರೂರ್ ಬಿಸ್ವಾಸ್ (33) ಎಂಬಾತನನ್ನು ಎನ್‌ಐಎ ವಿಶೇಷ ನ್ಯಾಯಾಲಯ ದೋಷಿ ಎಂದು ಹೇಳಿದ್ದು, ಶಿಕ್ಷೆ ಪ್ರಮಾಣವನ್ನು ಕಾಯ್ದಿರಿಸಿದೆ. ಶುಕ್ರವಾರ ಶಿಕ್ಷೆ ಪ್ರಮಾಣ ಪ್ರಕಟವಾಗಲಿದೆ.

ಉಗ್ರ ಸಂಘಟನೆಗೆ ಯುವಕರ ನೇಮಕ ಮಾಡುತ್ತಿದ್ದ ಆರೋಪದ ಅಡಿ ದೇಶದಲ್ಲೇ ಮೊದಲ ಬಾರಿಗೆ ಐ.ಟಿ. ಕಾಯ್ದೆ ಅಡಿ ದಾಖಲಾದ ಪ್ರಕರಣದಲ್ಲಿ 10 ವರ್ಷಗಳ ಹಿಂದೆ ಕೊಲ್ಕತ್ತದ ನಿವಾಸಿ, ಮೆಹದಿ ಮಸ್ರೂರ್ ಬಿಸ್ವಾಸ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

ಮೆಹದಿ, ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿದ್ದ. ನಗರದ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. 2012-2014ರ ಅವಧಿಯಲ್ಲಿ ಟ್ವಿಟರ್‌ನಲ್ಲಿ ಐ.ಎಸ್ ಪರ ಪ್ರಚಾರ ನಡೆಸಿ ಸಂಘಟನೆಯ ನೇಮಕಾತಿಗೆ ಪ್ರೋತ್ಸಾಹ ನೀಡುತ್ತಿದ್ದ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿತ್ತು.

'ಶಮ್ಮಿ ವಿಟ್ನೆಸ್' ಎಂಬ ಹೆಸರಿನಲ್ಲಿ ಖಾತೆ ತೆರೆದು, ಅದನ್ನು ಆತನೇ ನಿರ್ವಹಣೆ ಮಾಡುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ್ದ ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಪೊಲೀಸರು 2014ರ ಡಿ.13ರಂದು ಜಾಲಹಳ್ಳಿಯ ಆತನ ಮನೆ ಮೇಲೆ ದಾಳಿ ನಡೆಸಿ ಬಂಧಿಸಿದ್ದರು. ಬಳಿಕ, ವಿಶೇಷ ತಂಡವು ತನಿಖೆ ನಡೆಸಿ ಆತನ ವಿರುದ್ಧ 36 ಸಾವಿರ ಪುಟಗಳ ದೋಷಾರೋಪ ಪಟ್ಟಿಯನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಕೆ ಮಾಡಿತ್ತು.

1.24 ಲಕ್ಷ ಟ್ವೀಟ್ ಮಾಡಿದ್ದ ಅಪರಾಧಿ

ಮೆಹದಿ ಮಸ್ರೂರ್ ಬಿಸ್ವಾಸ್, ಟ್ವಿಟರ್‌ನಲ್ಲಿ 1.24 ಲಕ್ಷ ಟ್ವೀಟ್ ಮಾಡಿದ್ದ. ಅದರಲ್ಲಿ 15 ಸಾವಿರಕ್ಕೂ ಹೆಚ್ಚು ಟ್ವೀಟ್‌ಗಳು ಐ.ಎಸ್ ಪರವಾಗಿದ್ದವು ಎಂದು ಮೂಲಗಳು ಹೇಳಿವೆ.

ಐ.ಟಿ ಕಾಯ್ದೆ, ಕಾನೂನು ಬಾಹಿರ ಚಟುವಟಿಕೆಗಳ ಕಾಯ್ದೆ(ಯುಎಪಿಎ), ಭಾರತೀಯ ದಂಡ ಸಂಹಿತೆ 121ರ ಅಡಿ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿತ್ತು. ಅದರಲ್ಲಿ ಐಪಿಸಿ 121 ಮತ್ತು ಐ.ಟಿ ಕಾಯ್ದೆ ಅಡಿ ದಾಖಲಾಗಿದ್ದ ಪ್ರಕರಣಗಳಲ್ಲಿ ನ್ಯಾಯಾಲಯವು ಮೆಹದಿ ಮಸ್ರೂರ್ ಬಿಸ್ವಾಸ್‌ನನ್ನು ಖುಲಾಸೆ ಮಾಡಿದೆ. ಆದರೆ, ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಹಾಗೂ ಇತರೆ ಐಪಿಸಿ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 'ತಪ್ಪಿತಸ್ಥ' ಎಂದು ಹೇಳಿದೆ. ಗಂಗಮ್ಮನ ಗುಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಅನಿರ್ದಿಷ್ಟಾವಧಿ ಲಾರಿ ಮುಷ್ಕರ ಆರಂಭ

ವಾಣಿಜ್ಯ ಸೇವೆಯ ಲಾರಿಗಳ ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಘಾತ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಚಾಲಕರಿಗೆ ಮಾರಕವಾಗಿರುವ ರೀತಿಯಲ್ಲಿ ಕಾಯ್ದೆಗೆ ತಂದಿರುವ ತಿದ್ದುಪಡಿಯನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಲಾರಿ ಮಾಲೀಕರ ಸಂಘ ಗುರುವಾರದಿಂದ ಅನಿರ್ದಿಷ್ಟಾವಧಿ ಲಾರಿ ಮುಷ್ಕರ ಪ್ರಾರಂಭಿಸಿದೆ.

ಮುಷ್ಕರ ಬೆಂಬಲಿಸಿ ಯಶವಂತಪುರ ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್, ಕಂಠೀರವ ನಗರದ ಟರ್ಮಿನಲ್‌ಗಳಲ್ಲಿ ಸಾವಿರಾರು ಲಾರಿಗಳು ನಿಂತಿವೆ. ನಗರದ ಹೊರವಲಯದಲ್ಲೂ ಲಾರಿಗಳು ನಿಂತಿವೆ. ಅಗತ್ಯ ಸೇವೆ ಹೊರತುಪಡಿಸಿ ವಾಣಿಜ್ಯ ಸೇವೆಯ ಎಲ್ಲ ಲಾರಿಗಳ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

'ಅಗತ್ಯ ವಸ್ತುಗಳಾದ ತರಕಾರಿ, ಔಷಧಿ, ಹಾಲು ಬಿಟ್ಟು ಉಳಿದ ಎಲ್ಲ ರೀತಿಯ ಶೇ 80 ರಷ್ಟು ಸರಕು ಸಾಗಾಣಿಕೆ ವಾಹನಗಳು ಗುರುವಾರ ರಸ್ತೆಗೆ ಇಳಿದಿಲ್ಲ' ಎಂದು ಸಂಘದ ಗೌರವಾಧ್ಯಕ್ಷ ಚನ್ನಾರೆಡ್ಡಿ ತಿಳಿಸಿದರು.



ನಗರದ ಯಶವಂತಪುರ ಎಪಿಎಂಸಿ ಮಾರುಕಟ್ಟೆಯಲ್ಲಿ ಸರಕು ಸಾಗಣೆ ಲಾರಿಗಳನ್ನು ನಿಲ್ಲಿಸಿ ಲಾರಿ ಚಾಲಕರು ಮತ್ತು ಮಾಲೀಕರು ಪ್ರತಿಭಟನೆ ಮಾಡಿದರು –ಪ್ರಜಾವಾಣಿ ಚಿತ್ರ

'ವೈಟ್‌ಫೀಲ್ಡ್‌ನಲ್ಲಿರುವ ಸ್ಯಾಟ್‌ಲೈಟ್ ಗೂಡ್ಸ್ ಟರ್ಮಿನಲ್‌ನಲ್ಲಿ ಮೂರು ರೈಲುಗಳು ಸರಕುಗಳನ್ನು ತುಂಬಿಕೊಂಡು ಹಳಿಯಲ್ಲೇ ನಿಂತಿವೆ. ಗೊಬ್ಬರ, ಗೋದಿ, ಆಲೂಗಡ್ಡೆ ಸೇರಿ ಇತರೆ ಸರಕುಗಳು ರೈಲಿನಲ್ಲಿವೆ. ನೈಋತ್ಯ ರೈಲ್ವೆ ಬೆಂಗಳೂರು ವಲಯದಿಂದ ಲಾರಿ ಸಂಘದೊಂದಿಗೆ ಮಾತನಾಡಿ ಸರಕು ಅನ್‌ಲೋಡ್ ಮಾಡಲು ಮನವಿ ಮಾಡಲಾಗಿದೆ' ಎಂದು ವಲಯದ ಸಾರ್ವಜನಿಕ ಸಂಪರ್ಕಾಧಿಕಾರಿ ತ್ರಿನೇತ್ರ ತಿಳಿಸಿದರು.

'ಯಶವಂತಪುರ ಎಪಿಎಂಸಿಗೆ ಪ್ರತಿನಿತ್ಯ 300ಕ್ಕೂ ಹೆಚ್ಚು ಲಾರಿಗಳು ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ಸೇರಿ ಇತರೆ ಕೃಷಿ ಉತ್ಪನ್ನ, ತರಕಾರಿ ಹೊತ್ತು ಬರುತ್ತವೆ. ಆದರೆ, ಗುರುವಾರ 181 ಲಾರಿಗಳು ಮಾತ್ರ ಬಂದಿವೆ. ದಾಸನಪುರ ಮಾರುಕಟ್ಟೆಗೂ ಹೆಚ್ಚು ಲಾರಿಗಳು ಬಂದಿಲ್ಲ. ಆದರೆ ವಹಿವಾಟಿನಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ' ಎಂದು ಯಶವಂತಪುರ ಎಪಿಎಂಸಿ ಕಾರ್ಯದರ್ಶಿ ಕೆ.ಸಿ. ದೊರೆಸ್ವಾಮಿ ಮಾಹಿತಿ ನೀಡಿದರು.

‘ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ಮಸೂದೆ’ಗೆ ಸಂಪುಟ ಒಪ್ಪಿಗೆ

ಚಾಲಕರು, ಕ್ಲೀನರ್‌ಗಳಿಗೆ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವಾಹನಗಳ ಚಾಲಕರು, ನಿರ್ವಾಹಕರು ಮತ್ತು ಕ್ಲೀನರ್‌ಗಳ ಸಾಮಾಜಿಕ ಭದ್ರತೆಗಾಗಿ ರೂಪಿಸಿರುವ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ‘ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಸುಂಕ ಮಸೂದೆ’ಗೆ ಸಂಪುಟ ಒಪ್ಪಿಗೆ ನೀಡಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಸಂಘಟಿತ ಕಾರ್ಮಿಕರಲ್ಲಿ ಮುಖ್ಯವಾಗಿ ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳಾದ ಆಟೊ, ಟ್ಯಾಕ್ಸಿ, ಮ್ಯಾಕ್ಸಿಕ್ಯಾಬ್, ಲಾರಿ, ಬಸ್ ಇತ್ಯಾದಿ ವಾಹನಗಳ ಕಾರ್ಮಿಕರು ಅಪಘಾತದ ಸಂದರ್ಭದಲ್ಲಿ ಮೃತ ಪಟ್ಟರೆ ಅಥವಾ ಅಂಗವೈಕಲ್ಯಕ್ಕೆ ತುತ್ತಾದರೆ ಅವರ ಕುಟುಂಬಗಳಿಗೆ ಪರಿಹಾರ ಮತ್ತು ಅವರ ಮಕ್ಕಳಿಗೆ ಶೈಕ್ಷಣಿಕ ಧನ ಸಹಾಯ ನೀಡಲಾಗುತ್ತದೆ ಎಂದರು.

ನಿಧಿ ಸಂಗ್ರಹಣೆ, ನಿರ್ವಹಣೆ ಮತ್ತು ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ ವಿತರಣೆಗೆ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇದಕ್ಕೆ ಸಂಬಂಧಿಸಿದ ಇತರ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಂಡಳಿ ರಚಿಸಲಾಗುವುದು. ಇದಕ್ಕಾಗಿ ಸಾರಿಗೆ ಇಲಾಖೆಯು ಪ್ರತಿ ವರ್ಷ ಸುಂಕದ ಮೂಲಕ ₹300 ಕೋಟಿ ನಿಧಿ ಸಂಗ್ರಹಿಸಿ ನೀಡಲಿದೆ ಎಂದರು.

ಜಲಜೀವನ್ ಮಿಷನ್: ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ಅನುಮೋದನೆ ನೀಡಿದೆ.

ಪ್ರಮುಖ ತೀರ್ಮಾನಗಳು:

- ಕೇಂದ್ರ ಸರ್ಕಾರದ ಯೋಜನೆಯಾದ ಡಿಜಿಟಲ್ ಇಂಡಿಯಾ ಭೂದಾಖಲೆ ಆಧುನೀಕರಣ ಕಾರ್ಯಕ್ರಮ ದಡಿ 3,455 ಕಂಪ್ಯೂಟರ್, ಸ್ಕ್ಯಾನರ್, ರೋವರ್ ಮತ್ತು ಪ್ರಿಂಟರ್‌ಗಳ ಖರೀದಿಗೆ ₹30.45 ಕೋಟಿ
- ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಷೇರು ಬಂಡವಾಳವನ್ನು ₹600 ಕೋಟಿಯಿಂದ ₹1,200 ಕೋಟಿಗೆ ಹೆಚ್ಚಳ ಮಾಡಲು ಒಪ್ಪಿಗೆ
- ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯು ಬೆಂಗಳೂರಿನ ಹಲಸೂರು ಕೆರೆಯ ಬಳಿ ₹18 ಕೋಟಿ ವೆಚ್ಚದಲ್ಲಿ ಪ್ರವಾಸಿ ಸೌಧ ಕಟ್ಟಡ ನಿರ್ಮಿಸುವ ಪ್ರಸ್ತಾಪಕ್ಕೆ ಒಪ್ಪಿಗೆ

ಇ.ವಿ ವಾಹನ: ರಿಯಾಯಿತಿ

ರಾಜ್ಯದಲ್ಲಿ ನೋಂದಾಯಿತ ವಾಹನಗಳ ಸ್ಕ್ರ್ಯಾಪಿಂಗ್ ನೀತಿ 2022ರ ಕ್ರಮ ಸಂಖ್ಯೆ 9ರ ಪರಿಷ್ಕರಣೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಪರಿಷ್ಕೃತ ನೀತಿಯಡಿ ಯಾರು ತಮ್ಮ ಹಳೇ ವಾಹನವನ್ನು ಗುಜರಿಗೆ ಹಾಕುತ್ತಾರೋ ಅಂತಹವರಿಗೆ ಹೊಸ ವಿದ್ಯುತ್ ಚಾಲಿತ ವಾಹನಗಳ ಖರೀದಿ ಮಾಡುವ ಸಂದರ್ಭದಲ್ಲಿ ಎಕ್ಸ್ ಶೋರೂಂ ಬೆಲೆ ಆಧರಿಸಿ ₹1,000 ದಿಂದ ₹50,000 ದವರೆಗೆ ತೆರಿಗೆ ವಿನಾಯಿತಿ ಸಿಗಲಿದೆ.

ಯುಪಿಸಿಎಲ್‌ಗೆ ₹2,409 ಕೋಟಿ ಪಾವತಿ ಮುಖ್ಯಮಂತ್ರಿಗೆ ಅಧಿಕಾರ

ಅದಾನಿ ಪವರ್ ಲಿಮಿಟೆಡ್ ಜತೆ ವಿಲೀನ ಹೊಂದಿರುವ ಉಡುಪಿ ಪವರ್ ಕಾರ್ಪೊರೇಷನ್ ಲಿಮಿಟೆಡ್‌ಗೆ (ಯುಪಿಸಿಎಲ್) ಪಾವತಿಸಬೇಕಾದ ಲೇಟ್ ಪೇಮೆಂಟ್ ಸರ್‌ಚಾರ್ಜ್ ಕುರಿತು ಸಂಪುಟ ಸದಸ್ಯರು, ಕಾನೂನು ತಜ್ಞರು ಮತ್ತು ಅಡ್ವೊಕೇಟ್ ಜನರಲ್ ಜತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಸಚಿವ ಸಂಪುಟ ಸಭೆ ಮುಖ್ಯಮಂತ್ರಿಗೆ ಅಧಿಕಾರ ನೀಡಿದೆ.

ಎರಡು ಪ್ರಕರಣಗಳಲ್ಲಿ ಒಟ್ಟು ₹2,409 ಕೋಟಿ ಬರಬೇಕಿದೆ ಎಂದು ಯುಪಿಸಿಎಲ್ ಕ್ಲೈಮ್ ಮಾಡಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

2010ರಿಂದ 2018ರ ಅವಧಿಯಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳು ಯುಪಿಸಿಎಲ್‌ನಿಂದ ವಿದ್ಯುತ್ ಖರೀದಿ ಮಾಡಿದ್ದು, ಖರೀದಿ ಮಾಡಿದ ವಿದ್ಯುತ್‌ಗೆ ಹಣಪಾವತಿ ತಡವಾಗಿರುವ ಕಾರಣ ಲೇಟ್ ಪೇಮೆಂಟ್ ಸರ್‌ಚಾರ್ಜ್ ವಿಧಿಸುತ್ತಿದೆ. ಮೊದಲ ಪ್ರಕರಣದಲ್ಲಿ ವಿವಿಧ ಎಸ್ಕಾಂಗಳಿಂದ ₹1,348 ಕೋಟಿ ಕೇಳಿದೆ. ಈ ವಿಚಾರವಾಗಿ ಸಂಪುಟ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆಯಿತು. ತಜ್ಞರು, ಸಂಪುಟ ಸದಸ್ಯರು ಅಡ್ವೊಕೇಟ್ ಜನರಲ್ ಜತೆ ಚರ್ಚಿಸಲು ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಲಾಯಿತು ಎಂದರು.

ಇನ್ನೊಂದು ಪ್ರಕರಣದಲ್ಲಿ ವಿವಿಧ ಎಸ್ಕಾಂಗಳು ಯುಪಿಸಿಎಲ್‌ಗೆ ಪಾವತಿಸಬೇಕಾದ ವಿವಾದಿತ ಮೊತ್ತದ ಬಗ್ಗೆ ಸಿಇಆರ್‌ಸಿ ಒಂದು ಆದೇಶ ಹೊರಡಿಸಿದೆ. ಈ ವಿಚಾರದಲ್ಲಿ ಭಿನ್ನ ಅಭಿಪ್ರಾಯಗಳು ಕೇಳಿ ಬಂದ ಕಾರಣ ತಜ್ಞರ ಜತೆ ಚರ್ಚಿಸಲು ಮುಖ್ಯಮಂತ್ರಿಗೆ ಮನವಿ ಮಾಡಲಾಯಿತು. ಈ ಪ್ರಕರಣದ ಮೊತ್ತ ₹1,061 ಕೋಟಿ ಎಂದು ಪಾಟೀಲ ಹೇಳಿದರು.



ಚೆಸ್ ಟೂರ್ನಿಗೆ ಚಾಲನೆ

ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬಿಯುಡಿಸಿಎ ಆಶ್ರಯದಲ್ಲಿ ಗುರುವಾರ ಆರಂಭವಾದ ಮೊದಲ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು ಕಾಯಿ ಮುನ್ನಡೆಸುವ ಮೂಲಕ ಚಾಲನೆ ನೀಡಿದರು. ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ.ನಾಗೇಂದ್ರ ಅವರೂ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಎಐಡಿವೈಒ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಎಐಡಿವೈಒ ನೇತೃತ್ವದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯದಲ್ಲಿ ಖಾಲಿಯಿರುವ ಸರ್ಕಾರಿ ಹುದ್ದೆಗಳ ಭರ್ತಿ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಉದ್ಯೋಗ ಆಕಾಂಕ್ಷಿಗಳು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ಈ ಹಿಂದೆ ನಡೆದಿರುವ ನೇಮಕಾತಿಗಳಲ್ಲಿ ಭ್ರಷ್ಟಾಚಾರ ನಡೆದಿದ್ದು ಆರೋಪಿಗಳ ವಿರುದ್ಧ ಕ್ರಮ ಜರುಗಿಸುವಂತೆ ಪ್ರತಿಭಟನಕಾರರು ಆಗ್ರಹಿಸಿದರು.

‘ರಾಜ್ಯದಲ್ಲಿ 2 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿಯಿದ್ದರೂ ನೇಮಕಾತಿ ನಡೆಸುತ್ತಿಲ್ಲ. ನೇಮಕಾತಿ ನಡೆಸಿದರೆ ನಮಗೇನು ಲಾಭ ಎಂಬ ಧೋರಣೆ ಖಂಡನೀಯ’ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್‌.ಸಂತೋಷ್ ಹೆಗ್ಡೆ ಹೇಳಿದರು.

‘ರಾಜಕೀಯ ಕ್ಷೇತ್ರವು ಸಮಾಜ ಸೇವೆಗೆ ಬದಲಾಗಿ ಹಣ ಮಾಡುವ ದಂಧೆಯಾಗಿದೆ. ನ್ಯಾಯಾಧೀಶರು, ಐಪಿಎಸ್, ಐಎಎಸ್ ಅಧಿಕಾರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ರಾಜಕೀಯ ಸೇರುತ್ತಿದ್ದಾರೆ. ದುರಾಸೆಯು ರಾಜಕಾರಣಿಗಳನ್ನು ಯಾವ ಹಂತಕ್ಕಾದರೂ ದೂಡುತ್ತದೆ’ ಎಂದು ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಟಿ.ಆರ್. ಚಂದ್ರಶೇಖರ್ ಮಾತನಾಡಿ, ‘ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ನಮ್ಮ ದೇಶ 125 ದೇಶಗಳಲ್ಲಿ 111ನೇ ಸ್ಥಾನದಲ್ಲಿದೆ. ಆಳುವ ಸರ್ಕಾರಗಳ ಆರ್ಥಿಕ ನೀತಿಗಳು ಕಾರ್ಪೊರೇಟ್ ಪರ, ಖಾಸಗೀಕರಣದ ಪರವಾಗಿವೆ. ಗರಿಷ್ಠ ಲಾಭ ಮಾಡುವುದು ಖಾಸಗಿಯವರ ಉದ್ದೇಶವಾಗಿರುವುದರಿಂದ ಕಾರ್ಮಿಕರ ಸಂಖ್ಯೆ ಕಡಿಮೆ ಮಾಡಿ ಯಾಂತ್ರೀಕರಣದ ಮೊರೆ ಹೋಗುತ್ತಾರೆ. ಹೀಗಾಗಿ, ಸರ್ಕಾರದ ನೀತಿಗಳು ಉದ್ಯೋಗದ ಪರವಾಗಿ ರೂಪುಗೊಳ್ಳಬೇಕು’ ಎಂದು ಆಗ್ರಹಿಸಿದರು.

> **ನಿರುದ್ಯೋಗ ಹೆಚ್ಚಾದಂತೆ ಆರ್ಥಿಕ, ಸಾಮಾಜಿಕ ಸಮಸ್ಯೆಗಳೂ ಹೆಚ್ಚಲಿವೆ. ಯುವಜನರೇ ಸಮಸ್ಯೆಗಳ ವಿರುದ್ಧ ಹೋರಾಡಬೇಕು**
> **ಎನ್‌.ಸಂತೋಷ್ ಹೆಗ್ಡೆ**
> ನಿವೃತ್ತ ಲೋಕಾಯುಕ್ತ

ಪ್ರತಿಭಟನೆಯಲ್ಲಿ ಎಐಡಿವೈಒನ ಅಖಿಲ ಭಾರತ ಉಪಾಧ್ಯಕ್ಷರಾದ ಜಿ.ಎಸ್‌.ಕುಮಾರ್, ರಾಜಗೋಪಾಲ್, ರಾಜ್ಯ ಅಧ್ಯಕ್ಷ ಶರಣಪ್ಪ ಉದ್ಬಾಳ್, ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ಹಾಗೂ ನಾ.ದಿವಾಕರ್ ಪಾಲ್ಗೊಂಡಿದ್ದರು.

ಹಕ್ಕೊತ್ತಾಯಗಳು

- ಕೇಂದ್ರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 9.64 ಲಕ್ಷ ಹುದ್ದೆ ಮತ್ತು ರಾಜ್ಯದ 43 ಇಲಾಖೆಗಳಲ್ಲಿ ಖಾಲಿಯಿರುವ ಸುಮಾರು 2.58 ಲಕ್ಷ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು
- ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ವರ್ಷದಲ್ಲಿ ಕನಿಷ್ಠ 200 ದಿನಗಳ ಕಾಲ ಕೆಲಸ ನೀಡಬೇಕು. ದಿನಗೂಲಿಯನ್ನು ₹600ಕ್ಕೆ ಹೆಚ್ಚಿಸಬೇಕು
- ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಬೇಕು
- ಸ್ವಿಗ್ಗಿ, ಜೊಮಾಟೊ, ಓಲಾ, ಉಬರ್‌ನಲ್ಲಿ ಕೆಲಸ ಮಾಡುತ್ತಿರುವವರನ್ನು ಕಾರ್ಮಿಕರೆಂದು ಪರಿಗಣಿಸಬೇಕು
- ಯುವಜನರ ಪರವಾದ ಉದ್ಯೋಗ ನೀತಿ ಜಾರಿಗೆ ತರಬೇಕು
- ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಬೇಕು. ಎಲ್ಲ ಗುತ್ತಿಗೆ ಕಾರ್ಮಿಕರಿಗೆ ಕಾಯಂ ಉದ್ಯೋಗ ನೀಡಬೇಕು
- ಕೆಪಿಎಸ್‌ಸಿಯನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸಲು ಹೋಟಾ ಸಮಿತಿಯ ಶಿಫಾರಸು ಜಾರಿಗೊಳಿಸಬೇಕು

‘ಅಲ್ಲಮ ಪ್ರಭು ಹೆಸರು: ನನಸಾದ ಕನಸು’

ಪ್ರಜಾವಾಣಿ ವಾರ್ತೆ



ಮಧು ಬಂಗಾರಪ್ಪ

ಬೆಂಗಳೂರು: ‘ಶಿವಮೊಗ್ಗದ 46.32 ಎಕರೆ ವಿಸ್ತೀರ್ಣದ ಜೈಲು ಆವರಣದ ಮೈದಾನಕ್ಕೆ (ಸ್ವಾತಂತ್ರ್ಯ ಉದ್ಯಾನ) ಅಲ್ಲಮಪ್ರಭು ಹೆಸರು ಇಡುವ ಮೂಲಕ ಜಿಲ್ಲೆಯ ಜನರ ದಶಕಗಳ ಕನಸನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ನನಸು ಮಾಡಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಸಂತಸ ಹಂಚಿಕೊಂಡಿದ್ದಾರೆ.

‘ಸಾಮಾಜಿಕ ನ್ಯಾಯದ ಕಲ್ಪನೆಯನ್ನು ಸಾರಿದ ಶರಣ ಅಲ್ಲಮಪ್ರಭು ಅವರು ಶಿಕಾರಿಪುರದ ಬಳ್ಳಿಗಾವೆಯವರು. 12ನೇ ಶತಮಾನದಲ್ಲಿ ಅನುಭವ ಮಂಟಪದ ಅಧ್ಯಕ್ಷರಾಗಿ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಮೊದಲಿಗೆ ಈ ನೆಲದಲ್ಲಿ ಸ್ಥಾಪಿಸಿದ ಅವರ ಹೆಸರನ್ನು ಶಿವಮೊಗ್ಗದ ಸ್ವಾತಂತ್ರ್ಯ ಉದ್ಯಾನಕ್ಕೆ ಇಡಬೇಕೆಂಬುದು ಜನರ ಒತ್ತಾಸೆ ಆಗಿತ್ತು. ಜಿಲ್ಲೆಯ ಜನರ ಬೇಡಿಕೆಗೆ ಸ್ಪಂದಿಸಿರುವುದು, ಕೊಟ್ಟ ಮಾತಿನಂತೆ ಸರ್ಕಾರ ನಡೆದುಕೊಂಡಿರುವುದಕ್ಕೆ ನಿದರ್ಶನ’ ಎಂದು ಅವರು ಬಣ್ಣಿಸಿದ್ದಾರೆ.

‘ಶಿವಮೊಗ್ಗದಲ್ಲಿ ಇದೇ 12ರಂದು ನಡೆದ 5ನೇ ಗ್ಯಾರಂಟಿ ಯೋಜನೆ ‘ಯುವನಿಧಿ’ ಕಾರ್ಯಕ್ರಮದ ಸಂದರ್ಭದಲ್ಲಿ, ಉದ್ಯಾನಕ್ಕೆ ಅಲ್ಲಮಪ್ರಭು ಹೆಸರಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಲಾಗಿತ್ತು. ಗುರುವಾರ ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸರ್ಕಾರದ ಈ ನಿರ್ಧಾರ ಸಮಯೋಚಿತವಾಗಿದೆ’ ಎಂದರು.

ಉಪನೋಂದಣಾಧಿಕಾರಿ ಕಚೇರಿ: ಐ.ಟಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 3 ಉಪನೋಂದಣಾಧಿಕಾರಿ ಕಚೇರಿಗಳಿಗೆ ಭೇಟಿ ನೀಡಿದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ತಂಡ ದಾಖಲೆಗಳನ್ನು ಪರಿಶೀಲಿಸಿದೆ.

₹30 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಆಸ್ತಿ ನೋಂದಣಿ ಮಾಡಿಸಿದವರ ವಿವರಗಳನ್ನು ಕಾಲಕಾಲಕ್ಕೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಬೇಕು. ಇಂದಿರಾನಗರ, ಹೆಬ್ಬಾಳ ಹಾಗೂ ಹಲಸೂರು ಉಪನೋಂದಣಾಧಿಕಾರಿ ಕಚೇರಿಗಳು ವಿವರಗಳನ್ನು ಸಮರ್ಪಕವಾಗಿ ಸಲ್ಲಿಸಿರಲಿಲ್ಲ.


ದೊಡ್ಡ ಪ್ರಮಾಣದ ಆಸ್ತಿ ಖರೀದಿ ಮತ್ತು ಮಾರಾಟ ಮಾಡಿದವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಲು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಈ ಮೂರು ಕಚೇರಿಗಳಿಗೆ ಭೇಟಿ ನೀಡಿದ್ದರು ಎಂದು ಮೂಲಗಳು ಹೇಳಿವೆ.

ಜಮೀನು, ಅಪಾರ್ಟ್‌ಮೆಂಟ್, ಮನೆ ಖರೀದಿಸಿದ ಮೌಲ್ಯ ₹30 ಲಕ್ಷಕ್ಕಿಂತ ಹೆಚ್ಚಾಗಿದ್ದರೆ ಈ ಮಾಹಿತಿಗಳನ್ನು ಸಂಬಂಧಪಟ್ಟ ಉಪನೋಂದಣಾಧಿಕಾರಿ ಕಚೇರಿಗಳು ಆದಾಯ ತೆರಿಗೆ ಇಲಾಖೆಗೆ ರವಾನಿಸಬೇಕು. ಆಸ್ತಿ ಖರೀದಿಸಿದವರು ಯಾವ ರೂಪದಲ್ಲಿ (ಚೆಕ್, ಡಿ.ಡಿ ಅಥವಾ ನಗದು) ಹಣ ನೀಡಿದ್ದಾರೆ ಎಂಬ ವಿವರವು ಕ್ರಯಪತ್ರದಲ್ಲಿ ಇರುತ್ತದೆ. ಅದರ ಮಾಹಿತಿ ಕಳುಹಿಸಬೇಕಿದೆ. ಇದರ ಆಧಾರದ ಮೇಲೆ, ಹಣದ ಮೂಲವನ್ನು ಇಲಾಖೆ ಪತ್ತೆ ಹಚ್ಚುತ್ತದೆ. ಬೃಹತ್ ಮೊತ್ತದ ವ್ಯವಹಾರ ನಡೆಸಿದವರ ಮಾಹಿತಿಗಾಗಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಉಪನೋಂದಣಾಧಿಕಾರಿ ಕಚೇರಿಗಳಿಗೆ ಭೇಟಿ ನೀಡಿ, ದಾಖಲೆ ಪರಿಶೀಲನೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಶ್ರೀರಕ್ಷ ಪ್ರಿಯರನ್, ಅಜಯ್ ವಾರಿಯರ್ ಹಾಡಿರುವ ಗೀತೆಗಳ ಬಿಡುಗಡೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಡಾ. ಜಯಶ್ರೀ ಅರವಿಂದ್ ಪ್ರತಿಷ್ಠಾನ, ಸ್ಥಳ: ಉತ್ತರಾದಿ ಮಠ, ನ್ಯಾಷನಲ್ ಕಾಲೇಜಿನ ಎದುರು, ಬಸವನಗುಡಿ, ಬೆಳಿಗ್ಗೆ 9

ಉದ್ಯಮಿ ಒಕ್ಕಲಿಗ ‘ಫಸ್ಟ್ ಸರ್ಕಲ್ ಎಕ್ಸ್‌ಪೊ-2024, ವಾರ್ಷಿಕ ಸಮಾವೇಶ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಅತಿಥಿಗಳು: ಎಚ್‌. ಡಿ. ದೇವೇಗೌಡ, ಎಸ್‌.ಎಂ. ಕೃಷ್ಣ, ಬಿ.ಎನ್‌. ಬಚ್ಚೇಗೌಡ, ಕೆ. ಗೋವಿಂದರಾಜು, ರಾಮಲಿಂಗಾರೆಡ್ಡಿ, ಎನ್‌. ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ಆಯೋಜನೆ: ಒಕ್ಕಲಿಗ ಉದ್ಯಮಿ, ಸ್ಥಳ: ಗಾಯತ್ರಿ ವಿಹಾರ, ಗೇಟ್ ಸಂಖ್ಯೆ-4, ಅರಮನೆ ಮೈದಾನ, ಬೆಳಿಗ್ಗೆ 10



ನಿರ್ಮಲಾನಂದನಾಥ ಸ್ವಾಮೀಜಿ

‘ದ್ರೌಪದಿ ಪ್ರತಾಪ’, ‘ಬ್ರಹ್ಮಕಪಾಲ’ ಯಕ್ಷಗಾನ ತರಗತಿಯ ತರಬೇತಿ: ತರಬೇತುದಾರರು: ಸುಬ್ರಾಯ ಹೆಬ್ಬಾರ್ ಬಿ., ಬೇಗಾರ ಶಿವಕುಮಾರ್, ಆಯೋಜನೆ: ಬಂಟರ ಸಂಘ ಬೆಂಗಳೂರು, ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ, ಮಧ್ಯಾಹ್ನ 1ರಿಂದ

ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ‘ಚತುರ್ಥ ಚರಣ್ ಕಬ್ಸ್, ಹೀರಕ್ ಪಂಖ್ ಬುಲ್‌ಬುಲ್ಸ್, ರಾಜ್ಯ ಪುರಸ್ಕಾರ’: ಥಾವರಚಂದ್ ಗೆಹಲೋತ್, ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ರಿತೇಶ್ ಕುಮಾರ್ ಸಿಂಗ್, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಗಾಜಿನಮನೆ, ರಾಜಭವನ, ಮಧ್ಯಾಹ್ನ 3.30

ಕನಕದಾಸರ ಜಯಂತಿ: ಉದ್ಘಾಟನೆ: ಮಲ್ಲಿಕಾರ್ಜುನ ಬಾಲದಂಡಿ, ದಿನದರ್ಶಿಕೆ ಬಿಡುಗಡೆ: ಎಚ್‌. ಕಾಂತರಾಜ, ಅಧ್ಯಕ್ಷತೆ: ಸಿ.ಎಂ. ಧನಂಜಯ, ಅತಿಥಿಗಳು: ಕೆಂಪಣ್ಣ, ಶಿವಶಂಕರ್ ಯಡ್ರಾಮಿ, ಬಸವರಾಜ ಬಸಲಗುಂಡಿ, ಕೃಷ್ಣಮೂರ್ತಿ, ಆಯೋಜನೆ: ಕನಕ ವಕೀಲರ ವೇದಿಕೆ, ಸ್ಥಳ: ಮಹಾರಾಷ್ಟ್ರ ಮಂಡಲ, ಗಾಂಧಿನಗರ, ಸಂಜೆ 5.30

ಡಾ. ಬಾಲಗಂಗಾಧರನಾಥ ಸ್ವಾಮೀಜಿ ಅವರ ಜಯಂತಿ, ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್‌ನ ಬೆಳ್ಳಿ ಹಬ್ಬ: ಆಶೀರ್ವಚನ: ನಿರ್ಮಲಾನಂದನಾಥ ಸ್ವಾಮೀಜಿ, ‘ಜೀವನಸೂಕ್ತಿ ಸಾರ’ ಪುಸ್ತಕ ಬಿಡುಗಡೆ: ಸಿದ್ಧಲಿಂಗ ಸ್ವಾಮೀಜಿ, ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಉಪಸ್ಥಿತಿ: ಸೌಮ್ಯನಾಥ ಸ್ವಾಮೀಜಿ, ಅಧ್ಯಕ್ಷತೆ: ಎಚ್‌.ಡಿ. ದೇವೇಗೌಡ, ‘ಗುರುವಾಣಿ’ ಪುಸ್ತಕ ಬಿಡುಗಡೆ: ಎಸ್‌.ಎಂ. ಕೃಷ್ಣ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಎಚ್‌.ಡಿ. ಕುಮಾರಸ್ವಾಮಿ, ಆರ್. ಅಶೋಕ, ರಾಮಲಿಂಗಾರೆಡ್ಡಿ, ಎನ್‌. ಚಲುವರಾಯಸ್ವಾಮಿ, ಡಾ.ಸಿ.ಎನ್‌. ಅಶ್ವತ್ಥನಾರಾಯಣ, ಎಂ. ಕೃಷ್ಣಪ್ಪ, ಡಿ. ಹನುಮಂತಯ್ಯ, ಆಯೋಜನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್, ಸ್ಥಳ: ಟೌನ್‌ಹಾಲ್, ಜೆ.ಸಿ. ರಸ್ತೆ, ಸಂಜೆ 4

ಸರ್ ಐಸಾಕ್ ಪಿಟ್‌ಮನ್ ಜಯಂತಿ, ಬಿ. ಲೂಥಿವರ ಸಂಸ್ಮರಣೆ: ಅತಿಥಿಗಳು: ಎ.ಎಂ. ಮರುಳಿನಾಥ, ರವೀಂದ್ರ ಟಿ.ಎಲ್., ಅಧ್ಯಕ್ಷತೆ: ಶಿವಣ್ಣ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಶೀಘ್ರಲಿಪಿಗಾರರ ಸಂಘ, ಕಂದಾಯ ಭವನ, ಕೆ.ಜಿ. ರಸ್ತೆ, ಸಂಜೆ 5.30

‘ರಾಮಾಯಣ ಚಿತ್ರ ಮತ್ತು ಪರಿಕಲ್ಪನೆ’ ಕುರಿತ ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ: ಲಿಂಗರಾಜ ಗಾಂಧಿ, ಉಪಸ್ಥಿತಿ: ಎಂ.ಎಸ್‌. ಮೂರ್ತಿ, ಅಧ್ಯಕ್ಷತೆ: ಬಿ.ಎಲ್‌. ಶಂಕರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಚೈತನ್ಯ ಸಂಜೆ: ‘ಶರಣ ಚಿಂತಕ, ವಚನಕಾರ ಮಹಾದೇವ ಬಣಕಾರ’ ಕುರಿತು ಉಪನ್ಯಾಸ: ಪುಷ್ಪಾ ಬಸವರಾಜ್ ಬಣಕಾರ, ಅಧ್ಯಕ್ಷತೆ: ಫಾಲನೇತ್ರ, ಉಪಸ್ಥಿತಿ: ದಿಬ್ಬೂರು ಎಸ್‌. ಗಿರೀಶ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಜಯನಗರ, ಸಂಜೆ 5.30

ಕೀರ್ತನೆಗಳ ಗಾಯನ: ಎಂ.ಬಿ. ಹರಿಹರನ್, ಎಸ್‌. ಅಶೋಕ್, ಪಿಟೀಲು: ವೈಭವ್ ರಮಣಿ, ಮೃದಂಗ: ಫಣೀಂದ್ರ ಭಾಸ್ಕರ್, ಖಂಜೀರಾ: ಸುನಾದ್ ಆನೂರ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ರಮಣ ಮಹರ್ಷಿ ಅಕಾಡೆಮಿ, ಜೆ.ಪಿ. ನಗರ, ಸಂಜೆ 5.30



ಹೊಸ ಚಿಗುರಿನ ಜೊತೆ ಹಳೆ ಬೇರಿನ ರಘು

ಭಿನ್ನವಾದ ಪಾತ್ರ, ಕಥೆಯುಳ್ಳ ಸಿನಿಮಾಗಳ ಮೂಲಕ ಪ್ರೇಕ್ಷಕರನ್ನು ರಂಜಿಸುತ್ತಿರುವ ರಂಗಾಯಣ ರಘು ಇದೀಗ 'ರಂಗಸಮುದ್ರ'ಕ್ಕೆ ಇಳಿದಿದ್ದಾರೆ. ಈ ಸಿನಿಮಾ ಇಂದು(ಜ.19) ತೆರೆಕಾಣುತ್ತಿದ್ದು, ಅವರೊಂದಿಗೆ ಒಂದಿಷ್ಟು ಮಾತುಕತೆ...



ರಂಗಸಮುದ್ರ
ರಂಗಾಯಣ ರಘು

ಅಭಿಲಾಷ್ ಪಿ.ಎಸ್.

- **ನೆಲದ ಕಥೆ ಹೊತ್ತ ಸಿನಿಮಾಗಳು ಹೆಚ್ಚಾಗುತ್ತಿವೆ. ಈ ಬೆಳವಣಿಗೆ ಕಂಡರೆ ಏನನ್ನಿಸುತ್ತದೆ?**

ಚಿತ್ರರಂಗ ವ್ಯಾಪಾರದ ಮೇಲೆ ನಿಂತಿದೆ. ಒಮ್ಮೆ ಹಿಂದಿರುಗಿ ನೋಡಿದರೆ, ಒಂದು ಸೀಸನ್ ಪೂರ್ತಿ ರಿಮೇಕ್ ಸಿನಿಮಾಗಳೇ ಬಂದವು. ಅವುಗಳಲ್ಲಿ ಒಂದಿಷ್ಟು ಗೆದ್ದವು. 'ಮುಂಗಾರು ಮಳೆ', 'ದುನಿಯಾ' ಸಿನಿಮಾ ಬಂದ ಬಳಿಕ ನಮ್ಮದೇ ಕಥೆಗಳ ಸಿನಿಮಾಗಳು ಹೆಚ್ಚಾದವು. ಒಟಿಟಿ ಯುಗದಲ್ಲಿ ಕಂಟೆಂಟ್ ಸಿನಿಮಾಗಳತ್ತ ಒಲವು ಜಾಸ್ತಿಯಾಯಿತು. ನಮ್ಮಲ್ಲಿ ಕಂಟೆಂಟ್ ಸಿನಿಮಾಗಳು ಇರಲಿಲ್ಲ ಎಂದೇನು ಅಲ್ಲ. 1970–80ರ ದಶಕ ಕನ್ನಡ ಚಿತ್ರರಂಗದ ಸುವರ್ಣ ಯುಗ. ನೆಲದ ಕಥೆಗಳು ಹುಟ್ಟಿಕೊಂಡಿದ್ದೇ ಆಗ. 'ಬಂಗಾರದ ಮನುಷ್ಯ', 'ಬೂತಯ್ಯನ ಮಗ ಅಯ್ಯು' ಸಿನಿಮಾಗಳಿರಲಿ; ಪುಟ್ಟಣ್ಣ, ಎಂ.ಎಸ್.ಸತ್ಯು, ಕಾಸರವಳ್ಳಿ ಹೀಗೆ ಹಲವರ ಸಿನಿಮಾಗಳಿರಲಿ... ನಮ್ಮತನ ಅವುಗಳಲ್ಲಿ ಇತ್ತು. ನಮಗೆ ನೆಲದ ಕಥೆ ಏಕೆ ಇಷ್ಟವಾಗುತ್ತಿದೆ ಎಂದರೆ, ಜನರು ಇಂತಹ ಕಥೆಗಳನ್ನು ಇಷ್ಟಪಡುತ್ತಿದ್ದಾರೆ. ನೆಲದ ಕಥೆ ದೃಷ್ಟಿಯಿಂದ ಇತ್ತೀಚೆಗೆ ಯಶಸ್ಸು ಕಂಡ ಸಿನಿಮಾ 'ಕಾಂತಾರ'. ಪಕ್ಕಾ ಒಂದು ನೆಲದ ಕಥೆ, ಸಾಮಾನ್ಯವಾಗಿ ಒಂದು ಸಣ್ಣ ಸಿನಿಮಾ ಮಾಡಿ ಇಡೀ ಪ್ರಪಂಚ ಮೆಚ್ಚಿಕೊಳ್ಳುವಂತೆ ಮಾಡಿತು ಆ ಸಿನಿಮಾ. ಎಲ್ಲ ಭಾಗಗಳಿಂದಲೂ ಕನ್ನಡದ ಸಂಸ್ಕೃತಿ ಮೇಲೆ ಪ್ರಭಾವ ಇದೆ. ಆದರೂ ತನ್ನತನ ಎನ್ನುವುದು ಕನ್ನಡಕ್ಕಿದೆ. ಅದನ್ನು ಗಟ್ಟಿಯಾಗಿ ಉಳಿಸಿಕೊಂಡೂ ಬಂದಿದೆ. ತೆಲುಗಿನವರು ಬಡತನದ ಸಿನಿಮಾ ಮಾಡುತ್ತಿರಲಿಲ್ಲ ಎನ್ನುವುದನ್ನು ಗಮಿಸಬೇಕು. 'ಕಾಂತಾರ' ಬಂದ ಬಳಿಕ ಎಲ್ಲರೂ ದೈವಕ್ಕೆ ಸಂಬಂಧಿಸಿದ, ಜನಪದದ ವಿಷಯಾಸಕ್ತರಾಗಿದ್ದಾರೆ. ಮಲಯಾಳದವರು ನಮ್ಮ ಹೊಸ ಅಲೆ ಚಿತ್ರಗಳಿಂದ ಪ್ರಭಾವಿತರಾದವರು. ನಮ್ಮ ಪ್ರೇಕ್ಷಕ ಒಳ್ಳೆಯ ಕನ್ನಡ ಸಿನಿಮಾಗಳನ್ನು ಎಂದಿಗೂ ಕೈಬಿಟ್ಟಿಲ್ಲ.

- **ಸಿನಿಮಾಗಳು ಭಾಷಾ ಪ್ರಯೋಗದತ್ತ ಹೆಜ್ಜೆ ಇಟ್ಟಿವೆ. ನಿಮ್ಮ ಅನುಭವ...**

ಶಿಲ್ಪಿಗೆ, ಕಲೆಗಾರನಿಗೆ ಭಾಷೆ ಬೇಕೆ? ಒಂದು ಚಿತ್ರದ ಮೂಲಕ ಆತ ಕಥೆ ಹೇಳುತ್ತಾನೆ. ನಾಟಕಗಳಲ್ಲಿ ಈ ಭಾಷಾ ಪ್ರಯೋಗ ಸಾಕಷ್ಟು ಆಗಿದೆ. ಅವರವರ ಭಾಷೆಗಳಲ್ಲಿ ನಾಟಕಗಳನ್ನು ರಚಿಸಿದರು. ಇದು ಪ್ರೇಕ್ಷಕರಿಗೆ ಹಿಡಿಸಿತು. ಭಾಷೆಯ ಶುದ್ಧತೆಯ ಜೊತೆಗೆ ಜನರಿಗೆ ಅದನ್ನು ತಲುಪಿಸುವುದು ಅಷ್ಟೇ ಮುಖ್ಯ. ಸಿನಿಮಾದಲ್ಲಿ ಯಾಕೋ ಹಿಂಜರಿಕೆ ಇತ್ತು. ಒಂದು ಸಿದ್ಧ ಭಾಷೆ ಎಂದು ಮಾಡಿದರು. ರಾಜ್‌ಕುಮಾರ್ ಅವರು ಭಾಷಾ ಪ್ರಯೋಗ ಮಾಡುತ್ತಾ ಬಂದರು. ಅವರು ಪೌರಾಣಿಕ, ಜನಪದ, ಭಕ್ತಿ ಪ್ರಧಾನ ಸಿನಿಮಾಗಳನ್ನು ಮಾಡಿದರು. ಅಲ್ಲಿ ಅವರ ಭಾಷಾ ಪ್ರಯೋಗವನ್ನು ಗಮನಿಸಬಹುದು. ಪ್ರಸ್ತುತ ಕನ್ನಡದೊಳಗಿರುವ ಹಲವು ಸ್ಲ್ಯಾಂಗ್‌ಗಳ ಪ್ರಯೋಗ ನಡೆಯುತ್ತಿದೆ. ಉಪೇಂದ್ರ, ಜಗ್ಗೇಶ್ ತಮ್ಮ ಸಿನಿಮಾಗಳಲ್ಲಿ ಬೆಂಗಳೂರಿನ ಕನ್ನಡ ಸ್ಲ್ಯಾಂಗ್ ಅನ್ನು ತಂದರು. ಮಳವಳ್ಳಿಗೇ ಒಂದು ಸ್ಲ್ಯಾಂಗ್ ಇದೆ. ಅದನ್ನು 'ಟಗರು ಪಲ್ಯ'ದಲ್ಲಿ ಕಾಣಬಹುದು. ನಾನು ಹಲವು ಸ್ಲ್ಯಾಂಗ್‌ಗಳನ್ನು ಸಿನಿಮಾಗಳಲ್ಲಿ ಬಳಸಿಕೊಳ್ಳುತ್ತಲೇ ಬಂದಿದ್ದೇನೆ. 'ರಂಗಸಮುದ್ರ'ದಲ್ಲಿ ಉತ್ತರ ಕರ್ನಾಟಕದ ಭಾಷೆ ಇದೆ. 'ಮೂರನೇ ಕೃಷ್ಣಪ್ಪ' ಸಿನಿಮಾದಲ್ಲಿ 'ಬಾಪ್ರೋ, ಕುಂತ್ಕಳ್ಳಪ್ರೋ...' ಹೀಗೆ ಬೆಂಗಳೂರು ಸುತ್ತಮುತ್ತಲಿನ ಪ್ರಾಂತ್ಯದ ಭಾಷೆ ಬಳಕೆಯಾಗಿದೆ. ಅಲ್ಲಿ ಬಹುವಚನಗಳಿಲ್ಲ. 'ಸ್ವಾಮಿ' ಎನ್ನುವುದೇ ಬಹುವಚನ. ಇಡೀ ಸ್ಕ್ರಿಪ್ಟ್ ಕೂಡ ಅದೇ ಸ್ಲ್ಯಾಂಗ್‌ನಲ್ಲಿದೆ. 'ಕಾಂತಾರ'ದಲ್ಲಿನ ಮಂಗಳೂರು–ಕುಂದಗನ್ನಡ ಉತ್ತರ ಕರ್ನಾಟಕ ಜನಕ್ಕೆ ಅರ್ಥ ಆಗಿದೆಯಲ್ವೇ? ಕಥೆ ಮುಖ್ಯವಾಗುತ್ತದೆ ಅಷ್ಟೇ. ಈ ದೃಷ್ಟಿಯಲ್ಲಿ ಇದೊಂದು ಒಳ್ಳೆಯ ಪ್ರಯೋಗ.



ಕೈಯಲ್ಲಿರುವ ಪ್ರಾಜೆಕ್ಟ್‌ಗಳು

- ಶಾಖಾಹಾರಿ • ಅಜ್ಞಾತವಾಸಿ • ಮೂರನೇ ಕೃಷ್ಣಪ್ಪ • ಕೃಷ್ಣಂ ಪ್ರಣಯ ಸಖಿ • ಭೀಮ • ಸನ್ ಆಫ್ ಮುತ್ತಣ್ಣ • ಚೀತಾ • ರೋಸಿ • ಪೌಡರ್ • ಉತ್ತರಕಾಂಡ

- **'ರಂಗಸಮುದ್ರ'ದಲ್ಲಿ ನಿಮ್ಮ ಪಾತ್ರದ ಬಗ್ಗೆ...**

ನನ್ನದು ಡೊಳ್ಳು ನುಡಿಸುವವನ ಪಾತ್ರ. ಹಾಡುವುದನ್ನೂ ಕಲಿತಿರುತ್ತಾನೆ. ಹಲವು ಆಕರ್ಷಣೆಯ ಈ ಕಾಲದಲ್ಲಿ ಡೊಳ್ಳು ಬಾರಿಸುವುದನ್ನು ಇನ್ನೊಬ್ಬರಿಗೆ ಕಲಿಸಿಕೊಡಬೇಕು ಎನ್ನುವ ತುಡಿತ ಅವನದ್ದು. ಗುಡಿ ಮುಂದೆ ಕುಳಿತು, 'ನಾನು ಬಾರಿಸುತ್ತೇನೆ ನೀನು ಒಪ್ಪಿಸಿಕೋ' ಎಂದು ಕೇಳಿಕೊಳ್ಳುವ ಮನಸ್ಸಿನಾತ. ಪಾತ್ರವಾಗಿ ಡೊಳ್ಳು ಬಾರಿಸುತ್ತಾನೆ ಅಷ್ಟೇ. ಇದುವೇ ಕಥೆಯಲ್ಲ. ಅಜ್ಜನಿಗೆ ಕಾರು ತಂದುಕೊಡಬೇಕು ಎನ್ನುವ ಮೊಮ್ಮಗನ ಆಸೆಯ ಸುತ್ತ ಮುಂದಿನ ಕಥೆ ಇದೆ. ಕಾರು ಒಂದು ಪಾತ್ರದಂತಿದೆ. ಹಲವು ವಿಷಯಗಳ ಮಿಶ್ರಣ ಈ ಸಿನಿಮಾದಲ್ಲಿದೆ.

ಸಿನಿಮಾದಲ್ಲಿ ಜಿಲ್ಲಾಧಿಕಾರಿ ಪಾತ್ರದಲ್ಲಿ ಪುನೀತ್ ನಟಿಸಬೇಕಿತ್ತು. ಮಕ್ಕಳಿಗೆ ವಿದ್ಯೆಯ ಬಗ್ಗೆ ತಿಳಿಹೇಳುವ ಪಾತ್ರ ಅವರದಾಗಿತ್ತು. ಸಿನಿಮಾದ ಶೂಟಿಂಗ್ ಪೂರ್ಣ ಮುಗಿದಿತ್ತು. ಸಿನಿಮಾ ನೋಡಿದ್ದ ಪುನೀತ್ ಅವರು ಇದು ದೊಡ್ಡವರ ಸಿನಿಮಾವೂ ಹೌದು, ಮಕ್ಕಳ ಸಿನಿಮಾವೂ ಹೌದು; ಬೇರೆ ರೀತಿಯೇ ಇದೆ ಎಂದು ಮೆಚ್ಚಿಕೊಂಡಿದ್ದರು. ನ.5ಕ್ಕೆ ಡೇಟ್ ಕೊಟ್ಟಿದ್ದರು. ಅ.29ಕ್ಕೆ ಅವರಿಲ್ಲವಾದರು.

- **ಮಗದೊಮ್ಮೆ ಹೊಸ ಚಿಗುರಿನ ಜೊತೆ ಸೇರಿಕೊಳ್ಳುತ್ತಿದ್ದೀರಿ...**

ಹಳೆ ಬೇರು ಅನುಭವ ಹೊಂದಿರುತ್ತದೆ. ಪ್ರತಿಭೆಗೆ ಹಿರಿತನವಿಲ್ಲ. ತಾಂತ್ರಿಕತೆಗೆ ಇದೆ. ಅನುಭವ ಮತ್ತು ಉತ್ಸಾಹ ಮೇಳೈಸಬೇಕು. ಹಾಗೆಂದು ಹುರುಪು ಇದ್ದರಷ್ಟೇ ಸಾಲದು. ಅನುಭವವೂ ಜೊತೆಗಿರಬೇಕು.

- **ಪಾತ್ರದ ಆಯ್ಕೆ ವಿಚಾರಕ್ಕೆ ಬಂದಾಗ ಬದಲಾದ ನಿಯಮಗಳು ಏನು?**

ಆರಂಭದಲ್ಲಿ ಅವಕಾಶವನ್ನು ಕೈಚಾಚಿ ಕೇಳುತ್ತಿದ್ದೆ. ಇಲ್ಲಿಯವರೆಗಿನ ಸುಮಾರು 400 ಸಿನಿಮಾಗಳಲ್ಲಿ 80 ಸಿನಿಮಾಗಳಲ್ಲಿ ವಿಲನ್ ಪಾತ್ರಗಳನ್ನು ಮಾಡಿದ್ದೇನೆ. 'ದುನಿಯಾ' ಬಳಿಕ ಹಾಸ್ಯ ಮಿಶ್ರಿತ ಪಾತ್ರಗಳು ಬರಲಾರಂಭಿಸಿದವು. ಬಳಿಕ 'ಸೈನೈಡ್'ನಲ್ಲೊಂದು ಭಿನ್ನ ಪಾತ್ರ. ಒಂದು ಪರಿಸರದಲ್ಲಿ ಒಂದೇ ಜಾತಿಯ ಮರಗಳಿರಲು ಸಾಧ್ಯವಿಲ್ಲವಲ್ಲ. ಮೊದಲಿಂದಲೂ ಕಥೆ ಕೇಳುವ ಅಭ್ಯಾಸ ನನಗಿದೆ. ಅಪ್ಪ ಎಂದರೆ ಯಾವ ರೀತಿಯ ಅಪ್ಪನ ಪಾತ್ರ ಎಂದು ಕೇಳುತ್ತೇನೆ. 'ಗಾಳಿಪಟ–2'ರಲ್ಲಿ ಕೋಪಿಷ್ಠ ಅಪ್ಪ, 'ಟಗರುಪಲ್ಯ'ದಲ್ಲಿ ಮಗಳನ್ನು ಜೋಪಾನವಾಗಿ ಕಾಪಾಡುವ ಅಪ್ಪ. ಇದೇ ರೀತಿಯ ಪಾತ್ರಗಳು ಮತ್ತೆ ಬಂದರೆ ನಯವಾಗಿ ತಿರಸ್ಕರಿಸುತ್ತೇನೆ. 'ದುನಿಯಾ' ಆದ ಬಳಿಕ ಅದೇ ಮಾದರಿ ಪಾತ್ರಗಳುಳ್ಳ 20 ಕಥೆಗಳು ಬಂದಿರಬಹುದು. ಎಲ್ಲವನ್ನೂ ತಿರಸ್ಕರಿಸಿದ್ದೆ. ಭಿನ್ನ ಪಾತ್ರಗಳನ್ನು ಮಾಡುವ ಬಾಯಾರಿಕೆ ಇನ್ನೂ ಇದೆ. ಹೊಸ ಬಗೆಯ ಕಥೆಗಳು ಬಂದಾಗ ಕಣ್ಣಗಲಿಸಿ ಕೂರುತ್ತೇನೆ. ನನ್ನ ಭಾಷೆಯಲ್ಲೇ ವಿಸ್ಮಯ ಮಾಡುವುದು ನನಗೆ ನೂರು ಪಟ್ಟು ಹೆಚ್ಚು ಖುಷಿ ನೀಡುತ್ತದೆ. ಇಲ್ಲಿನ ಗ್ರಾಮದ ಪಾತ್ರಗಳನ್ನು ಹೇಳುವುದಕ್ಕೆ ನನಗೆ ಹೆಚ್ಚು ಇಷ್ಟ.

'ಬಿಸಿಬಿಸಿ ಐಸ್‌ಕ್ರೀಂ' ಸವಿದ ಸಿರಿ

ಅರವಿಂದ್ ಅಯ್ಯರ್-ಸಿರಿ ರವಿಕುಮಾರ್ ಜೋಡಿಯ ಹೊಸ ಸಿನಿಮಾ 'ಬಿಸಿಬಿಸಿ Ice-Cream' ಟ್ರೈಲರ್ ಬಿಡುಗಡೆಯಾಗಿದೆ.

'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾದಲ್ಲಿ 'ಪ್ರೇರಣಾ' ಎಂಬ ಪಾತ್ರದಲ್ಲಿ ಮಿಂಚಿದ್ದ ಸಿರಿ, ಮತ್ತೊಂದು ಭಿನ್ನ ಪಾತ್ರದಲ್ಲಿ ತೆರೆಗೆ ಬರುತ್ತಿದ್ದಾರೆ. 'ಕಹಿ', 'ಅಳಿದು ಉಳಿದವರು' ಸಿನಿಮಾ ನಿರ್ದೇಶಿಸಿದ್ದ ಅರವಿಂದ್ ಶಾಸ್ತ್ರಿ ಈ ವಿಭಿನ್ನ ಶೀರ್ಷಿಕೆ ಇರುವ ಸಿನಿಮಾ ನಿರ್ದೇಶಿಸಿದ್ದಾರೆ. 'ಕ್ಯಾಬ್ ಡ್ರೈವರ್ ವೃತ್ತಿ ಬಗ್ಗೆ ನಾವು ಹೇಳಲು ಹೊರಟಿಲ್ಲ. ಆ ವ್ಯಕ್ತಿಯ ಕಥೆಯನ್ನು ನಾವು ಸಿನಿಮಾದಲ್ಲಿ ಹೇಳಲು ಹೊರಟಿದ್ದೇವೆ. ಒಬ್ಬ ಒಂಟಿ ಕ್ಯಾಬ್ ಚಾಲಕನ ಜೀವನದಲ್ಲಿ ಮಿಸ್ಟೀರಿಯಸ್ ಹುಡುಗಿ ಬಂದಾಗ ಏನಾಗುತ್ತದೆ ಎನ್ನುವುದೇ ಸಿನಿಮಾದ ಕಥೆ. ಮಾರ್ಚ್ ತಿಂಗಳಲ್ಲಿ ಸಿನಿಮಾ ರಿಲೀಸ್ ಮಾಡುತ್ತೇವೆ' ಎಂದರು ಅರವಿಂದ್.

'ಕಾಮಿಡಿ, ಥ್ರಿಲ್ಲರ್, ಅಡ್ವೆಂಚರ್ ಎಲ್ಲವೂ ಕಥೆಯಲ್ಲಿ ಇದೆ. 'ಕ್ಯಾಬ್ ಚಾಲಕರ ಕಥೆ ಹೇಳುವ ಸಿನಿಮಾಗಳು ಈಗಾಗಲೇ ಬಂದಿವೆ. ಆದರೆ 'ಬಿಸಿಬಿಸಿ Ice-Cream', ಅನಾರೋಗ್ಯದಲ್ಲಿರುವ ಕ್ಯಾಬ್ ಚಾಲಕನ ಜೀವನದ ಸುತ್ತ ಹೆಣೆಯಲಾಗಿದೆ' ಎಂದಿದೆ ಚಿತ್ರತಂಡ. ಕಥೆ ಬರೆದು ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ಸಂಕಲನದ ಜವಾಬ್ದಾರಿಯನ್ನೂ ಅರವಿಂದ್ ಹೊತ್ತಿದ್ದಾರೆ. ಡಾರ್ಕ್ ಕಾಮಿಡಿ ರೊಮ್ಯಾನ್ಸ್ ಕಥಾಹಂದರದ ಈ ಚಿತ್ರದಲ್ಲಿ ಗೋಪಾಲಕೃಷ್ಣ ದೇಶಪಾಂಡೆ ಅವರೂ ಬಣ್ಣಹಚ್ಚಿದ್ದಾರೆ. ನಕುಲ್ ಅಭ್ಯಂಕರ್ ಸಂಗೀತ ನಿರ್ದೇಶನ, ಏನೋಷ್ ಒಲಿವೇರಾ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ




ಸಿನಿ ಸಂಕ್ರಾಂತಿ!

ಕಳೆದ ಶುಕ್ರವಾರ(ಜ.12) ಒಂದೇ ಒಂದು ಹೊಸ ಕನ್ನಡ ಚಿತ್ರ ಬಿಡುಗಡೆಯಾಗಿರಲಿಲ್ಲ. ಇದೀಗ ಸಂಕ್ರಾಂತಿ ಕಳೆದ ಬಳಿಕ ತೆರೆಯಲ್ಲೂ ಸಿನಿಸಂಕ್ರಾಂತಿಯ ಮುನ್ಸೂಚನೆ ದೊರಕಿದೆ. ಇಂದು(ಜ.19) ನಾಲ್ಕು ಸಿನಿಮಾಗಳು ತೆರೆಕಾಣುತ್ತಿದ್ದು, ಮುಂದಿನ ಶುಕ್ರವಾರ(ಜ.26) ಏಳೆಂಟು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ.

ಇಂದು ತೆರೆಗೆ

ರಂಗಸಮುದ್ರ: ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ನಟಿಸಿರುವ ಚಿತ್ರವಿದು. ಅಜ್ಜ–ಮೊಮ್ಮಗನ ಕಥೆ ಹೊತ್ತ ಈ ಚಿತ್ರದಲ್ಲಿ ರಾಘವೇಂದ್ರ ರಾಜಕುಮಾರ್ ಕೂಡ ನಟಿಸಿದ್ದಾರೆ. ಜನಪದ ಸೊಗಡಿನ ಈ ಚಿತ್ರಕ್ಕೆ ರಾಜಕುಮಾರ್ ಅಸ್ಕಿ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಕ್ಲಾಂತ: ಕರಾವಳಿಯ ತಂಡವೊಂದು ಸೇರಿ ಮಾಡಿದ ಈ ಸಿನಿಮಾವನ್ನು ವೈಭವ್ ಪ್ರಶಾಂತ್ ನಿರ್ದೇಶಿಸಿದ್ದಾರೆ. 'ಕ್ಲಾಂತ' ಎಂದರೆ ಬಳಲಿದ ಎಂದರ್ಥ. ತುಳುವಿನಲ್ಲಿ 'ದಗಲ್ ಬಾಜಿಲು' ಎಂಬ ಸಿನಿಮಾದಲ್ಲಿ ನಟಿಸಿದ್ದ ವಿಘ್ನೇಶ್‌ಗೆ ಇದು ಚೊಚ್ಚಲ ಸಿನಿಮಾ. ನಾಯಕಿಯಾಗಿ ಸಂಗೀತಾ ಭಟ್ ನಟಿಸಿದ್ದು, ಶೋಭರಾಜ್, ವೀಣಾ ಸುಂದರ್, ಸಂಗೀತಾ, ದೀಪಿಕಾ, ಪ್ರವೀಣ್ ಜೈನ್, ಸ್ವಪ್ನಾ ಶೆಟ್ಟಿಗಾರ್ ತಾರಾಬಳಗದಲ್ಲಿದ್ದಾರೆ.



ಸಂಗೀತಾ ಭಟ್, ವಿಘ್ನೇಶ್

ಅಡವಿ: ಕಾಡಿನ ಮೂಲ ನಿವಾಸಿಗಳ ಕಥೆ ಹೇಳುವ ಈ ಸಿನಿಮಾವನ್ನು ಸಂವಿಧಾನ ಸಿನಿ ಕಂಬೈನ್ಸ್ ಬ್ಯಾನರ್ ಅಡಿಯಲ್ಲಿ ಟೈಗರ್ ನಾಗ್ ಅವರು ಚಿತ್ರಕಥೆ ಬರೆದು ನಿರ್ಮಿಸಿ, ನಿರ್ದೇಶಿಸಿದ್ದಾರೆ. ಇದು ಕಾದಂಬರಿ ಆಧಾರಿತ ಚಿತ್ರವಾಗಿದೆ. 'ಅರಣ್ಯವೇ ಸರ್ವಸ್ವ ಎಂದು ನಂಬಿರುವ ಕಾಡಿನ ಮೂಲ ನಿವಾಸಿಗಳ ಜೀವನ, ಬದುಕಿಗಾಗಿ ಅವರು ನಡೆಸುವ ಹೋರಾಟ, ಬುಡಕಟ್ಟು ಜನರು ಮತ್ತು ಪ್ರಸ್ತುತ ವ್ಯವಸ್ಥೆಯ ನಡುವಿನ ಸಂಘರ್ಷ ಚಿತ್ರದಲ್ಲಿದೆ' ಎಂದಿದ್ದಾರೆ ನಿರ್ದೇಶಕರು.

ಮತ್ತೆ ಮತ್ತೆ

ಪತ್ರಿಕೋದ್ಯಮ ಪದವಿ ಮುಗಿಸಿ ಸಿನಿಮಾ ಮಾಡಲು ಹೊರಟ ಐವರು ವಿದ್ಯಾರ್ಥಿಗಳ ಸುತ್ತ ನಡೆಯುವ ಕಥೆ ಇದಾಗಿದೆ. ಪ್ರಾಧ್ಯಾಪಕರಾದ ಅರುಣ್ ಹೊಸಕೊಪ್ಪ ಕಥೆ, ಚಿತ್ರಕಥೆ ಬರೆದು ಈ ಸಿನಿಮಾ ನಿರ್ದೇಶಿಸಿದ್ದಾರೆ. ಪ್ರಮುಖ ಪಾತ್ರದಲ್ಲಿ ಎಂ.ಎಸ್. ಉಮೇಶ್ ಮನೆ ಮಾಲೀಕನಾಗಿ ಕಾಣಿಸಿಕೊಂಡಿದ್ದಾರೆ. ನಟಿ ಸಂಜನಾ ಅವರ ಜೊತೆ ಡ್ರೀಮ್ ಹಾಡಿನಲ್ಲಿ ಉಮೇಶ್ ನಟಿಸಿದ್ದು, ಇದು ಅಣ್ಣಾವ್ರನ್ನು ನೆನಪಿಸುತ್ತದೆ ಎಂದಿದೆ ಚಿತ್ರತಂಡ. ಕಾಮಿಡಿ ಜಾನರ್‌ನ ಈ ಸಿನಿಮಾದಲ್ಲಿ ಡಿಂಗ್ರಿ ನಾಗರಾಜ್, ಹೊನ್ನವಳ್ಳಿ ಕೃಷ್ಣ, ಮೀಸೆ ಆಂಜನಪ್ಪ, ಪ್ರಕಾಶ್ ತುಮ್ಮಿನಾಡ್, ಶ್ರೀನಿವಾಸ್‌ಗೌಡ, ವೈಷ್ಣವಿ ಮೆನನ್, ತುಮಕೂರು ಮೋಹನ್ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ. ಚಿತ್ರದಲ್ಲಿ ಮುಖ್ಯಮಂತ್ರಿ ಚಂದ್ರು ಅವರು ಮುಖ್ಯಮಂತ್ರಿಯಾಗಿ ಕಾಣಿಸಿಕೊಂಡಿದ್ದಾರೆ.



ಉಮೇಶ್, ಸಂಜನಾ

ಮಾಸ್ತಿ ಸಂಭಾಷಣೆಯ ಮಸ್ತಿ

ಎ.ಪಿ.ಎಸ್.

'ನಾನು ಇಂಥ ಜಾತಿಯಲ್ಲೇ ಹುಟ್ಟಬೇಕು ಅಂತ ಯಾರೂ ಬೇಡಿಕೊಂಡು ಹುಟ್ಟಕ್ಕಿಲ್ಲ. ಹುಟ್ಟಿದ ಮಕ್ಕಳೆಲ್ಲ ದ್ಯಾವ್ರು ಇದ್ದಂಗೆ. ಆ ದ್ಯಾವ್ರಿಗೆ ಜಾತಿ ಎಂಬ ಮುದ್ರೆನ ಒತ್ತಬ್ಯಾಡ್ರಯ್ಯ. ಮನುಷ್ಯತ್ವದ ಮುದ್ರೆ ಒತ್ತಿ. ಪ್ರೀತಿ, ಸಮಾನತೆ ಎಂಬ ಮುದ್ರೆ ಒತ್ತಿ. ನೀವೆಲ್ಲಾ ಸಂದಾಗಿರ್ತೀರ, ಊರೂ ಸಂದಾಗಿರ್ತದೆ'...ಹೀಗೆ 'ಕಾಟೇರ' ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಮನಸ್ಸಿಗೊತ್ತುವ ಸಂಭಾಷಣೆಯೊಂದಿದೆ. ಸಿನಿಮಾದೊಳಗಿರುವ ಪವರ್‌ಫುಲ್ ಡೈಲಾಗ್ಸ್‌ನಿಂದ ಹಿಡಿದು ಇಂತಹ ಅಚ್ಚೊತ್ತುವ ಸಂಭಾಷಣೆಗಳ ಹಿಂದೆ ಮಾಸ್ತಿ ಅವರ ಕೈಚಳಕವಿದೆ. ಈ ಪಯಣದ ಬಗ್ಗೆ ಮಾಸ್ತಿ 'ಸಿನಿಮಾ ಪುರವಣಿ' ಜೊತೆ ಮಾತಿಗಿಳಿದರು...

'ಸಿನಿಮಾದೊಳಗೆ ಮಿದುಳು ಎನ್ನುವುದು ಕಥೆಯಾದರೆ, ಕಣ್ಣು ಎಂಬುವುದು ಕ್ಯಾಮೆರಾ, ಕಿವಿ ಶಬ್ದ ಹಾಗೆ. ನಾಲಗೆ ಎನ್ನುವುದು ಸಂಭಾಷಣೆ. ಜ್ಞಾನೇಂದ್ರಿಯಗಳು ಮನುಷ್ಯನಿಗೆ ಎಷ್ಟು ಮುಖ್ಯವೋ, ಹಾಗೆಯೇ ಒಂದು ಚಿತ್ರಕ್ಕೆ ಎಲ್ಲವೂ ಪೂರಕ. ಅದರಲ್ಲಿ ಸಂಭಾಷಣೆಯೂ ಒಂದು ಅಂಶ. 'ಕಾಟೇರ' ಸಿನಿಮಾದ ಕಥೆಯ ಬೆಳವಣಿಗೆ ಆರಂಭವಾಗಿದ್ದು ಲಾಕ್‌ಡೌನ್ ಸಂದರ್ಭದಲ್ಲಿ. ಜಡೇಶ್ ಹಾಗೂ ತರುಣ್ ಅವರು ಕಥೆ ಹುಟ್ಟುಹಾಕಿದ್ದರು. ಲಾಕ್‌ಡೌನ್ ಸಂದರ್ಭದಲ್ಲಿ ಚರ್ಚೆಗೆ ಹೆಚ್ಚಿನ ಕಾಲಾವಕಾಶ ದೊರಕಿತ್ತು. ಆರಂಭದಲ್ಲಿ ನನಗೆ ಈ ಸಿನಿಮಾಗೆ ಸಂಭಾಷಣೆ ಬರೆಯುವುದು ಬಹಳ ಸರಳವಾಗಿರಲಿಲ್ಲ. 'ಟಗರು', 'ಸಲಗ' ಈಗಿನ ವಾಸ್ತವಕ್ಕೆ ಸಂಬಂಧಿಸಿದ ಕಥೆಗಳಾಗಿದ್ದವು. ನಾವು ನೋಡಿದ ಪೊಲೀಸ್ ಇಲಾಖೆ, ಅಂಡರ್‌ವರ್ಲ್ಡ್‌ನ ತುಣುಕುಗಳು ಅವು. ಹೀಗಾಗಿ ಬರೆಯುವುದು ಸರಳವಾಗಿತ್ತು. ಆದರೆ 'ಕಾಟೇರ'ದ ಚಿತ್ರಣವೇ ನಮ್ಮ ಕಣ್ಣಮುಂದಿರಲಿಲ್ಲ. ಹಳ್ಳಿಯ ಸೊಗಡು, ಆ ಭೂಮಿ, ಅದಕ್ಕಾಗಿ ಹೋರಾಟ, ಜಮೀನ್ದಾರಿ ಮನಃಸ್ಥಿತಿ, ಅಲ್ಲಿಯ ರೈತರ ಬವಣೆ ಇದು ಯಾವುದೂ ನಮ್ಮ ಊಹೆಯಲ್ಲೂ ಇರಲಿಲ್ಲ. ಆದರೆ ನಿರ್ದೇಶಕರು ನನ್ನನ್ನು ಕೂರಿಸಿಕೊಂಡು ಕಥೆ ಬೆಳೆಸಿದರು. ಕಥೆಯ ಜೊತೆಗಿನ ಪಯಣಕ್ಕಾಗಿ ನಾವು ಹಾಸನದಲ್ಲಿ ಏಳೆಂಟು ದಿನ ಬೀಡುಬಿಟ್ಟಿದ್ದೆವು. ಮೂರೂ ಜನ ಕುಳಿತು ಕಥೆಯಲ್ಲಿ ಜೊತೆಯಾಗಿ ಸಾಗಿದೆವು. ಸಂಭಾಷಣೆಗಳನ್ನು ಮತ್ತಷ್ಟು ಹದವಾಗಿಸುವಂತೆ ಉತ್ತೇಜಿಸಿದವರು ತರುಣ್. ಕ್ರಿಕೆಟ್‌ನಲ್ಲಿ ಚೆಂಡೊಂದು ಸ್ಪಿನ್ನರ್ ಕೈಗೆ ಸಿಗುವ ಮೊದಲು ಒಂದು ಹದಕ್ಕೆ ಬಂದಂತೆ ಈ ಪ್ರಕ್ರಿಯೆ' ಎಂದು ಪಯಣದ ಆರಂಭಿಕ ಹೆಜ್ಜೆಗಳನ್ನು ನೆನಪಿಸಿಕೊಂಡರು.

'ಕಥೆಯನ್ನು ಚಿನ್ನ ಎನ್ನುತ್ತೇವೆ. ಶುದ್ಧ ಚಿನ್ನದಲ್ಲಿ ಒಡವೆಗಳನ್ನು ಮಾಡಲು ಸಾಧ್ಯವೇ ಇಲ್ಲ. ಇದಕ್ಕೆ ಪಂಚಲೋಹಗಳನ್ನು ಬೆರೆಸಬೇಕು. ಅವುಗಳೇ ಈ ಕಮರ್ಷಿಯಲ್ ಎಲಿಮೆಂಟ್ಸ್. ತರುಣ್ ಅವರಿಗೆ ದರ್ಶನ್ ಅವರ ಅಭಿಮಾನಿಗಳ ನಾಡಿಮಿಡಿತ ತಿಳಿದಿದ್ದ ಕಾರಣ ಸಂಭಾಷಣೆಗಳಲ್ಲಿ ಕಮರ್ಷಿಯಲ್ ಎಲಿಮೆಂಟ್ಸ್ ಬೆರೆಸಲು ತಿಳಿಸಿದ್ದರು. 1970–80ರ ದಶಕದ ಕಥಾಹಂದರವಿದ್ದ ಕಾರಣ ನಾನು 'ಪ್ರಜಾವಾಣಿ' ಸೇರಿದಂತೆ ಹಲವು ದಿನಪತ್ರಿಕೆಗಳ ಅಂಕಣಗಳನ್ನು ಅಧ್ಯಯನ ಮಾಡಿದೆ. ಇದು ಸಂಭಾಷಣೆಗಳಿಗೆ ಪೂರಕವಾಯಿತು. ನಾನು ಮೂಲತಃ ಹಳ್ಳಿಯಿಂದ ಬಂದಿದ್ದ ಕಾರಣ ರೈತರ ಬದುಕು ತಿಳಿದಿತ್ತೇ ವಿನಾ ಜಮೀನ್ದಾರಿ ಪದ್ಧತಿ ತಿಳಿದಿರಲಿಲ್ಲ. ಇದನ್ನು ತಿಳಿಯಲು ಒಂದಿಷ್ಟು ಸಂಶೋಧನೆಗಳನ್ನು ಮಾಡಿದೆ. ನನ್ನ ವೃತ್ತಿಯಲ್ಲಿ ದಿನಪತ್ರಿಕೆಗಳೇ ನನ್ನ ಮೂಲ ಸಂಪನ್ಮೂಲ' ಎಂದು ಮಾತಿಗೆ ಮಾಸ್ತಿ ವಿರಾಮವಿತ್ತರು.

ನಾಲ್ಕನೇ ಸಲ ಸರ್ವಜ್ಞ ಪೀಠಾರೋಹಣ ಮಾಡಿದ ಸುಗುಣೇಂದ್ರ ತೀರ್ಥರು

ಪುತ್ತಿಗೆ ಮಠದ ಪರ್ಯಾಯ ಗೀತಾಮಯ

ಪ್ರಜಾವಾಣಿ ವಾರ್ತೆ

ಉಡುಪಿ: ಕೋಟಿ ಗೀತಾ ಲೇಖನದ ಸಂಕಲ್ಪ, ಭಗವದ್ಗೀತೆಯ ಮಹತ್ವ ಸಾರಿದ ಸ್ತಬ್ಧಚಿತ್ರಗಳು, ಗೀತಾ ಗಾಯನ, ಶ್ಲೋಕಗಳ ಪಠಣಗಳಿಂದಾಗಿ ಇಲ್ಲಿನ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥರ ಪರ್ಯಾಯ ಗೀತಾಮಯವಾಗಿತ್ತು.

'ವಿಶ್ವ ಗೀತಾ ಪರ್ಯಾಯ'ಕ್ಕೆ ಅನ್ವರ್ಥ ವಾಗುವಂತೆ ಈ ಪರ್ಯಾಯ ವೈಭವೋಪೇತವಾಗಿ ನೆರವೇರಿತು.

ಬುಧವಾರ ಮುಸ್ಸಂಜೆಯಲ್ಲಿ ಪಡುಗಡಲಲ್ಲಿ ನೇಸರ ಮರೆಗೆ ಸರಿಯುತ್ತಿದ್ದಂತೆಯೇ ಕಡೆಗೋಲು ಶ್ರೀಕೃಷ್ಣನ ನಗರದಲ್ಲಿ ಪರ್ಯಾಯ ಮಹೋತ್ಸವವೂ ರಂಗೇರಿತು. ಇರುಳು ಆವರಿಸುತ್ತಿದ್ದಂತೆಯೇ ನಗರದ ಬೀದಿ ಬೀದಿಗಳಿಗೂ ಭಕ್ತರು ಗುಂಪು ಗುಂಪಾಗಿ ಸಾಗಿಬಂದರು. ಹೊತ್ತು ರಾತ್ರಿ ಹತ್ತಾ-ಗುವಷ್ಟರಲ್ಲಿ ನಗರದಾದ್ಯಂತ ಭಕ್ತ ಗಣ ನೆರೆದಿತ್ತು. ಕನಕನಿಗೊಲಿದ ಭಗವಂತನ ಗುಣಗಾನ, ಹರಿ ನಾಮ ಸ್ಮರಣೆ, ಗೀತಾ ಗಾಯನಗಳಿಂದಾಗಿ 'ಪರ್ಯಾಯ' ನಗರಿಯಲ್ಲಿ ಭಕ್ತಿ ಭಾವದ ಲೋಕ ಕಳೆಗಟ್ಟಿತು.

ಗುರುವಾರ ನಸುಕಿನ 1.30ರ ವೇಳೆಗೆ ದಂಡತೀರ್ಥದಲ್ಲಿ ಪವಿತ್ರಸ್ನಾನ ನೆರವೇರಿಸಿ ಜೋಡುಕಟ್ಟೆಗೆ ಶಿಷ್ಯ ಸುಶ್ರೀಂದ್ರ ತೀರ್ಥರ ಜೊತೆಗೆ ಆಗಮಿಸಿದ ಪುತ್ತಿಗೆ ಶ್ರೀಗಳಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಪಟ್ಟದ ವಿಠಲ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ ಯತಿ-ವರ್ಯರಿಬ್ಬರನ್ನು ಶೋಭಾಯಾತ್ರೆಯಲ್ಲಿ ರಥಬೀದಿಗೆ ಕರೆದೊಯ್ಯಲಾಯಿತು.



ಪರ್ಯಾಯದ ಸಂಪ್ರದಾಯದಂತೆ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರಿಗೆ ಅದಮಾರು ಮಠದ ವಿಶ್ವಪ್ರಿಯ ತೀರ್ಥ ಸ್ವಾಮೀಜಿ ಅಕ್ಷಯಪಾತ್ರೆ ಹಸ್ತಾಂತರಿಸಿದರು

ಬೆರಗಿನ ಲೋಕ: ವಿದ್ಯುದ್ದೀಪಸಾಲು, ಅಲ್ಲಲ್ಲಿ ಸ್ವಾಗತ ಕಮಾನುಗಳಿಂದ ಅಲಂಕೃತಗೊಂಡು ಝಗಮಗಿಸುತ್ತಿದ್ದ ನಗರ ರಾತ್ರಿ ಇಡೀ ನಿದ್ದೆ ಮಾಡಲಿಲ್ಲ. ಮುಂಜಾವಿನ ಶುಭ ಅವಸರದಲ್ಲಿ ಶೋಭಾಯಾತ್ರೆಯ ಸೊಬಗನ್ನು ಕಣ್ತುಂಬಿಕೊಳ್ಳಲು ರಾತ್ರಿ ಇಡೀ ಜಾಗರವಿದ್ದ ಜನಸ್ತೋಮ ವಾಹನದಲ್ಲಿ ಅಳವಡಿಸಿದ ಪಲ್ಲಕ್ಕಿಯಲ್ಲಿ ಯತಿವರ್ಯರಿಬ್ಬರು ಸಾಗಿಬಂದ ದೃಶ್ಯವನ್ನು ಕಣ್ತುಂಬಿಕೊಂಡು ಪುಳಕಿತಗೊಂಡಿತು. ಜೋಡುಕಟ್ಟೆ-ತೆಂಕಪೇಟೆ ಮಾರ್ಗವಾಗಿ ರಥಬೀದಿವರೆಗೆ ಸಾಗಿದ ಶೋಭಾಯಾತ್ರೆ ಭಕ್ತ ಸಮೂಹವನ್ನು ಬೆರಗಿನ ಲೋಕಕ್ಕೆ ಒಯ್ಯಿತು.

ಭವ್ಯ ಶೋಭಾಯಾತ್ರೆಯಲ್ಲಿ ರಥಬೀದಿವರೆಗೆ ಸಾಗಿಬಂದ ಸುಗುಣೇಂದ್ರ ತೀರ್ಥರು ಕನಕನ ಕಿಂಡಿಯಲ್ಲಿ ಶ್ರೀಕೃಷ್ಣನ ದರ್ಶನ ಪಡೆದರು. ಬಳಿಕ ಅನಂತೇಶ್ವರ ಮತ್ತು ಚಂದ್ರ-ಮೌಳೀಶ್ವರ ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಕೃಷ್ಣಮಠವನ್ನು ಪ್ರವೇಶಿಸಿ ಅಕ್ಷಯ ಪಾತ್ರೆಯನ್ನು ಸ್ವೀಕರಿಸಿ, ಸರ್ವಜ್ಞ ಪೀಠವನ್ನು ಏರಿದರು. ಬಳಿಕ ರಾಜಾಂಗಣದಲ್ಲಿ 'ಪರ್ಯಾಯ ದರ್ಬಾರ್' ನೆರವೇರಿಸಿದರು. ನಾಲ್ಕನೇ ಪರ್ಯಾಯ ಮಹೋತ್ಸವವನ್ನು ನೆರವೇರಿಸಿದ ಸ್ವಾಮೀಜಿ ಇನ್ನೆರಡು ವರ್ಷ ಕಡೆಗೋಲು ಕೃಷ್ಣನ ಪೂಜಾ ಕೈಂಕರ್ಯ, ಕೃಷ್ಣಮಠದ ಉಸ್ತುವಾರಿ-ಯನ್ನು ನಿಭಾಯಿಸಲಿದ್ದಾರೆ.

ಗೀತಾ ಪರ್ಯಾಯದಲ್ಲಿ ರಾಮನ ಸ್ಮರಣೆ

ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠೆಯ ಸಡಗರ ಪರ್ಯಾಯ ಮಹೋತ್ಸವದಲ್ಲೂ ಕಾಣಸಿಕ್ಕಿತ್ತು. ಅಯೋಧ್ಯೆಯ ಭವ್ಯ ಶ್ರೀರಾಮಮಂದಿರದ ಪ್ರತಿಕೃತಿಯ ಸ್ತಬ್ಧಚಿತ್ರ ಶೋಭಾಯಾತ್ರೆಯ ಪ್ರಮುಖ ಆಕರ್ಷಣೆಯಾಗಿತ್ತು. ಬಿಜೆಪಿ ಈ ಸ್ತಬ್ಧಚಿತ್ರವನ್ನು ಪ್ರಾಯೋಜಿಸಿತ್ತು. ಶೋಭಾ ಯಾತ್ರೆ ಸಾಗಿಬಂದ ಮಾರ್ಗದ ಪಕ್ಕದಲ್ಲಿ ಭಕ್ತರೊಬ್ಬರು ರಾಮಮಂದಿರದ ಭಾರಿ ಗಾತ್ರದ ಪ್ರತಿಕೃತಿಯನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ವಿದ್ಯುದ್ದೀಪಗಳಿಂದ ಅಲಂಕೃತವಾಗಿದ್ದ ಈ ಪ್ರತಿಕೃತಿ ಜನರ ಗಮನ ಸೆಳೆಯಿತು.

ಪರ್ಯಾಯ; ಇತರ ಮಠಾಧೀಶರು ಗೈರು

ಉಡುಪಿ: ಪುತ್ತಿಗೆ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರ ಪರ್ಯಾಯ ಮಹೋತ್ಸವದ ಅಂಗವಾಗಿ ನಡೆದ ಶೋಭಾಯಾತ್ರೆ ಮತ್ತು ದರ್ಬಾರ್ ಕಾರ್ಯಕ್ರಮದಲ್ಲಿ ಉಳಿದ ಸಪ್ತ ಮಠಾಧೀಶರು ಗೈರಾಗಿದ್ದರು.

ಉಡುಪಿ ಕೃಷ್ಣಮಠದ ಪೂಜಾ ಕೈಂಕರ್ಯ ಮತ್ತು ಆಡಳಿತ ನಿಭಾಯಿಸಲು ಎರಡು ವರ್ಷಗಳಿಗೊಮ್ಮೆ ಸರದಿಯಂತೆ ಬರುವ ಪರ್ಯಾಯ ಮಹೋತ್ಸವ ಆರಂಭಿಸಲಿರುವ ಸ್ವಾಮೀಜಿಗೆ, ಪರ್ಯಾಯ ನಿರ್ಗಮನ ಮಠಾಧೀಶರು ಅಕ್ಷಯಪಾತ್ರೆ ಹಸ್ತಾಂತರಿಸುವುದು ವಾಡಿಕೆ. ಆದರೆ, ಪರ್ಯಾಯದಲ್ಲಿದ್ದ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಸ್ವಾಮೀಜಿ ಗೈರಾಗಿದ್ದರು.

ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರು ಕೃಷ್ಣಮಠದ ಸರ್ವಜ್ಞ ಪೀಠಾರೋಹಣ ಮಾಡುವ ವೇಳೆ ಅದಮಾರು ಮಠದ ವಿಶ್ವಪ್ರಿಯ ತೀರ್ಥ ಸ್ವಾಮೀಜಿ ಮಾತ್ರ ಉಪಸ್ಥಿತರಿದ್ದು, ಅಕ್ಷಯಪಾತ್ರೆಯನ್ನು ಹಸ್ತಾಂತರಿಸಿದರು.

ಪರ್ಯಾಯದ ಶೋಭಾಯಾತ್ರೆ ಹಾಗೂ ನಂತರ ನಡೆಯುವ ದರ್ಬಾರ್‌ನಲ್ಲಿ ಪೇಜಾವರ, ಪಲಿಮಾರು, ಅದಮಾರು, ಸೋದೆ, ಕಾಣಿಯೂರು, ಶಿರೂರು, ಕೃಷ್ಣಾಪುರ ಮಠದ ಮಠಾಧೀಶರು ಬರಲಿಲ್ಲ. ಪರ್ಯಾಯದ ಶೋಭಾಯಾತ್ರೆಗೆ ಪುತ್ತಿಗೆ ಮಠದ ಹಿರಿಯ ಮತ್ತು ಕಿರಿಯ ಸ್ವಾಮೀಜಿ ಅವರಿಗೆ ಮಾತ್ರ ಪಲ್ಲಕ್ಕಿ-ಗಳನ್ನು ಸಿದ್ಧಪಡಿಸಲಾಗಿತ್ತು. ಆಗಲೇ, ಉಳಿದವರು ಬರುವುದಿಲ್ಲ ಎಂಬುದು ಭಕ್ತರಿಗೆ ಖಾತರಿಯಾಗಿತ್ತು.

ಉಡುಪಿ ಅಷ್ಟಮಠಗಳ ಸ್ವಾಮೀಜಿಗಳು ಸಮುದ್ರೋಲ್ಲಂಘನ ಮಾಡಬಾರದು ಎಂಬ ಸಂಪ್ರದಾಯವನ್ನು ಸುಗುಣೇಂದ್ರ ತೀರ್ಥರು ಉಲ್ಲಂಘಿಸಿದ್ದಾರೆ ಎಂಬ ಕಾರಣಕ್ಕೆ ಉಳಿದ ಮಠಾಧೀಶರಿಂದ ಅವರಿಗೆ ವಿರೋಧ ಇದೆ.

'ಪ್ರಪಂಚ ಪರ್ಯಟನೆ ಇಲ್ಲ'

ಉಡುಪಿ: 'ಕೃಷ್ಣನಿಗೆ ಸೇವೆ ಹಾಗೂ ಪೂಜೆ ಸಲ್ಲಿಸುವ ಅವಕಾಶ ದೊರೆತಿರುವುದು ಸೌಭಾಗ್ಯವೇ ಸರಿ; ಮುಂದಿನ ಎರಡು ವರ್ಷಗಳ ಕಾಲ ಪ್ರಪಂಚ ಪರ್ಯಟನೆಯನ್ನು ಬದಿಗಿರಿಸಿ ಸಂಪೂರ್ಣವಾಗಿ ಕೃಷ್ಣನ ಪೂಜೆಯಲ್ಲಿ ತೊಡಗಿಸಿಕೊಳ್ಳುತ್ತೇನೆ' ಎಂದು ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಸರ್ವಜ್ಞ ಪೀಠಾರೋಹಣದ ಬಳಿಕ ರಾಜಾಂಗಣದಲ್ಲಿ ನಡೆದ ಸಾಂಪ್ರದಾಯಿಕ ದರ್ಬಾರ್ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, 'ಸದಾ ಪ್ರಪಂಚ ಸುತ್ತುವ ಪುತ್ತಿಗೆ ಶ್ರೀಗಳು ಕೃಷ್ಣನ ಪೂಜೆಗಾಗಿ 2 ವರ್ಷ ಉಡುಪಿಯಲ್ಲಿ ನಿಲ್ಲುವುದು ಸಾಧ್ಯವೇ ಎಂದು ಕೆಲವರು ಪ್ರಶ್ನಿಸಿದ್ದಾರೆ. ಆದರೆ, ಕೃಷ್ಣನ ಸೇವೆ ಮಾಡುವ ಸುವರ್ಣಾವಕಾಶದ ಮುಂದೆ ಯಾವುದೂ ದೊಡ್ಡದಲ್ಲ. ದೇವರು ಕೊಟ್ಟ ಯೋಗವನ್ನು ಬಿಡುವ ಪ್ರಶ್ನೆಯೇ ಇಲ್ಲ. ಶಿಷ್ಯರಾದ ಸುಶ್ರೀಂದ್ರ ತೀರ್ಥರೊಡಗೂಡಿ ಕೃಷ್ಣನ ಪೂಜೆ ಮಾಡುತ್ತೇನೆ' ಎಂದು ಹೇಳಿದರು.



ಕುಸ್ತಿ

ಸಿದ್ಧೇಶ್ವರ ಸಂಕ್ರಮಣ ಜಾತ್ರಾ ಮಹೋತ್ಸವದ ಪ್ರಯುಕ್ತ ವಿಜಯಪುರದ ಎಸ್.ಎಸ್.ಹೈಸ್ಕೂಲ್ ಮೈದಾನದಲ್ಲಿ ಗುರುವಾರ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಕಂಡುಬಂದ ರೋಚಕ ದೃಶ್ಯ – ಪ್ರಜಾವಾಣಿ ಚಿತ್ರ/ಸಂಜೀವ ಅಕ್ಕಿ

ರಾಮನ ಅವಹೇಳನ: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೇತಮಂಗಲ (ಕೋಲಾರ): ಸಾಮಾಜಿಕ ಜಾಲತಾಣದಲ್ಲಿ ರಾಮನ ಕುರಿತು ಅವಹೇಳನ ಮಾಡಿದ ಸಂಬಂಧ ಕೆಜಿಎಫ್ ಪೊಲೀಸರು ಗುರುವಾರ ಇಬ್ಬರು ಯುವಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಕೆಜಿಎಫ್ ತಾಲ್ಲೂಕಿನ ಸುಂದರಪಾಳ್ಯ ಗ್ರಾಮದ ಇಬ್ಬರು ಯುವಕರು ಇನ್‌ಸ್ಟಾಗ್ರಾಂನಲ್ಲಿ ರಾಮನನ್ನು ಅವಹೇಳನ ಮಾಡಿದ್ದಾರೆ. ಒಬ್ಬರು ಪೋಸ್ಟ್ ಮಾಡಿದರೆ, ಮತ್ತೊಬ್ಬರು ಟ್ಯಾಗ್ ಮಾಡಿದ್ದಾರೆ' ಎಂದು ಸ್ಥಳೀಯರು ಬೇತಮಂಗಲ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಕರಣವನ್ನು ಸೈಬರ್ ಅಪರಾಧ ಠಾಣೆಗೆ ವರ್ಗಾಯಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕ ವಶಕ್ಕೆ: ಇನ್‌ಸ್ಟಾಗ್ರಾಂ ನಲ್ಲಿ ಎಡಿಟ್ ಮಾಡಿದ ಅನುಚಿತ ಚಿತ್ರ ಹಾಕಿದ್ದ 14 ವರ್ಷದ ಬಾಲಕನನ್ನು ಮುಳಬಾಗಿಲು ನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಸೀದಿ ಮೇಲೆ ಕೃಷ್ಣ ಮತ್ತು ರಾಮನ ಭಾವಚಿತ್ರ, ಮಸೀದಿಯ ಗೋಪುರಗಳ ಮೇಲೆ ಕೇಸರಿ ಬಾವುಟ, ಟಿಪ್ಪು ಸುಲ್ತಾನ್ ಚಿತ್ರಕ್ಕೆ ರಾಮ ಬಾಣ ಬಿಡುವ ರೀತಿ ಎಡಿಟ್ ಮಾಡಿದ ಚಿತ್ರವನ್ನು ಇನ್‌ಸ್ಟಾಗ್ರಾಂ ಸ್ಟೇಟಸ್‌ಗೆ ಹಾಕಿಕೊಂಡಿದ್ದ ಆರೋಪದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಹೈದರಾಬಾದ್‌ನಲ್ಲಿ ಪೊಲೀಸರಿಗೆ ಸೆರೆ ಸಿಕ್ಕ ಆರೋಪಿ ತೌಸಿಫ್ ಚೌಟಿ

ಅತ್ಯಾಚಾರ ಆರೋಪಿಗಳ ಸಂಖ್ಯೆ 10ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಹಾವೇರಿ: ಹಾನಗಲ್ ತಾಲ್ಲೂಕಿನ ನಾಲ್ಕರ್ ಕ್ರಾಸ್ ಬಳಿ ಜನವರಿ 8ರಂದು ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ಮತ್ತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಈವರೆಗೆ ಒಟ್ಟು 10 ಆರೋಪಿಗಳ ಬಂಧನವಾಗಿದೆ.

ಅಕ್ಕಿಆಲೂರಿನ ಮೀನು ವ್ಯಾಪಾರಿ ಇಬ್ರಾಹಿಂ ಖಾದರ್ ಗೌಸ್ (27) ಮತ್ತು ಕಾರು ಚಾಲಕ ತೌಸಿಫ್ ಅಹಮದ್ ಚೌಟಿ ಅಲಿಯಾಸ್ ಕಾಟ್ಲ (25) ಬಂಧಿತರು. ಇಬ್ರಾಹಿಂಅಕ್ಕಿಆಲೂರಿನಲ್ಲೇಸಿಕ್ಕಿಬಿದ್ದರೆ, ತೌಸಿಫ್‌ಗೆ ಹೈದರಾಬಾದ್‌ನಲ್ಲಿ ಬಂಧಿಸಲಾಯಿತು. ಕೃತ್ಯಕ್ಕೆ ಬಳಸಿದ್ದ ಕಾರು ಮತ್ತು ಬೈಕ್ ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.



ಇಬ್ರಾಹಿಂ ಗೌಸ್



ತೌಸಿಫ್ ಚೌಟಿ

ಆರೋಪಿಗೆ ಕಿಮ್ಸ್‌ನಲ್ಲಿ ಚಿಕಿತ್ಸೆ: 'ಪ್ರಕರಣಕ್ಕೆ ಸಂಬಂಧಿಸಿದ ಇನ್ನೊಬ್ಬ ಆರೋಪಿ ಮಹಮ್ಮದ್ ಸೈಫ್ ಸಾವಿಕೇರಿ ಎಂಬಾತ ಅಪಘಾತದಲ್ಲಿ ಕಾಲಿನ ಮೂಳೆ ಮುರಿದುಕೊಂಡು, ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ಒಂದು ವಾರ ಚಿಕಿತ್ಸೆ ಪಡೆದ. ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದಾನೆ. ಚಿಕಿತ್ಸೆ ಮುಗಿದ ಬಳಿಕ ಬಂಧಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ತಿಳಿಸಿದ್ದಾರೆ.

ಎಸ್‌ಐಟಿಗೆ ಆಗ್ರಹಿಸಿ ನಾಳೆ ಪ್ರತಿಭಟನೆ

ಬೆಂಗಳೂರು: ಹಾವೇರಿ ಜಿಲ್ಲೆ ಹಾನಗಲ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸುವಂತೆ ಆಗ್ರಹಿಸಿ ಹಾವೇರಿ ಜಿಲ್ಲಾ ಪೊಲೀಸ್ ಕಚೇರಿ ಎದುರು ಬಿಜೆಪಿ ಶನಿವಾರ (20ರಂದು) ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಪೊಲೀಸರು ಪ್ರಕ-ರಣವನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಿದ್ದರು. ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಗೃಹ ಸಚಿವರು ಪ್ರಕರಣ ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಆದರೆ, ಈಗ ಹಾನಗಲ್ ಪೊಲೀಸರನ್ನು ಅಮಾನತು ಮಾಡಿದ್ದು ಲೋಪವಾಗಿರುವುದನ್ನು ಸಾಬೀತು ಮಾಡಿದೆ. ಪೊಲೀಸರು ಕಾನೂನು ಪ್ರಕಾರ ನಡೆದುಕೊಂಡಿಲ್ಲ. ಸಂತ್ರಸ್ತೆಗೆ ಸರಿಯಾದ ಚಿಕಿತ್ಸೆ ಕೊಡಿಸಿಲ್ಲ. ಮುಖ್ಯಮಂತ್ರಿ ಸಹ ನಿರ್ಲಕ್ಷ್ಯ ಮಾಡಿದ್ದಾರೆ. ಹಾಗಾಗಿ, ಪ್ರಕರಣವನ್ನು ಎಸ್‌ಐಟಿ ತನಿಖೆಗೆ ವಹಿಸಬೇಕು ಎನ್ನುವುದು ಪಕ್ಷದ ಆಗ್ರಹ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಪಕ್ಷದ ಹಲವು ನಾಯಕರು ಭಾಗವಹಿಸುವರು ಎಂದು ತಿಳಿಸಿದರು.

ನೀಲಂ ಜಾಮೀನು ಅರ್ಜಿ ವಜಾ

ನವದೆಹಲಿ(ಪಿಟಿಐ): ಸಂಸತ್ತಿನ ಭದ್ರತಾ ಲೋಪ ಪ್ರಕರಣದ ಆರೋಪಿ ನೀಲಂ ಆಜಾದ್ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ದೆಹಲಿಯ ನ್ಯಾಯಾಲಯವು ಗುರುವಾರ ವಜಾಗೊಳಿಸಿದೆ.

'ಈ ಹಂತದಲ್ಲಿ ನೀಲಂ ಅವರಿಗೆ ಜಾಮೀನು ಮಂಜೂರು ಮಾಡುವುದು ಸರಿಯಲ್ಲ' ಎಂದಿರುವ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಹರ್‌ದೀಪ್ ಕೌರ್ ಅವರು ಅರ್ಜಿಯನ್ನು ತಳ್ಳಿ ಹಾಕಿದ್ದಾರೆ.

ನೀಲಂ ಸೇರಿದಂತೆ ಪ್ರಕರಣದ ಎಲ್ಲಾ ಆರೋಪಿಗಳಿಗೆ ನ್ಯಾಯಾಲಯವು ಈಚೆಗೆ ನ್ಯಾಯಾಂಗ ಬಂಧನವನ್ನು ವಿಧಿಸಿತ್ತು.

ಕಸಾಪ ಆವರಣದಲ್ಲಿ ಪಂಪನ ಪ್ರತಿಮೆ: ಮಹೇಶ್ ಜೋಷಿ

ಮುಳಬಾಗಿಲು (ಕೋಲಾರ ಜಿಲ್ಲೆ): ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಕೇಂದ್ರ ಕಚೇರಿ ಆವರಣದಲ್ಲಿ ಆದಿಕವಿ ಪಂಪನ ಪ್ರತಿಮೆ ಸ್ಥಾಪಿಸಲಾಗುವುದು ಎಂದು ಕಸಾಪ ರಾಜ್ಯ ಅಧ್ಯಕ್ಷ ಮಹೇಶ್ ಜೋಷಿ ಹೇಳಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ಹಂಚಿಕೊಂಡ ಅವರು, 'ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಉಪ್ಪುಕುಂಟೆಯಲ್ಲಿ-ರುವ ಶ್ರೀಕಾಳಿಕಾದೇವಿ ಶಿಲ್ಪಕಲಾ ಮಂದಿರದಲ್ಲಿ ₹5 ಲಕ್ಷ ವೆಚ್ಚದಲ್ಲಿ ಪಂಚಲೋಹದ ಪ್ರತಿಮೆ ಸಿದ್ಧವಾಗುತ್ತಿದೆ' ಎಂದು ತಿಳಿಸಿದರು.

ಪ್ರತಿಮೆ ನಿರ್ಮಾಣ ಶೇ 80ರಷ್ಟು ಪೂರ್ಣಗೊಂಡಿದ್ದು, ಎರಡು ತಿಂಗಳಲ್ಲಿ ನಿರ್ಮಾಣ ಕಾರ್ಯ ಮುಗಿಯಲಿದೆ. ಎರಡು ಅಡಿ ಅಗಲ, ಮೂರು ಅಡಿ ಎತ್ತರದ ಮೂರ್ತಿ 90ರಿಂದ ನೂರು ಕೆ.ಜಿ ತೂಕವಿರಲಿದೆ. ಕಲಾವಿದ ಎಸ್. ಮಂಜುನಾಥ ಪ್ರತಿಮೆ ತಯಾರಿಸುತ್ತಿ-ದ್ದಾರೆ ಎಂದು ಮಾಹಿತಿ ನೀಡಿದರು.

ನೆಲಬಾಂಬ್: 'ಅಗ್ನಿವೀರ' ಸಾವು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ನೌಶೇರಾ ವಲಯದ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಗುರುವಾರ ಸಂಭವಿಸಿದ ನೆಲಬಾಂಬ್ ಸ್ಫೋಟದಲ್ಲಿ 'ಅಗ್ನಿವೀರ್' ಯೋಧ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಸೈನಿಕರು ವಾಡಿಕೆಯಂತೆ ಗಸ್ತು ತಿರುಗುತ್ತಿದ್ದಾಗ ಈ ಸ್ಫೋಟ ಸಂಭವಿಸಿದೆ. ಗಾಯಗೊಂಡಿದ್ದ ಮೂವರು ಸೈನಿಕರನ್ನು ಉಧಂಪುರದ ಕಮಾಂಡ್ ಆಸ್ಪತ್ರೆಗೆ ಸ್ಥಳಾಂತರಿಸಲಾ-ಯಿತು. ಅವರಲ್ಲಿ ಒಬ್ಬರು ಮೃತಪಟ್ಟರು ಎಂದು ವರದಿಯಾಗಿದೆ. ಮೃತಪಟ್ಟವರನ್ನು ಅಗ್ನಿವೀರ್ ಯೋಧ ಅಜಯ್ ಸಿಂಗ್ ಎಂದು ಗುರುತಿಸಲಾಗಿದೆ.

ನಕಲಿ ಬಿಲ್: ₹180 ಕೋಟಿ ತೆರಿಗೆ ವಂಚನೆ, ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಕ್ಕೆ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಪಾವತಿಸದಿದ್ದರೂ ಪಾವತಿಸಿದ ತೆರಿಗೆ ಹಿಂಪಡೆಯುವ ಸೌಲಭ್ಯ ಬಳಸಿಕೊಂಡು ನಕಲಿ ಬಿಲ್‌ಗಳ ಮೂಲಕ ₹180 ಕೋಟಿ ವಂಚಿಸಿದ್ದ ಪ್ರಕರಣವನ್ನು ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ವಂಚನೆ ಪ್ರಕರಣದ ಪ್ರಮುಖ ಸೂತ್ರಧಾರಿ ಕೇರಳದ ಮೊಹಮ್ಮದ್ ಸಿದ್ದಿಕ್ ಅವರನ್ನು ಬಂಧಿಸಲಾಗಿದೆ.

ಕರ್ನಾಟಕ, ಕೇರಳ ಹಾಗೂ ತಮಿ-ಳುನಾಡಿನಲ್ಲಿ 100ಕ್ಕೂ ಹೆಚ್ಚು ಜಿಎಸ್‌ಟಿ ಬೋಗಸ್ ನೋಂದಣಿ ಪ್ರಕರಣಗಳು ಪತ್ತೆಯಾಗಿದ್ದು, ₹1,008 ಕೋಟಿ ಮೊತ್ತದ ನಕಲಿ ಬಿಲ್‌ಗಳನ್ನು ಸೃಷ್ಟಿಸಿ, ಹಲವರ ಖಾತೆಗಳಿಗೆ ಮರಳಿ ಜಮೆ ಮಾಡಲಾಗಿತ್ತು. ವಂಚನೆ ಪ್ರಕರಣ ಪತ್ತೆ ಕಾರ್ಯಾಚರಣೆಯಲ್ಲಿ ರಾಜ್ಯದ 60 ಅಧಿಕಾರಿಗಳು ಭಾಗವಹಿಸಿದ್ದರು ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ ತಿಳಿಸಿದ್ದಾರೆ. ಕೇರಳ, ತಮಿಳುನಾಡು ಜಿಎಸ್‌ಟಿ ಅಧಿಕಾರಿಗಳ ಸಹಯೋಗದಲ್ಲಿ ಈ ಕಾರ್ಯಾಚರಣೆ ನಡೆದಿದೆ.


20, 21ರಂದು ಸಿಟಿಐ ಪರೀಕ್ಷೆ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಖಾಲಿ ಇರುವ ವಾಣಿಜ್ಯ ತೆರಿಗೆ ಪರಿವೀಕ್ಷಕರ (ಸಿಟಿಐ) 230 ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಇದೇ 20 ಮತ್ತು 21ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ.

'ರಾಜ್ಯದ 29 ಜಿಲ್ಲೆಗಳಲ್ಲಿ ಪರೀಕ್ಷಾ ಕೇಂದ್ರಗಳಿದ್ದು, ಒಟ್ಟು 1,60,501 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ 60,330 ಮಹಿಳೆಯರು. 1,00,320 ಪುರುಷರು. 2,130 ಮಂದಿ ಅಂಗವಿಕಲರು, 31 ಲಿಂಗತ್ವ ಅಲ್ಪಸಂಖ್ಯಾತರು' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ತಿಳಿಸಿದರು.'ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಎಲ್ಲ ಮುನ್ನೆಚ್ಚರಿಕೆ ಕ್ರಮಗಳ ನಂತರವೂ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದರೆ, ಅಂತಹ ಅಭ್ಯರ್ಥಿಗಳ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದು ಅವರು ಎಚ್ಚರಿಕೆ ನೀಡಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ವೈಫಲ್ಯ ಎಂಬ ರೋಗವನ್ನು ಬಗ್ಗುಬಡಿಯಲು ಇರುವ ಉತ್ತಮ ಮದ್ದು ಎಂದರೆ ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮ.

–ಎ.ಪಿ.ಜೆ. ಅಬ್ದುಲ್ ಕಲಾಂ

ವಿಮಾನಯಾನ ಕ್ಷೇತ್ರ: ಸೌಲಭ್ಯ ಹೆಚ್ಚಲಿ ಪ್ರಯಾಣಿಕರ ಹಿತರಕ್ಷಣೆಗೆ ಸಿಗಲಿ ಆದ್ಯತೆ

ವಿಮಾನ ಸಂಚಾರ ವಿಳಂಬವಾಗಿದ್ದಕ್ಕೆ ಪ್ರಯಾಣಿಕರೊಬ್ಬರು ಪೈಲಟ್ ಮೇಲೆ ಹಲ್ಲೆ ನಡೆಸಿರುವುದು ಧೂರ್ತತನದ ಪ್ರತಿಕ್ರಿಯೆಯಾಗಿದೆ. ಅವರ ಮೇಲೆ ಕ್ರಮ ಕೈಗೊಂಡಿರುವುದು ನ್ಯಾಯಸಮ್ಮತವೇ ಹೌದು. ಆದರೆ, ಹಲ್ಲೆ ನಡೆಸಿದ ಪ್ರಯಾಣಿಕ ಮತ್ತು ಇತರ ಪ್ರಯಾಣಿಕರು ಅನುಭವಿಸಿದ ಹಿಂಸೆಯೇನೂ ಕಡಿಮೆಯಲ್ಲ ಎಂಬುದನ್ನೂ ಗಮನದಲ್ಲಿ ಇರಿಸಿಕೊಳ್ಳಬೇಕಾಗಿದೆ. ಪ್ರಯಾಣಿಕರು ಈ ತಿಂಗಳ 14ರಂದು ಬೆಳಿಗ್ಗೆ ವಿಮಾನ ಹೊರಡುವಿಕೆಯ ನಿಗದಿತ ಸಮಯಕ್ಕಿಂತ ಎರಡು ತಾಸು ಮುಂಚೆ ನಿಲ್ದಾಣಕ್ಕೆ ಬಂದಿದ್ದಾರೆ. ವಿಮಾನ ಸಂಚಾರವು ಒಂದು ತಾಸು ವಿಳಂಬವಾಗಲಿದೆ, ಒಂದು ತಾಸು ವಿಳಂಬವಾಗಲಿದೆ ಎಂದು ಹೇಳುತ್ತಲೇ ಪ್ರಯಾಣಿಕರು 12 ತಾಸು ಕಾಯುವಂತೆ ಮಾಡಲಾಯಿತು. ವಿಮಾನಗಳು ವಿಳಂಬವಾಗಿ ಹೊರಡುವುದು ಗಂಭೀರವಾದ ಸಮಸ್ಯೆಯಾಗಿದೆ ಮತ್ತು ಈ ಸಮಸ್ಯೆ ಈಗಲೂ ಮುಂದುವರಿದಿದೆ. ಆ ದಿನ, ರಾಜಧಾನಿ ದೆಹಲಿಯ ವಿಮಾನ ನಿಲ್ದಾಣದಿಂದ ಹೊರಡಬೇಕಿದ್ದ 100ಕ್ಕೂ ಹೆಚ್ಚು ವಿಮಾನಗಳ ಸಂಚಾರ ವ್ಯತ್ಯಯಗೊಂಡಿದೆ. ನಂತರದ ದಿನಗಳಲ್ಲಿಯೂ ವಿಳಂಬ ಮತ್ತು ವಿಮಾನ ಸಂಚಾರ ರದ್ದತಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಬುಧವಾರ 53 ವಿಮಾನಗಳ ಸಂಚಾರ ರದ್ದಾಗಿದೆ.

ವಿಮಾನ ಹಾರಾಟದಲ್ಲಿ ವಿಳಂಬ ಮತ್ತು ಸಂಚಾರ ರದ್ದತಿ ಪ್ರತಿವರ್ಷವೂ ಚಳಿಗಾಲದಲ್ಲಿ ಸಾಮಾನ್ಯ ಎಂಬಂತಾಗಿದೆ. ದಟ್ಟ ಮಂಜಿನಿಂದಾಗಿ ವಿಮಾನ ಸಂಚಾರ ಸಾಧ್ಯವಾಗುವುದಿಲ್ಲ. ದೆಹಲಿ ವಿಮಾನ ನಿಲ್ದಾಣದಲ್ಲಿ ಈ ಸಮಸ್ಯೆ ಇನ್ನೂ ಹೆಚ್ಚು ಗಂಭೀರವಾಗಿದೆ. ದೆಹಲಿಯಲ್ಲಿ ವಿಮಾನ ಸಂಚಾರ ವಿಳಂಬದಿಂದಾಗಿ ಇತರೆಡೆಗಳಲ್ಲಿಯೂ ಸಂಚಾರ ವ್ಯತ್ಯಯವಾಗುತ್ತದೆ. ಹವಾಮಾನದಲ್ಲಿನ ಏರುಪೇರಿನ ನಿಯಂತ್ರಣವು ವಿಮಾನಯಾನ ಸಂಸ್ಥೆಗಳು ಅಥವಾ ವಿಮಾನ ನಿಲ್ದಾಣ ನಿರ್ವಹಣಾ ಸಂಸ್ಥೆಗಳ ನಿಯಂತ್ರಣದಲ್ಲಿ ಇಲ್ಲ ಎಂಬುದು ನಿಜ. ಆದರೆ ಹವಾಮಾನ ಏರುಪೇರಾದ ಸಂದರ್ಭದಲ್ಲಿ ಈ ಸಂಸ್ಥೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂಬ ದೂರು ಇದೆ. ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ವಿಮಾನ ವಿಳಂಬದ ಸಮಸ್ಯೆಯನ್ನು ಪರಿಹರಿಸಲು ಕೆಲವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದಾರೆ. ದೆಹಲಿ ವಿಮಾನ ನಿಲ್ದಾಣದಲ್ಲಿ ಸಿಎಟಿ–III ಸಾಮರ್ಥ್ಯದ ನಾಲ್ಕನೇ ರನ್‌ವೇ ಕಾರ್ಯಾರಂಭಕ್ಕೆ ಸಂಬಂಧಿಸಿದಂತೆಯೂ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗೋಚರತೆ ಕಡಿಮೆ ಇದ್ದಾಗಲೂ ವಿಮಾನ ಸಂಚಾರವನ್ನು ನಿರ್ವಹಿಸಬಲ್ಲ ಸಾಮರ್ಥ್ಯದ ರನ್‌ವೇಗಳು ಇರುವುದು ಬಹಳ ಮುಖ್ಯ. ಪ್ರಯಾಣಿಕರಿಗೆ ಯಾವೆಲ್ಲ ಸೌಲಭ್ಯಗಳನ್ನು ಒದಗಿಸಬೇಕು ಎಂಬ ಕುರಿತು ನಾಗರಿಕ ವಾಯುಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಮಾರ್ಗಸೂಚಿ ನೀಡಿದೆ. ಮುಂಬೈ ವಿಮಾನ ನಿಲ್ದಾಣದ ಟಾರ್‌ಮ್ಯಾಕ್‌ನಲ್ಲಿ ಕುಳಿತು ಪ್ರಯಾಣಿಕರು ಆಹಾರ ಸೇವಿಸಿದ ವಿಡಿಯೊ ವೈರಲ್ ಆಗಿದೆ; ಇದು ವಿಮಾನ ನಿಲ್ದಾಣಗಳ ಪರಿಸ್ಥಿತಿಗೆ ಕನ್ನಡಿ ಹಿಡಿದಿದೆ. ವಿಳಂಬದಿಂದಾಗಿ ಎದುರಿಸಬೇಕಾದ ಹಲವು ಸಮಸ್ಯೆಗಳ ಕುರಿತು ಪ್ರಯಾಣಿಕರು ಹೇಳಿಕೊಂಡಿದ್ದಾರೆ. ಸೌಲಭ್ಯಗಳ ಕೊರತೆ ಇದೆ, ವಿಮಾನ ನಿಲ್ದಾಣ ಮತ್ತು ವಿಮಾನಯಾನ ಸಂಸ್ಥೆಗಳು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ ಎಂಬ ಅಂಶಗಳು ಕೂಡ ಪ್ರಯಾಣಿಕರು ಹೇಳಿಕೊಂಡ ಸಮಸ್ಯೆಗಳಲ್ಲಿ ಸೇರಿವೆ.



ಪ್ರಯಾಣಿಕರಿಗೆ ಆಗುವ ಅನನುಕೂಲಗಳ ಬಗ್ಗೆ ವಿಮಾನಯಾನ ಸಂಸ್ಥೆಗಳು ಮತ್ತು ವಿಮಾನ ನಿಲ್ದಾಣ ನಿರ್ವಹಣಾ ಸಂಸ್ಥೆಗಳಿಗೆ ಕಳಕಳಿ ಇರಬೇಕು

ಭಾರತದ ವಾಯುಯಾನ ಕ್ಷೇತ್ರವು ಬಹಳ ಮುಖ್ಯವಾದ ಮತ್ತು ಸಾರ್ವಜನಿಕ ಉಪಯುಕ್ತತೆಯ ಉದ್ಯಮವಾಗಿದೆ. ಇದು ಅಪಾರ ಸಾಧ್ಯತೆಗಳು ಇರುವ ಕ್ಷೇತ್ರ ಕೂಡ ಹೌದು. ದೇಶಿ ಮಾರ್ಗಗಳಲ್ಲಿ 15 ಕೋಟಿಗೂ ಹೆಚ್ಚು ಪ್ರಯಾಣಿಕರು ಪ್ರಯಾಣಿಸಿ 2023ರಲ್ಲಿ ಹೊಸ ದಾಖಲೆಯೊಂದು ಸೃಷ್ಟಿಯಾಗಿದೆ. ಅಗತ್ಯಗಳು ಹೆಚ್ಚುತ್ತಿರುವಂತೆಯೇ ಮೂಲಸೌಕರ್ಯಗಳನ್ನೂ ಹೆಚ್ಚಿಸಲು ಹೂಡಿಕೆ ಮಾಡಬೇಕು. ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಅಗತ್ಯಗಳು ಮತ್ತು ಸಮಸ್ಯೆಗಳನ್ನು ಮನಗಂಡು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಹವಾಮಾನದ ಏರುಪೇರಿನ ನಿರ್ವಹಣೆ ಮೇಲೆ ವಿಶೇಷ ಗಮನ ಹರಿಸಬೇಕಾಗಿದೆ. 3.6 ಲಕ್ಷ ಪ್ರಯಾಣಿಕರು ವಿಮಾನ ವಿಳಂಬದಿಂದಾಗಿ ಕಳೆದ ತಿಂಗಳು ಸಮಸ್ಯೆ ಅನುಭವಿಸಿದ್ದಾರೆ ಎಂದು ಡಿಜಿಸಿಎ ಹೇಳಿದೆ. ಅನುಕೂಲ ಮತ್ತು ಸಮಯ ಉಳಿತಾಯದ ಕಾರಣಕ್ಕೆ ಜನರು ವಿಮಾನ ಪ್ರಯಾಣವನ್ನು ಆರಿಸಿಕೊಳ್ಳುತ್ತಾರೆ. ಹಾಗಾಗಿ, ಪ್ರಯಾಣಿಕರಿಗೆ ಆಗುವ ಅನನುಕೂಲಗಳ ಕುರಿತು ವಿಮಾನಯಾನ ಸಂಸ್ಥೆಗಳು ಮತ್ತು ವಿಮಾನ ನಿಲ್ದಾಣ ನಿರ್ವಹಣಾ ಸಂಸ್ಥೆಗಳು ಕಳಕಳಿ ಹೊಂದಿರಬೇಕು. ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರನ್ನು ನೋಡಿಕೊಳ್ಳುವ ರೀತಿ ಉತ್ತಮಗೊಳ್ಳಬೇಕು. ಒರಟು ವರ್ತನೆ ಮತ್ತು ಅಸಡ್ಡೆ ಕುರಿತು ಗಂಭೀರವಾದ ದೂರುಗಳು ಇವೆ. ಈ ಕ್ಷೇತ್ರದಲ್ಲಿ ಕೆಲವೇ ಸಂಸ್ಥೆಗಳ ಪ್ರಾಬಲ್ಯ ಇರುವುದರಿಂದ ಸ್ಪರ್ಧೆ ಕಡಿಮೆ ಇದೆ ಎಂಬುದು ಕೂಡ ಈಗಿನ ನಿರ್ಲಕ್ಷ್ಯಕ್ಕೆ ಕಾರಣ ಆಗಿರಬಹುದು. ವಿಮಾನಯಾನಕ್ಕೆ ಸಂಬಂಧಿಸಿದ ಎಲ್ಲ ಆಯಾಮಗಳ ನಿಖರವಾದ ಮಾಹಿತಿ ಪ್ರಯಾಣಿಕರಿಗೆ ಸಕಾಲದಲ್ಲಿ ದೊರಕಬೇಕು. ಸಿಬ್ಬಂದಿಯ ವರ್ತನೆಯು ಸೌಜನ್ಯದಿಂದ ಕೂಡಿರಬೇಕು. ವಿಮಾನ ಸಂಚಾರವು ವಿಳಂಬವಾದರೆ ಅಥವಾ ರದ್ದಾದರೆ ಪ್ರಯಾಣಿಕರಿಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು.

ಪಠ್ಯಬೋಧನೆಯ ಕಲಿಕೆಯು ಅನುಭವಿಸುವುದಾಗದೆ 'ಮುಗಿಸುವ' ಪರಿಕಲ್ಪನೆಯಾಗಿ ಬದಲಾಗಿದೆ

ವಿರಾಮವಿಲ್ಲದ ಶಿಕ್ಷಣ ಶಿಕ್ಷೆಯಾದೀತು



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ದಿನದಲ್ಲಿ ಸ್ವಲ್ಪ ಹೊತ್ತಾದರೂ ನಿರಾಳವಾಗಿ ಇರಬೇಕು ಎಂದು ಅನಿಸದವರು ಬಹುಶಃ ಯಾರೂ ಇರಲಾರರು. ಈ ವಿಚಾರವನ್ನು ನಿದ್ದೆಗೆ ಅನ್ವಯಿಸದೇ ನೋಡಬೇಕು. ನಿದ್ದೆಯಲ್ಲಿ ಸಚೇತನ ಮನಸ್ಸು ಕ್ರಿಯಾಶೀಲವಾಗಿ ಇರುವುದಿಲ್ಲ. ಸಚೇತನ ಮನಸ್ಸು ಕ್ರಿಯಾಶೀಲವಾಗಿದ್ದಾಗ ದೇಹ ಮತ್ತು ಮನಸ್ಸಿಗೆ ಸಿಗುವ ವಿಶ್ರಾಂತಿಯು ಮುಂದೆ ಹೆಚ್ಚು ಕೆಲಸ ಮಾಡುವುದಕ್ಕೂ ಮಾಡುವ ಕೆಲಸದಲ್ಲಿ ಹೆಚ್ಚು ದಕ್ಷತೆಯನ್ನು ತರುವುದಕ್ಕೂ ಪ್ರೇರಕವಾಗಿರುತ್ತದೆ. ಅಲ್ಲದೆ, ವ್ಯಾವಹಾರಿಕವಾಗಿ ಮಾಡಲೇಬೇಕಾದ ಕೆಲಸ ಮಾಡಿದ ನಂತರ ಸಿಗುವ ವಿಶ್ರಾಂತಿಯು ವೈಯಕ್ತಿಕವಾಗಿ ಸೃಜನಶೀಲ ಚಿಂತನೆ, ಸೃಜನಶೀಲ ಚಟುವಟಿಕೆಗಳಿಗೆ ಉತ್ತೇಜನಕಾರಿಯಾಗಿರುತ್ತದೆ. ಕಾರ್ಮಿಕ ಕಾಯ್ದೆಗಳೂ ವಿಶ್ರಾಂತಿಯ ಅವಧಿಯನ್ನು ಪರಿಗಣಿಸುತ್ತವೆ. ಮಕ್ಕಳ ಹಕ್ಕುಗಳಲ್ಲಿ ಮಕ್ಕಳ ವಿಶ್ರಾಂತಿಯ ಹಕ್ಕು ಮತ್ತು ಆಟವಾಡುವ ಹಕ್ಕುಗಳೆರಡೂ ಸೇರಿಕೊಳ್ಳುತ್ತವೆ.


ಆದರೆ, ಯಾವುದೇ ಘಟಕವನ್ನು ದಿನದ 24 ಗಂಟೆಗಳೂ ಯಾವ ಯಾವ ರೀತಿಯಲ್ಲಿ ಬಳಸಿಕೊಂಡು ಉಪಯೋಗ ಪಡೆಯಬೇಕು ಎನ್ನುವಂತಹ ಯೋಜನೆಗಳು ಜಾಗತೀಕರಣ ನಂತರದ ಆರ್ಥಿಕ ಸಿದ್ಧಾಂತಗಳ ಧೋರಣೆಯಾಗಿದೆ. ಇಂದಿನ ಶಿಕ್ಷಣವು ಈ ಧೋರಣೆಯನ್ನು ಬಹಳಷ್ಟು ಪ್ರಭಾವಿಸಿದೆ. ಅಂತಹ ಪ್ರಭಾವದ ಭಾಗವಾಗಿಯೇ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಡೆಯುವ ಗರಿಷ್ಠ ಅಂಕಗಳಷ್ಟೇ ಶಿಕ್ಷಣದ ಗುರಿ ಎಂದು ವ್ಯಾವಹಾರಿಕವಾಗಿ ಎಲ್ಲರೂ ಒಪ್ಪಿಕೊಳ್ಳುವ ಪರಿಸ್ಥಿತಿಯೂ ಬಂದಾಗಿದೆ. ಆಗ, ನಿರಾಳರಾಗಿದ್ದಾಗ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಗಳಿಸುವ ಜ್ಞಾನವು ಶೈಕ್ಷಣಿಕವಾಗಿ ಪರಿಗಣನೆಗೇ ಒಳಪಡುವುದಿಲ್ಲ.

ಶಿಕ್ಷಣದ ಔದ್ಯಮೀಕರಣ ನಡೆಯುವ ಮೊದಲು, ಶಾಲಾ ಕಾಲೇಜುಗಳ ವೇಳಾಪಟ್ಟಿಯಲ್ಲಿ ಅಧ್ಯಾಪಕರಿಗೆ ಬೋಧನಾ ಅವಧಿಯನ್ನು ಹಂಚಿಕೆ ಮಾಡುವಾಗ, ಎರಡು ಬೋಧನಾ ಅವಧಿಗಳ ನಡುವೆ ಒಂದು ವಿರಾಮದ ಅವಧಿ ದೊರೆಯುವಂತೆ ಆದ್ಯತೆ ನೀಡಲಾಗುತ್ತಿತ್ತು. ತರಗತಿ ನಡೆಸುವ ಎರಡು ಅವಧಿಗಳ ನಡುವೆ ಒಂದು ವಿರಾಮದ ಅವಧಿ ಏಕೆ? ಅದು ಎಲ್ಲಾದರೂ ತಿರುಗಾಡಿಕೊಂಡು ಬರಲು ಇರುವ ಅವಧಿಯಲ್ಲ. ಅದೂ ಕೆಲಸದ ಅವಧಿಯೇ ಆಗಿರುತ್ತದೆ. ಆ ಸಮಯವು ಮುಂದಿನ ತರಗತಿಯಲ್ಲಿ ಪಠ್ಯ ವಿಷಯವನ್ನು ಯಾವ ರೀತಿ ವಿದ್ಯಾರ್ಥಿಗೆ ತಲುಪಿಸಬೇಕು, ಕಲಿಕಾ ಕ್ರಮವನ್ನು ಹೇಗೆ ನಿರ್ವಹಿಸಬೇಕು ಎಂಬಂತಹ ಬೋಧನಾ ಸಿದ್ಧತೆಗಳನ್ನು ಮಾಡಿಕೊಳ್ಳಲು ಇರುವ ಅವಧಿಯಾಗಿರುತ್ತದೆ.

ಈಗ, ಸಿದ್ಧತೆ ಮಾಡಿಕೊಂಡು ತರಗತಿಗೆ ಹೋಗಬೇಕು ಎಂಬ ಚಿಂತನೆ ಇದೆ. ಆದರೆ ಅದಕ್ಕಾಗಿ ಸಮಯವನ್ನು ಒದಗಿಸಿಯೇ ವೇಳಾಪಟ್ಟಿ ತಯಾರಿಸಬೇಕು ಎಂಬ ಚಿಂತನೆ ಬಹುತೇಕ ಹೊರಟುಹೋಗಿದೆ. ಇದರ ಜೊತೆ ಜೊತೆಗೆ ಬೋಧಕರ ಕಾರ್ಯ ಒತ್ತಡಗಳು ಹೆಚ್ಚಾಗಿರುವುದರಿಂದ, ಶಾಲಾ ಕಾಲೇಜುಗಳಲ್ಲಿ ಇರುವ ಅವಧಿಯಲ್ಲಿ ಬೋಧನಾ ಸಿದ್ಧತೆ ಮಾಡಿಕೊಳ್ಳಲು ಸಮಯ ಬಹುಮಟ್ಟಿಗೆ ಲಭ್ಯವಾಗುವುದಿಲ್ಲ. ಏನಿದ್ದರೂ ಮನೆಯಲ್ಲಿಯೇ ಸಿದ್ಧತೆ ಮಾಡಿಕೊಂಡು ಬರಬೇಕು. ಮನೆಗೆ ಹೋದಾಗ ಮನೆಗೆ ಸಂಬಂಧಿಸಿದ ಹಲವು ಕೆಲಸ ಕಾರ್ಯಗಳಿರುತ್ತವೆ. ಅದರಲ್ಲೂ ಮಹಿಳೆಯರಿಗೆ ಮನೆವಾರ್ತೆಯ ಕೆಲಸ ಇನ್ನೂ ಜಾಸ್ತಿ ಇರುತ್ತದೆ. ಕೊನೆಗೆ, 'ಪಾಠ ಬೋಧನೆಗೆ ಸಿದ್ಧತೆ' ಎಂಬ ಪರಿಕಲ್ಪನೆಯು ಔಪಚಾರಿಕ ಪರಿಕಲ್ಪನೆಯಾಗಿಯಷ್ಟೇ ಉಳಿದುಕೊಳ್ಳುತ್ತದೆ. ಸ್ವಾರಸ್ಯದ ಸಂಗತಿ ಎಂದರೆ, ಇಂದಿನ ಶೈಕ್ಷಣಿಕ ಗುರಿಯನ್ನು ಈಡೇರಿಸಲು ಪಾಠ ಬೋಧನೆ ಸಿದ್ಧತೆಯ ಅಗತ್ಯವೂ ಇಲ್ಲ. ಆದರೆ ಅಂಕಗಳನ್ನು ಗಳಿಸುವ ಏಕಮಾತ್ರ ಉದ್ದೇಶದ ಶಿಕ್ಷಣದಲ್ಲಿ ಪ್ರಶ್ನೋತ್ತರಗಳ ಅಭ್ಯಾಸ ಮಾತ್ರ ನಡೆಯಬೇಕಾದ್ದು. ಆಗ ಪ್ರಶ್ನೋತ್ತರಗಳ ಒಂದು ದಾಖಲೆಯನ್ನು ಮಾತ್ರ ಸಿದ್ಧಪಡಿಸಿಕೊಂಡರೆ ಸಾಕಾಗುತ್ತದೆ. ಉಳಿದ ಬೋಧನಾ ಸಿದ್ಧತೆಗಳ ಅಗತ್ಯವೇ ಇರುವುದಿಲ್ಲ!

ಅಧ್ಯಾಪಕರಿಗೆರಜೆಜಾಸ್ತಿಇದೆಎಂಬಭಾವನೆಸಾರ್ವತ್ರಿಕವಾಗಿ ಇದೆ. ದಸರಾ ಮತ್ತು ಬೇಸಿಗೆ ರಜೆಯ ವಿಷಯಕ್ಕೆ ಸೀಮಿತವಾಗಿ ಈ ಅಭಿಪ್ರಾಯ ನಿಜವೂ ಹೌದು. ಆದರೆ ಆಡಳಿತಾತ್ಮಕ ಜವಾಬ್ದಾರಿಗಳು ರಜೆಯಲ್ಲೂ ಇರುತ್ತವೆ. ಚುನಾವಣಾ ಕಾರ್ಯ, ತರಬೇತಿ, ಶಾಲೆಗೆ ಮಕ್ಕಳನ್ನು ಕರೆತರಲು ನಡೆಸುವ ಕ್ಷೇತ್ರ ಕಾರ್ಯ, ಪ್ರವೇಶ ಅರ್ಜಿಯ ವಿತರಣೆ, ಪ್ರವೇಶ ಪರೀಕ್ಷೆಯ ನಿರ್ವಹಣೆ, ಪ್ರವೇಶ ದಾಖಲೆಗಳ ರಚನೆಯಂತಹ ಹಲವು ಕಾರ್ಯಗಳು ರಜೆಯಲ್ಲೂ ಇರುತ್ತವೆ. ಎರಡೂವರೆ ದಶಕಗಳ ಹಿಂದೆ ಆಡಳಿತಾತ್ಮಕ ಕಾರ್ಯಗಳೇ ಕಡಿಮೆ ಇದ್ದಾಗ ದೊರೆಯುತ್ತಿದ್ದ ರಜೆಯ ವಿರಾಮ ಈಗ ಅಧ್ಯಾಪಕರಿಗೆ ಇಲ್ಲ. ಅದರಿಂದಾಗಿ ರಜೆಯ ಅವಧಿಯಲ್ಲೂ ಅಧ್ಯಾಪಕರು ಸಣ್ಣ ಸಣ್ಣ ಪ್ರವಾಸ ಕೈಗೊಳ್ಳುವುದು, ನಿರಾಳರಾಗುವುದು, ಅಂತಹ ಅನುಭವಗಳನ್ನು ಶೈಕ್ಷಣಿಕವಾಗಿ ಬಳಸುವುದು ಎಲ್ಲ ಈಗ ಸಾಧ್ಯವಾಗದ ವಿಚಾರವಾಗಿದೆ. ದೊರೆಯುವ ಸಾಂದರ್ಭಿಕ ರಜೆಯನ್ನು ಪಡೆದಾಗಲೂ ತರಗತಿಯಿಂದ ಹೊರಗಿರಬಹುದೇ ವಿನಾ ನಿರಾಳವಾಗಿರಲು ಸಾಧ್ಯವಿಲ್ಲ. ಬರೀ ಗಳಿಕೆಯ ರಜೆ ಅಥವಾ ಶಿಶುಪಾಲನೆಯ ರಜೆ, ವೇತನರಹಿತ ರಜೆ, ಪೋಷಕತ್ವದ ರಜೆಯಂಥವುಗಳನ್ನು ಪಡೆದಾಗ ಮಾತ್ರ ಶಾಲಾ ಜವಾಬ್ದಾರಿಗಳಿಂದ ಒಂದಷ್ಟು ನಿರಾಳರಾಗಿರಲು ಸಾಧ್ಯ.

ಮಕ್ಕಳ ವಿಚಾರಕ್ಕೆ ಬಂದರೆ, ಶಾಲಾ ಅವಧಿಯಲ್ಲಿ ಪ್ರತಿಭಾ ಪ್ರದರ್ಶನಕ್ಕೆ ಸಿದ್ಧತೆ, ಚಟುವಟಿಕೆ, ಯೋಜನಾ ಕಾರ್ಯ, ವಾರ್ಷಿಕೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳ ತರಬೇತಿ ಪಡೆಯುವುದು, ಪ್ರದರ್ಶಿಸುವುದು, ಕ್ರೀಡಾ ಸ್ಪರ್ಧೆಗಳು, ಪರೀಕ್ಷಾ ಸಿದ್ಧತೆಗಳು ಎಂದಾಗುತ್ತವೆ. ಇದರ ಜೊತೆಗೆ ಬೆಳಿಗ್ಗೆ, ಸಂಜೆ ಜಿಮ್, ಯೋಗ, ಸಂಗೀತ, ನೃತ್ಯದಂತಹ ಐಚ್ಛಿಕ ಕಲಿಕಾ ತರಗತಿಗಳು ಇರುತ್ತವೆ. ರಾತ್ರಿಯಾದರೆ ಅಂಕಗಳಿಗಾಗಿ ಓದುವುದು ಇರುತ್ತದೆ.




ಬೇಸಿಗೆ ರಜೆಯಲ್ಲಿ ಬೇಸಿಗೆ ಶಿಬಿರ, ಮಕ್ಕಳಿಗಾಗಿ ವಿವಿಧ ಯೋಜನೆಗಳು, ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಾಗಿನ ತರಬೇತಿ... ಹೀಗೆ ಯಾವುದೋ ಒಂದರಲ್ಲಿ ನಿರಂತರ ತೊಡಗಿಕೊಳ್ಳುವಿಕೆ ಇರುತ್ತದೆ. ಔಪಚಾರಿಕ ಪಠ್ಯವಸ್ತು ಇಲ್ಲ ಎನ್ನುವುದನ್ನು ಬಿಟ್ಟರೆ ಇಂಥ ಕಾರ್ಯಕ್ರಮಗಳಲ್ಲೂ 'ಹೋಂ ವರ್ಕ್'ಗಳು ಇರುತ್ತವೆ! ಮಕ್ಕಳಿಗೆ ಆಟವಾಡಲು ವ್ಯವಸ್ಥೆ ಇದೆ. ಆದರೆ ಅವರು ಯಾವಾಗ ಯಾವ ಆಟವನ್ನು ಆಡಬೇಕು ಎನ್ನುವುದನ್ನು ಕೋಚ್‌ಗಳು ನಿರ್ಧರಿಸುತ್ತಾರೆ.

ಎಲ್ಲವೂ ಇವೆ. ಆದರೆ ಎಲ್ಲವೂ ಯಾರಿಂದಲೋ ನಿರ್ದೇಶಿಸಲ್ಪಟ್ಟು ಯಾಂತ್ರಿಕವಾಗಿ ನಡೆಸಲ್ಪಡುತ್ತವೆ. ಸ್ವಇಚ್ಛೆಯಿಂದ ಸ್ವತಂತ್ರ ಚಿಂತನೆಯ ಮೂಲಕ ಸೃಜನಶೀಲವಾಗಿ ವಿಕಾಸಗೊಳ್ಳಲು ಅಧ್ಯಾಪಕರು, ವಿದ್ಯಾರ್ಥಿಗಳು ಇಬ್ಬರಿಗೂ ಅವಕಾಶವಿಲ್ಲ. ಸರ್ಕಾರಿ ಶಾಲೆಗಳಾದರೆ ಸಿಬ್ಬಂದಿ ಕೊರತೆ, ಖಾಸಗಿ ಶಾಲೆಗಳಾದರೆ ಸಿಬ್ಬಂದಿಯ ಮೇಲಿನ ಅತಿಯಾದ ನಿಯಂತ್ರಣದ ಹೇರಿಕೆಗಳು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡವಿಲ್ಲದ ಒಂದು ಸ್ಥಿತಿಯೇ ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಿಸುತ್ತವೆ. ಈ ರೀತಿಯ ಒತ್ತಡ ಸಾರ್ವಜನಿಕ ಜೀವನದಲ್ಲೂ ಇದೆ. ಒಂದು ಮದುವೆ ಸಮಾರಂಭಕ್ಕೆ ಹೋದಾಗಲೂ ಮದುವೆ ಮುಗಿಸಿ, ಆಚೆ ಮನೆಯವನ ಗೃಹಪ್ರವೇಶಕ್ಕೂ ಹೋಗಿ, ಅಲ್ಲಿಂದ ತಹಶೀಲ್ದಾರ್ ಕಚೇರಿಗೆ ಹೋಗಿ ದಾಖಲೆ ಪಡೆದು ಅದನ್ನು ಮತ್ತೆಲ್ಲಿಗೋ ತಲುಪಿಸಿ, ಸಂಜೆ ದೇವಸ್ಥಾನದ ಜಾತ್ರೆಗೆ ಹಾಜರಾಗಿ ಬರುವುದು ಎನ್ನುವ ಲೆಕ್ಕಾಚಾರದಲ್ಲೇ ಎಲ್ಲವನ್ನೂ ಮುಗಿಸುವುದೇ ವಿನಾ ನಿರಾಳವಾಗಿ ಮದುವೆಯಲ್ಲಿ ಭಾಗವಹಿಸಿ ನಿಧಾನವಾಗಿ ಬಂದರಾಯಿತು ಎನ್ನುವ ಮನಃಸ್ಥಿತಿಯಲ್ಲಿ ಯಾರೂ ಇಲ್ಲ. ವ್ಯವಸ್ಥೆ ಹೀಗಾದಾಗ ಅಲ್ಲಿ, 'ಮುಗಿಸುವುದು' ಎನ್ನುವ ಪರಿಕಲ್ಪನೆಗೆ ಮಾತ್ರ ಮಹತ್ವವಿರುವುದೇ ಹೊರತು 'ಅನುಭವಿಸುವ' ಪರಿಕಲ್ಪನೆಗೆ ಯಾವ ಮಹತ್ವವೂ ಇರುವುದಿಲ್ಲ.

ಆದರೆ ಸೃಜನಶೀಲ ಚಟುವಟಿಕೆಗಳು ಕ್ರಿಯೆ ಮತ್ತು ಪ್ರಕ್ರಿಯೆಯಲ್ಲಿ ತೊಡಗಿಕೊಂಡಾಗ ದೊರೆಯುವ ಅನುಭವಗಳಿಂದ ಬೆಳೆಯುತ್ತವೆ. ಪೂರ್ಣವಾಗಿ ನಿರಾಳರಾಗಿದ್ದು, ಇಷ್ಟಬಂದಂತೆ ಚಟುವಟಿಕೆಗಳನ್ನು ಕೈಗೆತ್ತಿಕೊಂಡಾಗ ನಡೆಯುವ ಪರಿಪೂರ್ಣ ತೊಡಗಿಕೊಳ್ಳುವಿಕೆಯಲ್ಲಿ ಸಿಗುವ ಆನಂದ ಮತ್ತು ಅನುಭವಗಳು ಶೈಕ್ಷಣಿಕ ಸನ್ನಿವೇಶದಲ್ಲಿ ತುಂಬ ಮಹತ್ವವನ್ನು ಹೊಂದಿರುತ್ತವೆ. ಅದಕ್ಕಾಗಿ ಶೈಕ್ಷಣಿಕ ಸಂದರ್ಭದಲ್ಲಿ ಪ್ರತ್ಯೇಕ ಧೋರಣೆಗಳ ಜಾರಿಯ ಅಗತ್ಯವಿದೆ.

ಮಕ್ಕಳಿಗಿರುವ ವಿಶ್ರಾಂತಿಯ ಹಕ್ಕು ಎಂಬುದು ಬಯಸಿದಂತೆ ವಿಶ್ರಾಂತಿಯ ಹಕ್ಕು ಎಂಬರ್ಥದಲ್ಲಿ, ಆಟವಾಡುವ ಹಕ್ಕು ಎಂಬುದು ಇಷ್ಟಬಂದದ್ದನ್ನು ಆಟವಾಡುವ ಹಕ್ಕು ಎಂಬರ್ಥದಲ್ಲಿ ಮರುನಿರೂಪಣೆ ಆಗಬೇಕಾಗುತ್ತದೆ. ಸಿಬ್ಬಂದಿಯ ವಿರಾಮದ ಬಗ್ಗೆ ಸ್ಪಷ್ಟ ಮಾರ್ಗಸೂಚಿ ಇರಬೇಕಾಗುತ್ತದೆ. ಈಗಿನ ವಿರಾಮರಹಿತ ಸ್ಥಿತಿಯನ್ನು ಬದಲಿಸಲು ಏನಾದರೊಂದು ಮಾಡದೇ ಇದ್ದರೆ ಶಿಕ್ಷಣವು ಸಂವೇದನಾರಹಿತ ಯಂತ್ರಮಾನವರ ಕೇಂದ್ರವಾಗುವ ಅಪಾಯವಿದೆ.

ಚುರುಮುರಿ



ಅಪ್ಪಾ, ತಂದೇ...!

• ಬಿ.ಎನ್.ಮಲ್ಲೇಶ್

'ಲೇ ಗುಡ್ಡೆ, ಪೇಪರ್ ನೋಡಿದ್ಯಾ? ನಮ್ ಚೆಸ್ ಆಟಗಾರ ಪ್ರಜ್ಞಾನಂದ ವರ್ಲ್ಡ್ ಚಾಂಪಿಯನ್‌ನ ಸೋಲ್ಸಿ ಈಗ ವಿಶ್ವದ ನಂಬರ್ ಒನ್ ಆಟಗಾರ ಆಗ್ಯಾನಂತೆ. ಎಂಥ ಎಮ್ಮೆ ಅಲ್ವ?' ಎಂದ ತೆಪರೇಸಿ.

'ಎಮ್ಮೆ ಅಲ್ಲ, ಹೆಮ್ಮೆ' ತಿದ್ದಿದ ದುಬ್ಬೀರ, 'ಚೆಸ್ ಆಡಾಕೆ ಬಾಳ ಬುದ್ಧಿವಂತಿಕಿ ಬೇಕು, ಚೆಕ್ ಇಟ್ರೆ ಎದುರಿಗೆ ಕೂತೋನು ಹಂಗೇ ಪತರಗುಟ್ಟಬೇಕು' ಎಂದ.

'ಈ ಚೆಕ್ ಇಡೋದ್ರಲ್ಲಿ ನಮ್ ರಾಜಕಾರಣಿಗಳಿಗಿಂತ ಎಕ್ಸ್‌ಪರ್ಟ್ ಯಾರದಾರಲೆ, ಎಲೆಕ್ಷನ್ ಗೆಲ್ಲಾಕೆ ಅವರಿಗೆ ಇವ್ರು, ಇವರಿಗೆ ಅವ್ರು ಚೆಕ್ ಇಡ್ತಾನೇ ಇರ್ತಾರೆ' ಗುಡ್ಡೆ ವಿಷಯಾಂತರ ಮಾಡಿದ.

'ಗೊತ್ತು ಬಿಡಪ, ಇಂಡಿಯಾಕ್ಕೆ ಭಾರತ, ಟಿಪ್ಪುಗೆ ಸಾವರ್ಕರು, ಜೋಡೋಗೆ ಒಂದು ದೇಶ ಒಂದು ಕಾನೂನು... ಎದುರು ಪಕ್ಷದೋರು ಜಾಸ್ತಿ ಹಾರಾಡಿದ್ರೆ ಇ.ಡಿ. ಐಟಿ... ಇವೆಲ್ಲ ಚೆಕ್ ಇಟ್ಟಂಗೇ ತಾನೆ?' ಕೊಟ್ರೇಶಿ ಒಂದೊಂದೇ ಬಿಡಿಸಿ ಹೇಳಿದ.

'ಅಬಾಬಬ, ಎಷ್ಟು ಶಾಣ್ಯಾ ಅದೀಯಲ್ಲೋ ಕೊಟ್ರಾ. ಸರಿ, ಈಗ ಗ್ಯಾರಂಟಿಗೆ ಏನ್ ಚೆಕ್ಕು? ನ್ಯಾಯ ಯಾತ್ರೆಗೆ ಏನ್ ಚೆಕ್ಕು?' ತೆಪರೇಸಿ ಕೇಳಿದ.

'ಅದ್ಕೆಲ್ಲ ಮಂದಿರ ಐತಲ್ಲ, ಮಂದಿರ ತೋರ್ಸಿ ಚೆಕ್ ಇಡ್ತೀವಿ'.

'ಮಂದಿರ ತೋರಿಸ್ತೀರಿ ಸರಿ, ಜನರ ಹೊಟ್ಟೆಗೆ ಏನ್ ತೋರಿಸ್ತೀರಿ, ಯುವಕರ ಕೆಲ್ಸಕ್ಕೆ ಏನ್ ದಾರಿ ತೋರಿಸ್ತೀರಿ?' ಗುಡ್ಡೆ ತಕರಾರು.

ಯಾಕೋ ವಿಷಯ ಎಲ್ಲೆಲ್ಲಿಗೋ ಹೋಗ್ತತಿ ಅನ್ನಿಸಿ ದುಬ್ಬೀರ 'ಈಗ ಅದು ಬಿಡ್ರಪ, ಈಗ ನಮ್ ತೆಪರೇಸಿಗೆ ಚೆಕ್ ಇಡೋರು ಯಾರು?' ಎಂದ.

'ತೆಪರನಿಗಾ? ಇನ್ಯಾರು ಅವನೆಂಡ್ತಿ ಪಮ್ಮಿ!' ಕೊಟ್ರ ಕಿಸಕ್ಕೆಂದ.

'ಲೇಯ್, ಸರಿಯಾಗಿ ಮಾತಾಡು ಮಗನೆ' ತೆಪರೇಸಿಗೆ ಸಿಟ್ಟು ಬಂತು.

'ಏನು? ಮಗನೆ ಅಂದ್ಯಾ? ಅಪ್ಪಾ ತಂದೇ... ಖರ್ಚಿಗೆ ಒಂದೆರಡು ಸಾವ್ರ ಪಾಕೆಟ್ ಮನಿ ತಳ್ಳು ಮುಂದೇ...' ಎಂದ ಕೊಟ್ರ ನಾಟಕೀಯವಾಗಿ. ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ಭಯೋತ್ಪಾದನೆಗೆ ಬೆಂಬಲ ಸಲ್ಲ



ಭಯೋತ್ಪಾದನೆಯನ್ನು ಪ್ರಾಯೋಜಿಸುವ ಎರಡು ದೇಶಗಳು, ಭಯೋತ್ಪಾದಕರ ಅಡಗುತಾಣಗಳ ಮೇಲೆ ಪರಸ್ಪರ ಬಾಂಬ್ ದಾಳಿ ನಡೆಸುತ್ತಿವೆ. ಇದರಿಂದಾಗಿ ಎಲ್ಲಿಯವರೆಗೆ ನಾಗರಿಕರ ಸಾವು ಸಂಭವಿಸುವುದಿಲ್ಲವೋ ಅಲ್ಲಿಯವರೆಗೂ ವಿಶ್ವದ ದೃಷ್ಟಿಯಿಂದ ಈ ಬೆಳವಣಿಗೆಯು ನಿಜಕ್ಕೂ ಒಳ್ಳೆಯದೇ ಆಗಿರುತ್ತದೆ, ಅಲ್ಲವೇ? #Pakistan #Iran

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಕೆಲ ದಿನಗಳ ಹಿಂದೆ ಇಂಡಿಗೊ ವಿಮಾನದ ಪ್ರಯಾಣಿಕರೊಬ್ಬರು ಪೈಲಟ್ ಮೇಲೆ ಹಲ್ಲೆ ನಡೆಸಿದ್ದರು. ಇದೀಗ ಬರೌನೀ– ಲಖನೌ ಎಕ್ಸ್‌ಪ್ರೆಸ್ ರೈಲಿನಲ್ಲಿ ಟಿಕೆಟ್ ತಪಾಸಣೆ ಮಾಡುವವರು ಪ್ರಯಾಣಿಕರೊಬ್ಬರ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೊ ದೃಶ್ಯ ಹೊರಬಿದ್ದಿದೆ. ಟಿಕೆಟ್ ತಪಾಸಣೆ ಮಾಡುವವರಿಗೆ ಪ್ರಯಾಣಿಕನನ್ನು ಥಳಿಸುವ ಹಕ್ಕಿದೆಯೇ? (ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದರೆ ಕಾನೂನಿನ ಪ್ರಕಾರ ಕ್ರಮ ಜರುಗಿಸಬೇಕೇ ವಿನಾ ಪ್ರಯಾಣಿಕನನ್ನು ಥಳಿಸುವುದಲ್ಲ). ಸಾಮಾನ್ಯ ಜನರ ಮೇಲೆ ನಿರ್ಭೀತಿಯಿಂದ ಅಧಿಕಾರ ಚಲಾವಣೆ?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 19-1-1999

• **ಅಮರ್ತ್ಯ ಸೇನ್‌ಗೆ ಭಾರತ ರತ್ನ**

ನವದೆಹಲಿ, ಜ. 18 – ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ್ಯ ಸೇನ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ನೀಡಲಾಗಿದೆ.

• **ಪಂಚಾಯಿತಿ ಚುನಾವಣೆ ಮುಂದಕ್ಕೆ?**

ಬೆಂಗಳೂರು, ಜ. 18 – ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರುವ ಉದ್ದೇಶದಿಂದ ಪಂಚಾಯತ್ ರಾಜ್ ಕಾಯ್ದೆಗೆ ಅಗತ್ಯ ತಿದ್ದುಪಡಿ ತರಲು ಇಂದು ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಈ ಬದಲಾವಣೆಗಳನ್ನು ತರುವ ಸಂಬಂಧ ಸಂಪುಟ ಸಭೆ ಕಾಲಮಿತಿ ನಿಗದಿಪಡಿಸದೇ ಇರುವುದರಿಂದ, ಬರುವ ಫೆಬ್ರುವರಿ–ಮಾರ್ಚ್‌ನಲ್ಲಿ ನಡೆಯಬೇಕಾಗಿದ್ದ ಪಂಚಾಯಿತಿ ಚುನಾವಣೆಗಳು ಅನಿರ್ದಿಷ್ಟ ಕಾಲ ಮುಂದಕ್ಕೆ ಹೋಗುವುದು ಈಗ ನಿಶ್ಚಿತವಾಗಿದೆ.

'ಹಾಲಿ ಇರುವ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಹಲವಾರು ನ್ಯೂನತೆಗಳಿದ್ದು, ಈ ವ್ಯವಸ್ಥೆಯಲ್ಲೇ ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಸಂಪುಟ ಸಭೆ ಅಭಿಪ್ರಾಯಪಟ್ಟಿದೆ' ಎಂದು ವಾರ್ತಾ ಸಚಿವ ಎಂ.ಸಿ ನಾಣಯ್ಯ ಅವರು ಸಭೆಯ ನಂತರ ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 19-1-1974

• **ರಾಜಕೋಟೆಯಲ್ಲಿ ಪೊಲೀಸ್ ಗುಂಡೇಟಿಗೆ ಐವರ ಬಲಿ**

ರಾಜಕೋಟೆ, ಜ. 18 – ಬೆಲೆ ಏರಿಕೆ ವಿರುದ್ಧ ಇಲ್ಲಿ ಇಂದು ನಡೆದ ಬಂದ್ ಅವಧಿಯಲ್ಲಿ ಗಲಭೆ, ಲೂಟಿ ಹಾಗೂ ಬೆಂಕಿ ಹಚ್ಚುವುದರಲ್ಲಿ ತೊಡಗಿದ್ದ ಗುಂಪನ್ನು ಚದುರಿಸಲು ಪೊಲೀಸ್ ಮತ್ತು ಸಿಆರ್‌ಪಿ ಅವರು ಅನೇಕ ಸುತ್ತು ಗುಂಡು ಹಾರಿಸಿದಾಗ ಐವರು ಸತ್ತರು.

ಪೊಲೀಸರ ಗೋಲಿಬಾರಿನಲ್ಲಿ ಇನ್ನಿತರ ಮೂವರು ಗಾಯಗೊಂಡರು. ಆಸ್ಪತ್ರೆಗೆ ಸೇರಿರುವ ಗಾಯಾಳುಗಳಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಪೊಲೀಸರ ಗೋಲಿಬಾರಿನಲ್ಲಿ ಇಬ್ಬರು ಸತ್ತಿದ್ದಾರೆಂದು ಅಧಿಕೃತ ವರದಿ ತಿಳಿಸಿದೆ.

ಬೆಲೆ ಏರಿಕೆ ವಿರುದ್ಧ ಬಂದ್‌ಗೆ ಜನಸಂಘ ಹಾಗೂ ಇತರ ವಿರೋಧಪಕ್ಷಗಳು ಕರೆ ಕೊಟ್ಟಿದ್ದವು.

• **ಶ್ರೀಕೃಷ್ಣಾಪುರ ಮಠಾಧೀಶರಿಂದ ಪರ್ಯಾಯ ಪೀಠಾರೋಹಣ**

ಉಡುಪಿ, ಜ. 18 – ಶ್ರೀಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರ ಪರ್ಯಾಯ ಪೀಠಾರೋಹಣ ಸಮಾರಂಭವು ಇಂದು ಇಲ್ಲಿ ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆ 6.15ಕ್ಕೆ ಜೋಡುಕಟ್ಟೆಯಲ್ಲಿ ಶ್ರೀವಿದ್ಯಾಸಾಗರ ತೀರ್ಥ ಶ್ರೀಪಾದರನ್ನು ಪುರಪ್ರಮುಖರು ಹಾಗೂ ಇತರ ಮಠಾಧೀಶರು ಸ್ವಾಗತಿಸಿದರು.

ಸಂಗತ

ಎಲ್ಲಿದೆ ಸಾರ್ವಜನಿಕ ನೈತಿಕತೆ?

ನಮ್ಮ ರಾಜಕೀಯ ಕ್ಷೇತ್ರವು 'ಸಂವಾದರಾಹಿತ್ಯ' ಸ್ಥಿತಿಯ ಕಡೆ ಚಲಿಸುತ್ತಿರುವುದು ದೇಶದ ಪ್ರಜಾಪ್ರಭುತ್ವದ ಭವಿಷ್ಯದ ದೃಷ್ಟಿಯಿಂದ ಅಪಾಯಕಾರಿ ಬೆಳವಣಿಗೆ

• ಕಿರಣ್ ಎಂ. ಗಾಜನೂರು


ಪ್ರಕರಣ- 1: ಗಾಂಧೀಜಿಯೊಂದಿಗಿನ ಭಿನ್ನಾಭಿಪ್ರಾಯದ ಕಾರಣಕ್ಕೆ, ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ತೊರೆದ ಸುಭಾಷ್‌ಚಂದ್ರ ಬೋಸ್ ಮುಂದೆ ತಾವು ಸ್ಥಾಪಿಸಿದ 'ಭಾರತೀಯ ರಾಷ್ಟ್ರೀಯ ಸೇನೆ'ಯ ತುಕಡಿಗಳಿಗೆ ಗಾಂಧೀಜಿ, ಜವಾಹರಲಾಲ್ ನೆಹರೂ, ಮೌಲಾನಾ ಆಜಾದ್ ಅವರ ಹೆಸರುಗಳನ್ನು ಇಡುತ್ತಾರೆ! ಬಳಿಕ ಗಾಂಧೀಜಿಯನ್ನು ದೇಶದ 'ಪಿತಾಮಹ' ಎಂದು ಕರೆಯುತ್ತಾರೆ. ಜರ್ಮನಿಯಿಂದ ತಮ್ಮದೇ ಆಜಾದ್ ಹಿಂದ್ ರೇಡಿಯೊದಲ್ಲಿ, ಗಾಂಧೀಜಿ ಆರಂಭಿಸಿದ್ದ 'ಭಾರತ ಬಿಟ್ಟು ತೊಲಗಿ' ಚಳವಳಿಯನ್ನು 'ಅಹಿಂಸಾತ್ಮಕ ಗೆರಿಲ್ಲಾ ಹೋರಾಟ ತಂತ್ರ' ಎಂದು ಕರೆಯುತ್ತಾರೆ. ಸ್ವಾತಂತ್ರ್ಯ ಪಡೆಯುವ ದಿಸೆಯಲ್ಲಿ ಇದೊಂದು 'ಮಹಾನ್ ಚಳವಳಿ' ಎಂದು ವಿಶ್ಲೇಷಿಸುತ್ತಾರೆ.

ಪ್ರಕರಣ- 2: ಅದು 1999ರ ಕಾಲ. ಲೋಕಸಭೆಯಲ್ಲಿ ಮಾತನಾಡುತ್ತಿದ್ದ ಅಟಲ್ ಬಿಹಾರಿ ವಾಜಪೇಯಿ, 'ನೆಹರೂ ಮತ್ತು ನನ್ನ ನಡುವೆ ಬಹಳಷ್ಟು ತಾತ್ವಿಕ ಭಿನ್ನಾಭಿಪ್ರಾಯಗಳಿದ್ದವು. ಒಮ್ಮೆ ನಾನು ಅವರಿಗೆ 'ನಿಮ್ಮದು ಹೊಂದಾಣಿಕೆಯ ವ್ಯಕ್ತಿತ್ವ. ನಿಮ್ಮಲ್ಲಿ ಚರ್ಚಿಲ್ ಮತ್ತು ಚೆಂಬರ್ಲಿನ್ ಇಬ್ಬರ ಗುಣಗಳೂ ಇವೆ' ಎಂಬ ಗಂಭೀರ ಟೀಕೆಯನ್ನು ಮಾಡಿಬಿಟ್ಟಿದ್ದೆ! ಆದರೆ ನಂತರ ದೇಶದಲ್ಲಿ ಮೊದಲ ಕಾಂಗ್ರೆಸ್ಸೇತರ ಸರ್ಕಾರವು ಮೊರಾರ್ಜಿ ದೇಸಾಯಿ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಆಗ, ಲೋಕಸಭೆಯ ದಕ್ಷಿಣ ಬ್ಲಾಕಿನಲ್ಲಿ ಯಾವಾಗಲೂ ಇರುತ್ತಿದ್ದ ನೆಹರೂ ಅವರ ಭಾವಚಿತ್ರವನ್ನು ತೆಗೆಯಲಾಗಿತ್ತು. ವಿದೇಶಾಂಗ ಸಚಿವನಾಗಿದ್ದ ನಾನು, ಆ ಬಗ್ಗೆ ಪ್ರಶ್ನಿಸಿದೆ. ಎಲ್ಲರೂ ಮೌನವಾಗಿದ್ದರು. ಮರುಕ್ಷಣವೇ ನೆಹರೂ ಅವರ ಭಾವಚಿತ್ರವನ್ನು ಅಲ್ಲಿ ಮತ್ತೆ ಹಾಕಲಾಯಿತು' ಎಂದು ಸ್ಮರಿಸಿದ್ದರು.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ರಾಜಕೀಯದಲ್ಲಿ ಘಟಿಸಿದ ಈ ಎರಡು ಪ್ರಕರಣಗಳು ಭಾರತದ ರಾಜಕಾರಣದಲ್ಲಿ ವೈಯಕ್ತಿಕ ಅಭಿಪ್ರಾಯಗಳ ಆಚೆಗಿನ ಸಾರ್ವಜನಿಕ ವಿಮರ್ಶೆಯ ಮಾದರಿಯೊಂದನ್ನು ನಮಗೆ ಪರಿಚಯಿಸುತ್ತವೆ. ಹಾಗೆ ನೋಡುವುದಾದರೆ, ಈ ನೆಲದ ಜಾನಪದ ಪರಂಪರೆ, ಪುರಾಣಗಳು, ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳು, ಮಂಟೆಸ್ವಾಮಿ ಮತ್ತು ಮಲೆ ಮಹದೇಶ್ವರ ಕಾವ್ಯದ ರಚನೆಗಳು ಸೇರಿದಂತೆ ಎಲ್ಲವೂ ವೈಯಕ್ತಿಕತೆಯ ಆಚೆಗಿನ ಈ ಸಮೃದ್ಧ ತಾತ್ವಿಕ ಸಂಘರ್ಷದ ಮಾದರಿಯನ್ನೇ ಮೂಲದ್ರವ್ಯವಾಗಿ ಹೊಂದಿವೆ. ಉದಾಹರಣೆಗೆ, ಸ್ವಾತಂತ್ರ್ಯ ಚಳವಳಿಯ ಕಾಲದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಇತಿಹಾಸವೇ ಈ ವೈವಿಧ್ಯಮಯ ತಾತ್ವಿಕ ಸಂಕಥನಗಳ ಅರ್ಥಪೂರ್ಣ ಚರಿತ್ರೆಯಾಗಿದೆ. ಅದರಲ್ಲೂ ಮಂದಗಾಮಿಗಳು, ತೀವ್ರಗಾಮಿಗಳು ಮತ್ತು ಗಾಂಧಿವಾದಿಗಳ ನಡುವಿನ ಆರೋಗ್ಯಕರ ತಾತ್ವಿಕ ಸಂವಾದಗಳು ಈ ದೇಶದ ಪರಂಪರೆಯು ರೂಢಿಸಿಕೊಂಡು ಬಂದ ಬೌದ್ಧಿಕ ಅರಿವಿನ ಮುಂದುವರಿದ ಭಾಗವೇ ಅನ್ನುವಷ್ಟು ಆಸಕ್ತಿಕರವಾಗಿವೆ.

'ಯಾವ ಸ್ವರೂಪದ ಸ್ವಾತಂತ್ರ್ಯ ನಮಗೆ ಬೇಕು' ಎಂಬ ಪ್ರಶ್ನೆಯನ್ನು ಆಧರಿಸಿ, ಗಾಂಧಿ, ಭಗತ್ ಸಿಂಗ್, ಅಂಬೇಡ್ಕರ್ ಸೇರಿದಂತೆ ಆ ಕಾಲದ ರಾಷ್ಟ್ರೀಯವಾದಿಗಳು ಮತ್ತು ಸಮಾಜವಾದಿಗಳು ಮುಂದಿಟ್ಟ ಚರ್ಚೆಯು ಕೆಲವು ಮಿತಿಗಳ ಆಚೆಗೆ ಜಗತ್ತಿನ ಜ್ಞಾನ ವಿಸ್ತರಣೆಗೆ ಹೊಸದೊಂದು ಚೌಕಟ್ಟನ್ನು ರೂಪಿಸಿಕೊಟ್ಟಿತ್ತು. ಆ ಕಾರಣಕ್ಕೆ, ಭಾರತೀಯ ಸ್ವಾತಂತ್ರ್ಯ ಚಳವಳಿಯು ಜಗತ್ತಿನ ಬೇರೆ ಎಲ್ಲಾ ದೇಶಗಳ ಸ್ವಾತಂತ್ರ್ಯ ಹೋರಾಟಗಳಿಗಿಂತ ಭಿನ್ನ ಮತ್ತು ಆಸಕ್ತಿಕರ ಎಂಬ ಸಂಗತಿಯನ್ನು 'ದಿ ಐಡಿಯಾ ಆಫ್ ಇಂಡಿಯಾ' ಕೃತಿಯ ಲೇಖಕ ಸುನಿಲ್ ಖಿಲ್ನಾನಿ ಸೇರಿದಂತೆ ಹಲವಾರು ವಿದ್ವಾಂಸರು ಬೆಳೆಸಿದ್ದಾರೆ.

ಈ ಮಾದರಿಯ ಚರ್ಚೆಯು ರಾಜಕೀಯ ನಾಯಕರ ಮೇಲೆ ಎಷ್ಟು ವ್ಯಾಪಕವಾದ ಪ್ರಭಾವ ಬೀರುತ್ತಿತ್ತು ಅಂದರೆ, ಹಿಂದೂ ಕೋಡ್ ಬಿಲ್ ಮಂಡಿಸಿದ ಸಮಯದಲ್ಲಿ, ತಾವು ನಂಬಿದ ತಾತ್ವಿಕತೆಯನ್ನು ಲೋಕಸಭೆ ಒಪ್ಪದಿದ್ದಾಗ, ಕಾನೂನು ಸಚಿವ



ಸ್ಥಾನಕ್ಕೆ ಅಂಬೇಡ್ಕರ್ ರಾಜೀನಾಮೆ ಸಲ್ಲಿಸಿದ್ದರು. ರೈಲ್ವೆ ಸಚಿವರಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಅವರು, ರೈಲು ಅಪಘಾತವಾಗಿ ನೂರಾರು ಜನ ಪ್ರಾಣತೆತ್ತಾಗ ಎರಡು ಬಾರಿ ರಾಜೀನಾಮೆ ನೀಡಿದ್ದರು. ಇದಕ್ಕೂ ಅವರು ಕೊಟ್ಟ ಕಾರಣ ನೈತಿಕ ಹೊಣೆ.

ಆದರೆ ವರ್ತಮಾನದ ನಮ್ಮ ರಾಜಕೀಯಕ್ಷೇತ್ರ 'ಸಂವಾದರಾಹಿತ್ಯ' ಸ್ಥಿತಿಯತ್ತ ಚಲಿಸುತ್ತಿದೆ. ಅದು ಧರ್ಮದ ಕುರಿತ ಚರ್ಚೆಯಿರಲಿ, ಸಾರ್ವಜನಿಕ ನೀತಿಗಳ ಕುರಿತ ಚರ್ಚೆಯಿರಲಿ ಇವು ಯಾವುವೂ ಸಮರ್ಥವಾದ ತಾತ್ವಿಕತೆಯನ್ನು ಆಧರಿಸಿ ಮಂಡಿಸುತ್ತಿರುವ ವಾದಕ್ಕೆ ಬದಲಾಗಿ ವೈಯಕ್ತಿಕ ಕೆಸರೆರಚಾಟವನ್ನೇ ಆಧರಿಸಿರುವಂತೆ ಭಾಸವಾಗುತ್ತಿವೆ. ಈ ಕ್ರಮವು ರಾಜಕೀಯ ನಾಯಕ, ಆತನ ಧಾರ್ಮಿಕ ಹಿನ್ನೆಲೆ, ಆತನ ಪಕ್ಷದಂತಹ ಸಂಕುಚಿತ ನೆಲೆಯಲ್ಲಿಯೇ ಯೋಚಿಸುವ ಗುಂಪಾಳ್ವಿಕೆಯ ಮನಃಸ್ಥಿತಿ ಸೃಷ್ಟಿಸಿಬಿಡುತ್ತದೆ.

ದೇಶದ ಪ್ರಜಾಪ್ರಭುತ್ವದ ಭವಿಷ್ಯದ ದೃಷ್ಟಿಯಿಂದ ಇದು ಅಪಾಯಕಾರಿಯಾದ ಬೆಳವಣಿಗೆ. ಏಕೆಂದರೆ ಈ ಮಾದರಿಯ ಏಕಮುಖ ವೈಯಕ್ತಿಕ ಚರ್ಚೆಯು ಪ್ರಜಾಪ್ರತಿನಿಧಿಗೆ ಇರಲೇಬೇಕಾದ ಸಾರ್ವಜನಿಕ ನೈತಿಕತೆಯ ಪ್ರಶ್ನೆಯನ್ನೇ ಅಪ್ರಸ್ತುತಗೊಳಿಸಿ, ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ನೈತಿಕತೆಗೆ ಮತ್ತು ಸಾರ್ವಜನಿಕ ಉತ್ತರದಾಯಿತ್ವಕ್ಕೆ ಇರುವ ಮಹತ್ವವನ್ನೇ ಅಪಮೌಲ್ಯಗೊಳಿಸಿಬಿಡುತ್ತದೆ. ಈ ಕುರಿತ ಎಚ್ಚರವನ್ನು ಈ ಕಾಲದ ರಾಜಕೀಯ ನಾಯಕರು ತಾವೇ ಪ್ರತಿಪಾದಿಸುವ ತಮ್ಮದೇ ಪರಂಪರೆ ಮತ್ತು ಚರಿತ್ರೆಯಿಂದ ಕಲಿಯುವರೇ ಎಂಬುದು ಪ್ರಶ್ನೆ.

ವಾಚಕರ ವಾಣಿ

ಮೀಸಲಾತಿ ಸದುದ್ದೇಶ ಈಡೇರಲಿ

ಪರಿಶಿಷ್ಟ ಜಾತಿಗಳ ಒಳಮೀಸಲಾತಿಗೆ ಸಂಬಂಧಿಸಿ ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹ ನಡೆ. ಇದು ಆದಷ್ಟು ಬೇಗ ಜಾರಿಯಾದರೆ ಬಹಳಷ್ಟು ವಂಚಿತರಿಗೆ ಅನುಕೂಲವಾಗಲಿದೆ. ಕರ್ನಾಟಕದ ಪರಿಶಿಷ್ಟ ಜಾತಿಗಳ ಕೆಲವು ಉಪಜಾತಿಗಳಿಗೆ ಸಂಬಂಧಿಸಿದಂತೆ ಈ ಪ್ರಯತ್ನವು ಮೂರು ದಶಕಗಳ ಹೋರಾಟದ ಫಲವೇ ಸರಿ. ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಪ್ರಾರಂಭದಿಂದಲೇ ಉಪವರ್ಗ ವರ್ಗೀಕರಣ ಮತ್ತು ಮೀಸಲಾತಿ ಜಾರಿಯಲ್ಲಿ ಇರುವುದು ಸರಿಯಷ್ಟೆ. ಹಾಗಾಗಿಯೇ ಆ ವರ್ಗಗಳಲ್ಲಿ ಬಹುತೇಕ ನಿರ್ಲಕ್ಷಿತ ಚಿಕ್ಕ ಪುಟ್ಟ ಸಮೂಹಗಳಿಗೂ ಮೀಸಲಾತಿ ಸೌಲಭ್ಯ ಸಿಗುವಂತಾಗಿದೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದಂತೆ ಈ ರೀತಿಯ ನಿಯಮವನ್ನು ಏಕೆ ಒಪ್ಪುತ್ತಿಲ್ಲವೋ ಗೊತ್ತಾಗುವುದಿಲ್ಲ.

ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯಗಳು ಸಿಗುವಂತಾಗಲಿ ಎಂಬ ಉದ್ದೇಶದಿಂದಲೇ ಮೀಸಲಾತಿಯನ್ನು ಜಾರಿಗೆ ತರಲಾಗಿದೆ. ಆ ಸಮೂಹಗಳಲ್ಲಿನ ಬಲಾಢ್ಯ ಉಪಜಾತಿಗಳೇ ಎಲ್ಲ ರೀತಿಯ ಅನುಕೂಲಗಳನ್ನೂ ಪಡೆಯುವಂತಾದರೆ ಅಥವಾ ಕಬಳಿಸುವುದಾದರೆ ಮೀಸಲಾತಿಯಿಂದ ಆಗಬಹುದಾದ ಅನುಕೂಲವಾದರೂ ಏನು? ಇದರಿಂದ ಸಂವಿಧಾನದ ಉದ್ದೇಶವನ್ನು ಈಡೇರಿಸಿದಂತೆ ಆಗುತ್ತದೆಯೇ?

ಶಿವರಾಜು ಎ.ಆರ್., ಜೆಟ್ಟಿ ಅಗ್ರಹಾರ, ಕೊರಟಗೆರೆ

ಬೇಕಿತ್ತೇ ಉಸಾಬರಿ?

ಬಿಜೆಪಿ ನೇತೃತ್ವದ ಹಿಂದಿನ ಅವಧಿಯ
ಸರ್ಕಾರದ ಮೇಲಿನ ಕಮಿಷನ್ ಆರೋಪದ
ವಿಚಾರಣೆಗೆ ನ್ಯಾ. ನಾಗಮೋಹನ
ದಾಸ್ ಆಯೋಗದ ನೇಮಕ,
ಆದರೆ ಅದಕ್ಕೆ ಅಗತ್ಯ ಸಿಬ್ಬಂದಿಯಿಲ್ಲ,
ಇದ್ದವರಿಗೆ ಸರಿಯಾಗಿ ಸಂಬಳವಿಲ್ಲ,
ಹೇಳುವುದು ಒಂದು, ಮಾಡುವುದು
ಇನ್ನೊಂದು ಎನ್ನುವುದು ಇದಕ್ಕೇ ಅಲ್ಲವೆ?
ಸೂಕ್ತ ವ್ಯವಸ್ಥೆ ಮಾಡದ ಮೇಲೆ
ಆಯೋಗ ನೇಮಕದ ಉಸಾಬರಿ
ಯಾಕೆ ಬೇಕಿತ್ತು ಸ್ವಾಮಿ?

ಶ್ರೀಧರ್ ಡಿ. ರಾಮಚಂದ್ರಪ್ಪ
ತುರುವನೂರು, ಚಿತ್ರದುರ್ಗ

ಕಾಲವೇ ಉತ್ತರಿಸಲಿದೆ

ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚು ಸ್ಥಾನಗಳನ್ನು ಪಡೆದರೆ ಐದು ವರ್ಷವೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಇರುತ್ತಾರೆ ಎಂದು ಅವರ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಜ. 18). ರಾಜ್ಯದ ಇತಿಹಾಸದಲ್ಲಿ ಲೋಕಸಭಾ ಚುನಾವಣೆಯಲ್ಲಿನ ಪರಾಭವದ ಹೊಣೆ ಹೊತ್ತು ಪದತ್ಯಾಗ ಮಾಡಿದವರಲ್ಲಿ ದೇವರಾಜ ಅರಸು ಅವರು ಮುಖ್ಯರು. ಆಗ ಇಂದಿರಾ ಗಾಂಧಿ ಅವರ ಜೊತೆಗಿನ ಅವರ ಸಂಬಂಧ ಹಳಸಿತ್ತು. ರಾಮಕೃಷ್ಣ ಹೆಗಡೆ ಅವರೂ ಇದೇ ಕಾರಣಕ್ಕಾಗಿ ರಾಜೀನಾಮೆ ನೀಡಿ ಚುನಾವಣೆಗೆ ಹೋದರು. ಮುಂಬರುವ ಲೋಕಸಭಾ ಚುನಾವಣೆ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಕನಿಷ್ಠ ಸೀಟುಗಳನ್ನು ಪಡೆದರೆ, ಅರಸು ಅವರಂತೆ ಸಿದ್ದರಾಮಯ್ಯ ಪದತ್ಯಾಗ ಮಾಡುವರೋ ಅಥವಾ ಗರಿಷ್ಠ ಸೀಟುಗಳನ್ನು ಗೆದ್ದು ಇತಿಹಾಸ ನಿರ್ಮಿಸುವರೋ ಕಾಲವೇ ಉತ್ತರಿಸಲಿದೆ.

ಗುರು ಜಗಳೂರು, ಹರಿಹರ

ಈ ನಗು ನಿರಂತರವಾಗಿರಲಿ...

ಪೊಲೀಸರು ಎಂದರೆ ಗಂಟು ಮೋರೆಯವರು ಎಂದು ತಿಳಿದಿರುವವರೇ ಹೆಚ್ಚು ಮಂದಿ. ಆದರೆ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಕೆಲವು ಹಿರಿಯ ಅಧಿಕಾರಿಗಳು ನಗೆ ಚಟಾಕಿ ಹಾರಿಸುತ್ತಾ ಖುಷಿಯಿಂದ ಇದ್ದ ಕ್ಷಣಗಳನ್ನು ಸೆರೆಹಿಡಿದಿರುವ ಚಿತ್ರ (ಪ್ರ.ವಾ., ಜ. 17) ಗಮನ ಸೆಳೆಯಿತು. ಅದರಲ್ಲೂ ಅಧಿಕಾರಿ ಮಾಲಿನಿ ಕೃಷ್ಣಮೂರ್ತಿ ಅವರ ನಗುವಂತೂ ಹೆಚ್ಚಿನ ಮುದ ಕೊಟ್ಟಿತು. ಸ್ಫೂರ್ತಿದಾಯಕವಾದ ಇಂತಹ ಚಿತ್ರಗಳು ಮಾಧ್ಯಮಗಳಲ್ಲಿ ಆಗಾಗ ಪ್ರಕಟವಾಗುತ್ತಿರಲಿ.

ಧನಲಕ್ಷ್ಮಿ ಪುರುಷೋತ್ತಮ್, ಕೋಲಾರ

ಸುಖಕರ ಪ್ರಯಾಣಕ್ಕೆ ಇರಲಿ ಆದ್ಯತೆ

ನಮ್ಮಲ್ಲಿ ಒಮ್ಮೆಯೂ ವಿಮಾನದಲ್ಲಿ ಪ್ರಯಾಣವನ್ನೇ ಮಾಡದ ಹಾಗೂ ಅದಕ್ಕಾಗಿ ಪ್ರಯತ್ನಿಸುತ್ತಿರುವ ಸಾವಿರಾರು ಮಂದಿ ಇದ್ದಾರೆ. ಆಕಾಶದಲ್ಲಿ ಹಾರಾಡುವ ವಿಮಾನವನ್ನು ಕುತೂಹಲದಿಂದ ವೀಕ್ಷಿಸುವ ಮಂದಿಯನ್ನು ಈಗಲೂ ಕಾಣುತ್ತೇವೆ. ವಿಮಾನದ ಒಳಭಾಗದ ನೋಟವನ್ನು ಚಲನಚಿತ್ರಗಳಲ್ಲಿ ಮಾತ್ರ ನೋಡಿದವರಿದ್ದಾರೆ. ಜೀವನದಲ್ಲಿ ಒಮ್ಮೆಯಾದರೂ ವಿಮಾನವನ್ನು ಹತ್ತಬೇಕು ಎಂಬ ಆಕಾಂಕ್ಷೆಯುಳ್ಳವರ ಸಂಖ್ಯೆಯೂ ಕಡಿಮೆಯೇನಿಲ್ಲ. ಅವರೆಲ್ಲರೂ, ವಿಮಾನದ ಶೌಚಾಲಯಕ್ಕೆ ಹೋದ ಪ್ರಯಾಣಿಕರೊಬ್ಬರು ವಾಪಸ್ ಬರುವಾಗ ಅದರ ಬಾಗಿಲನ್ನು ತೆರೆಯಲಾಗದೆ ಸುಮಾರು ಒಂದೂವರೆ ತಾಸು ಅಲ್ಲೇ ಸಿಕ್ಕಿಹಾಕಿಕೊಂಡ ಪ್ರಕರಣವನ್ನು (ಪ್ರ.ವಾ., ಜ. 18) ತಿಳಿದು, ಸದ್ಯ ತಾವು ಆ ವಿಮಾನದಲ್ಲಿ ಹೋಗಿ ಹಾಗೆ ಸಿಕ್ಕಿಹಾಕಿಕೊಳ್ಳಲಿಲ್ಲವಲ್ಲ ಎಂದು ನಿಟ್ಟುಸಿರು ಬಿಟ್ಟಿರಬಹುದು.

ಆರಾಮಾಗಿ ವಿಮಾನದಲ್ಲಿ ಕುಳಿತುಕೊಂಡು ಬರಲು ಹಣ ತೆತ್ತು, ಒಂದೂವರೆ ತಾಸು ಶೌಚಾಲಯದಲ್ಲೇ ಕಳೆಯಬೇಕಾಗಿ ಬಂದ ಆ ಪ್ರಯಾಣಿಕ ಆ ಅವಧಿಯಲ್ಲಿ ಮಾನಸಿಕವಾಗಿ ಎಷ್ಟು ತೊಂದರೆ ಅನುಭವಿಸಿರಬಹುದು? ಇನ್ನು ಮುಂದಾದರೂ ವಿಮಾನ ಹೊರಡುವುದಕ್ಕೆ ಮುಂಚೆಯೇ ಅದರ ಪ್ರತಿ ಭಾಗವೂ ಸದೃಢವಾಗಿದೆಯೇ, ಶೌಚಾಲಯದ ಚಿಲಕವನ್ನು ಸುಲಲಿತವಾಗಿ ತೆಗೆಯಬಹುದೇ, ಕುಂದುಕೊರತೆಗೆ ಆಸ್ಪದವಿಲ್ಲದಂತೆ ಸುಖಕರ ಪ್ರಯಾಣಕ್ಕೆ ವಿಮಾನ ಯೋಗ್ಯವಾಗಿದೆಯೇ ಎಂಬುದನ್ನು ಸಿಬ್ಬಂದಿ ಕಡ್ಡಾಯವಾಗಿ ಪರಿಶೀಲಿಸುವುದು ಒಳಿತು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಕಂಟೇನರ್‌ಗಳನ್ನು ಹೊತ್ತ ಸರಕು ಸಾಗಣೆ ಹಡಗು

ಏಡನ್ ಕೊಲ್ಲಿ: ಹಡಗುಗಳ ಮೇಲೆ ದಾಳಿ

ಭಾರತಕ್ಕೂ ತಟ್ಟಿದೆ ಬಿಸಿ



ಕೆಂಪು ಸಮುದ್ರ ಮತ್ತು ಏಡನ್ ಕೊಲ್ಲಿಯಲ್ಲಿ ವಾಣಿಜ್ಯ ಹಡಗುಗಳ ಮೇಲೆ ನಡೆಯುತ್ತಿರುವ ಡ್ರೋನ್ ದಾಳಿಯು ಜಾಗತಿಕ ವಾಣಿಜ್ಯ ವಹಿವಾಟನ್ನು ಬಾಧಿಸಿದೆ. ಸರಕು ಸಾಗಣೆ ಹಡಗು ಕಂಪನಿಗಳು ಈ ಮಾರ್ಗವನ್ನು ಸದ್ಯದ ಮಟ್ಟಿಗೆ ತೊರೆದಿವೆ. ಅನ್ಯ ಮಾರ್ಗದ ಮೂಲಕ ಸಾಗಣೆ ನಡೆಸುತ್ತಿರುವ ಕಾರಣ ಸಾಗಣೆ ವೆಚ್ಚ ಏರಿಕೆಯಾಗಿದೆ. ಹಲವು ದೇಶಗಳ ರಫ್ತು ವ್ಯಾಪಾರವೂ ಕುಸಿದಿದೆ. ಭಾರತಕ್ಕೂ ಇದರ ಬಿಸಿ ತಟ್ಟಿದೆ

ಪ್ರಜಾವಾಣಿ ವಾರ್ತೆ

ಕೆಂಪು ಸಮುದ್ರದಲ್ಲಿ ಉಂಟಾಗಿರುವ ಪ್ರಕ್ಷುಬ್ಧ ವಾತಾವರಣವು ಭಾರತದ ಆರ್ಥಿಕತೆಯ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. ಅಮೆರಿಕ ಹಾಗೂ ಐರೋಪ್ಯ ದೇಶಗಳಿಗೆ ಭಾರತವು ಸುಯೇಜ್ ಕಾಲುವೆ ಮೂಲಕವಾಗಿ ರಫ್ತು ನಡೆಸುತ್ತಿತ್ತು. ಕೆಂಪು ಸಮುದ್ರದಲ್ಲಿ ವಾಣಿಜ್ಯ ಹಡುಗಳ ಮೇಲೆ ನಡೆಯುತ್ತಿರುವ ದಾಳಿಯ ಕಾರಣದಿಂದಾಗಿ ಭಾರತದ ರಫ್ತು ವೆಚ್ಚವು ಎರಡು ಪಟ್ಟು ಅಧಿಕಗೊಂಡಿದೆ.

ಭಾರತ, ಸಿಂಗಪುರ ಸೇರಿದಂತೆ ಪೂರ್ವದ ಹಲವು ದೇಶಗಳು ತಮ್ಮ ಹಡಗು ಮಾರ್ಗವನ್ನು ಕೆಂಪು ಸಮುದ್ರದಿಂದ ದಕ್ಷಿಣ ಆಫ್ರಿಕಾದ ಕೇಪ್ ಆಫ್ ಗುಡ್‌ಹೋಪ್ ಮಾರ್ಗಕ್ಕೆ ಬದಲಾಯಿಸಿಕೊಂಡಿವೆ. ಭಾರತವೂ ಸೇರಿದಂತೆ ದಕ್ಷಿಣ ಏಷ್ಯಾದ ದೇಶಗಳ ಹಡಗುಗಳು ಅಮೆರಿಕ ಅಥವಾ ಐರೋಪ್ಯ ದೇಶಗಳನ್ನು ತಲುಪಲು ಇದು ಅತೀ ಉದ್ದದ ಮಾರ್ಗ. ಈ ಮೊದಲು ಕೋಲ್ಕತ್ತಾದಿಂದ ಒಂದು ಹಡಗು ನೆದರ್ಲೆಂಡ್ಸ್‌ಗೆ ಹೊರಟರೆ, ಕೆಂಪು ಸಮುದ್ರದ ಮೂಲಕ 24–26 ದಿನ ಪ್ರಯಾಣಿಸಬೇಕಿತ್ತು. ಆದರೆ ಈಗ ಆಫ್ರಿಕಾವನ್ನು ಬಳಸಿಕೊಂಡು ಕೇಪ್ ಆಫ್ ಗುಡ್ ಹೋಪ್ ಮಾರ್ಗದ ಮೂಲಕ ಹೋಗುವುದಾದರೆ 38–40 ದಿನ ಬೇಕಾಗುತ್ತದೆ. ಆದ್ದರಿಂದ, ಭಾರತದಿಂದ ಐರೋಪ್ಯ ದೇಶಗಳಿಗೆ ತಲುಪುವ ಪ್ರಯಾಣದ ದಿನಗಳು 14–20 ದಿನಗಳು ಹೆಚ್ಚಲಿವೆ. ಇದೇ ಕಾರಣಕ್ಕೆ ವೆಚ್ಚವೂ ಏರಿಕೆಯಾಗಲಿದೆ. ಈ ಹೆಚ್ಚುವರಿ ಅವಧಿಯ ಹೆಚ್ಚುವರಿ ವೆಚ್ಚವನ್ನು ಅಂತಿಮವಾಗಿ ಗ್ರಾಹಕನೇ ಭರಿಸಬೇಕಾಗುತ್ತದೆ.

ಐರೋಪ್ಯ ದೇಶಗಳಿಗೆ ಹಾಗೂ ಅಮೆರಿಕಕ್ಕೆ ಭಾರತವು ಮಾಡುವ ಒಟ್ಟು ರಫ್ತಿನಲ್ಲಿ ಶೇ 80ರಷ್ಟು ಪ್ರಮಾಣವು ಸುಯೇಜ್ ಕಾಲುವೆ ಮೂಲಕವೇ ಸಾಗುತ್ತದೆ. ಭಾರತವು ತನ್ನ ಒಟ್ಟು ರಫ್ತಿನಲ್ಲಿ ಶೇ 34ರಷ್ಟನ್ನು ಅಮೆರಿಕ ಹಾಗೂ ಐರೋಪ್ಯ ದೇಶಗಳಿಗೆ ಮಾಡುತ್ತದೆ. ಭಾರತದಿಂದ ಐರೋಪ್ಯ ದೇಶಗಳಿಗೆ ಹಡಗಿನ ಮೂಲಕ 20 ಅಡಿ ಉದ್ದದ ಒಂದು ಕಂಟೇನರ್ ಅನ್ನು ರವಾನೆ ಮಾಡಲು ಈ ಮೊದಲು (2023ರ ಅಕ್ಟೋಬರ್) ₹50 ಸಾವಿರ ಬೇಕಾಗುತ್ತಿತ್ತು. ಆದರೆ, ಈಗ ಈ ಮೊತ್ತವು ₹1.30 ಲಕ್ಷಕ್ಕೆ ಏರಿಕೆಯಾಗಿದೆ. ದೂರದ ಮಾರ್ಗದ ಹೆಚ್ಚುವರಿ ವೆಚ್ಚ ಮಾತ್ರವಲ್ಲದೆ, ಸರಕುಗಳ ಮೇಲೆ ವಿಮೆ ಕಂಪನಿಗಳು ಹೆಚ್ಚಿನ ಪ್ರೀಮಿಯಂ ವಿಧಿಸುತ್ತಿರುವುದೂ ವೆಚ್ಚ ಏರಿಕೆಗೆ ಕಾರಣ.

ವೆಚ್ಚ ಏರಿಕೆಯ ಕಾರಣದಿಂದ ಭಾರತದಿಂದಾಗುವ ರಫ್ತು ಗಣನೀಯ ಪ್ರಮಾಣದಲ್ಲಿ ಕುಸಿದಿದೆ. 2023ರ ನವೆಂಬರ್‌ಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ಭಾರತದಿಂದ ಐರೋಪ್ಯ ದೇಶಗಳತ್ತ ಮತ್ತು ಅಮೆರಿಕದತ್ತ ಸುಯೇಜ್ ಕಾಲುವೆ ಮೂಲಕ ರವಾನೆಯಾದ ಕಂಟೇನರ್ ಹಡಗುಗಳ ಪ್ರಮಾಣ ಶೇ 9ರಷ್ಟು ಇಳಿಕೆಯಾಗಿದೆ. ಡಿಸೆಂಬರ್‌ಗೆ ಹೋಲಿಸಿದರೆ, ಜನವರಿಯಲ್ಲಿಯೂ ಈ ಪ್ರಮಾಣ ಶೇ 1.2ರಷ್ಟು ಕಡಿಮೆಯಾಗಿದೆ.




ಅರಬ್ಬಿ ಸಮುದ್ರದ ಉತ್ತರ ಹಾಗೂ ಮಧ್ಯ ಭಾಗದಲ್ಲಿ ಹಾಗೂ ಕೆಂಪು ಸಮುದ್ರದಲ್ಲಿ ಭಾರತೀಯ ನೌಕಾ ಪಡೆಯ ನೌಕೆಗಳ ಗಸ್ತು –ಪಿಟಿಐ ಚಿತ್ರ

ಭಾರತದಿಂದ ಐರೋಪ್ಯ ದೇಶಗಳಿಗೆ ಪ್ರಮುಖವಾಗಿ ಜವಳಿ, ಔಷಧ, ಮಸಾಲೆ ಪದಾರ್ಥಗಳು ರಫ್ತಾಗುತ್ತವೆ. ದಕ್ಷಿಣ ಆಫ್ರಿಕಾದ ಮೂಲಕ ಸಾಗಣೆ ನಡೆಯುತ್ತಿರುವುದರಿಂದ ಈ ವಸ್ತುಗಳು ಐರೋಪ್ಯ ದೇಶಗಳಿಗೆ ತಲುಪುವುದು ತಡವಾಗುತ್ತಿದೆ. ಇದರಿಂದ ಆ ದೇಶಗಳಲ್ಲಿ ಭಾರತದ ಈ ವಸ್ತುಗಳ ಬೇಡಿಕೆಯು ಕಡಿಮೆಯಾಗಲಿದೆ. ಬೇಡಿಕೆ ಕಡಿಮೆಯಾಗುತ್ತಿದ್ದಂತೆ ಭಾರತದಲ್ಲಿ ಈ ವಸ್ತುಗಳ ಉತ್ಪಾದನೆಗೆ ಹೊಡೆತ ಬೀಳಲಿದೆ. ಈ ಹೊಡೆತವು ಕಡಿಮೆ ಅವಧಿಗೆ ಪರಿಣಾಮ ಬೀರಬಹುದು ನಿಜ. ಆದರೆ, ಈ ಹೊಡೆತದಿಂದ ಹೊರಬರಲಿಕ್ಕೆ ಹಲವು ತಿಂಗಳುಗಳು ಬೇಕಾಗಬಹುದು ಎನ್ನುತ್ತಾರೆ ರಫ್ತು ತಜ್ಞರು.

‘ಭಾರತದ ಸರಕುಗಳು ಇತರ ದೇಶಗಳನ್ನು ತಲುಪುವುದು ತಡವಾಗುತ್ತಿದೆ ಹಾಗೂ ಹಡಗಿನ ವೆಚ್ಚವು ಏರಿಕೆಯಾಗಿದೆ. ಪರಿಣಾಮವಾಗಿ ರಫ್ತೇ ಕಡಿಮೆಯಾಗಬಹುದು. ಇದರಿಂದಾಗಿ 2023–24 ಆರ್ಥಿಕ ವರ್ಷದ ಮಾರ್ಚ್ ಹೊತ್ತಿಗೆ ಭಾರತದ ರಫ್ತು ಮೊತ್ತದಲ್ಲಿ ಅಂದಾಜು ₹83,000 ಕೋಟಿಯಷ್ಟು ನಷ್ಟವಾಗಬಹುದು’ ಎಂದು ಎಂಜಿನಿಯರಿಂಗ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷ ಅರುಣ್ ಕುಮಾರ್ ಗರೋಡಿಯಾ ಅವರು ಅಂದಾಜಿಸಿದ್ದಾರೆ.

ಸರಕು ಸಾಗಣೆ ವೆಚ್ಚ ಏರಿಕೆ: ‘ಸರಕು ಸಾಗಣೆ ದರವನ್ನು ಇನ್ನಷ್ಟು ಹೆಚ್ಚಿಸುವುದಾಗಿ ಸರಕು ಸಾಗಣೆ ಹಡಗುಗಳ ಕಂಪನಿಗಳು ಬೆದರಿಕೆ ಒಡ್ಡಿವೆ’ ಎಂದು ಅರುಣ್ ಕುಮಾರ್ ಗರೋಡಿಯಾ ಈ ಹಿಂದೆ ಹೇಳಿದ್ದರು. ಈಗ ಸರಕು ಸಾಗಣೆ ವೆಚ್ಚವು ಶೇ 600ರಷ್ಟು ಏರಿಕೆಯಾಗಿದೆ. 40 ಅಡಿ ಉದ್ದದ ಒಂದು ಕಂಟೇನರ್ ಅನ್ನು ಕೋಲ್ಕತ್ತದಿಂದ ನೆದರ್ಲೆಂಡ್ಸ್‌ನ ರಾಟರ್‌ಡ್ಯಾಮ್‌ಗೆ ಸಾಗಿಸಲು ತಗಲುವ ವೆಚ್ಚವು ಅಂದಾಜು ₹60,000ದಿಂದ ₹3.32 ಲಕ್ಷಕ್ಕೆ ಏರಿಕೆಯಾಗಿದೆ. ಈ ಬಗ್ಗೆ ಭಾರತ ಸರ್ಕಾರವು ಗಮನಹರಿಸಿದ್ದು, ಹಣಕಾಸು ಸಚಿವಾಲಯ, ವಾಣಿಜ್ಯ ಸಚಿವಾಲಯ ಸೇರಿದಂತೆ ಇತರ ಸಂಬಂಧಪಟ್ಟ ಸಚಿವಾಲಯಗಳ ಮಧ್ಯೆ ಸರಣಿ ಸಭೆಗಳು ನಡೆಯುತ್ತಿವೆ. ❖

ಸಮುದ್ರ ಮಾರ್ಗ ಬದಲಿಸುವ ಅನಿವಾರ್ಯ

ದಾಳಿ ಕಡಲ್ಗಳ್ಳರದಲ್ಲ

ಅರಬ್ಬಿ ಸಮುದ್ರದಲ್ಲಿ ಆಫ್ರಿಕಾ ಖಂಡದ ಪೂರ್ವ ಕರಾವಳಿಯ ಉದ್ದಕ್ಕೂ ಕಡಲ್ಗಳ್ಳರ ದಾಳಿಯ ಅಪಾಯ ಇದ್ದೇ ಇತ್ತು. ಇದು ಜಾಗತಿಕ ವ್ಯಾಪಾರಕ್ಕೆ ದೊಡ್ಡ ತೊಡಕಾಗಿತ್ತು. ಈ ಕಾರಣದಿಂದಲೇ ಅಮೆರಿಕ, ಭಾರತ, ಶ್ರೀಲಂಕಾ ಸೇರಿದಂತೆ ಹಲವು ದೇಶಗಳು ಈ ಪ್ರದೇಶದಲ್ಲಿ ಗಸ್ತು ನೌಕೆಗಳು ಮತ್ತು ಯುದ್ಧನೌಕೆಗಳನ್ನು ನಿಯೋಜಿಸಿದ್ದವು. 2010ರ ನಂತರ ಗಸ್ತಿನ ಪ್ರಮಾಣ ಹೆಚ್ಚಿಸಲಾಗಿತ್ತು. ಪರಿಣಾಮವಾಗಿ ಕಡಲ್ಗಳ್ಳರ ದಾಳಿ ಇಲ್ಲವೇ ಇಲ್ಲ ಎನ್ನುವಷ್ಟು ಇಳಿಕೆಯಾಗಿತ್ತು. 2023ರ ನವೆಂಬರ್‌ನಲ್ಲಿ ಮತ್ತೆ ಏಡನ್ ಕೊಲ್ಲಿಯಲ್ಲಿ ಹಡಗುಗಳ ಮೇಲೆ ದಾಳಿ ನಡೆದಾಗ ಅದು ಕಡಲ್ಗಳ್ಳರದ್ದೇ ಕೃತ್ಯ ಎಂದು ಶಂಕಿಸಲಾಗಿತ್ತು. ಆದರೆ ವಾಸ್ತವ ಸಂಗತಿ ಬೇರೆಯದೇ ಇದೆ.

ಆಫ್ರಿಕಾ ಖಂಡ ಮತ್ತು ಅರೇಬಿಯನ್ ಉಪಖಂಡವನ್ನು ಬೇರ್ಪಡಿಸುವ ಕೆಂಪು ಸಮುದ್ರ, ಏಡನ್ ಕೊಲ್ಲಿಯಲ್ಲಿ ನವೆಂಬರ್‌ನಿಂದ ಡಿಸೆಂಬರ್ ಅಂತ್ಯದವರೆಗೆ ಇಂತಹ 34 ದಾಳಿಗಳು ನಡೆದಿವೆ. ಆ ದಾಳಿಗಳನ್ನು ಯೆಮನ್‌ನ ಹುಥಿ ಉಗ್ರರು ನಡೆಸಿದ್ದಾರೆ ಎಂದು ಅಮೆರಿಕ ಹೇಳಿದೆ. ಹುಥಿ ಸಹ ತಾನೇ ದಾಳಿ ನಡೆಸಿದ್ದಾಗಿ ಹೇಳಿಕೊಂಡಿದೆ.

ಈ ದಾಳಿಗಳ ಹಿಂದಿನ ಕಾರಣ ಜಾಗತಿಕ ರಾಜಕಾರಣಕ್ಕೆ ಸಂಬಂಧಿಸಿದ್ದು. ಪ್ಯಾಲೆಸ್ಟೀನ್‌ನ ಗಾಜಾಪಟ್ಟಿಯ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಖಂಡಿಸಿ ಹಡಗುಗಳ ಮೇಲೆ ಹುಥಿ ದಾಳಿ ನಡೆಸುತ್ತಿದೆ. ಈ ದಾಳಿಗಳನ್ನು ನಡೆಸಲು ಶಸ್ತ್ರಾಸ್ತ್ರ, ಆರ್ಥಿಕ ನೆರವು ಮತ್ತು ರಾಜಕೀಯ ಬೆಂಬಲ ನೀಡುತ್ತಿರುವುದು ಇರಾನ್.

ಸುಯೇಜ್–ಕೆಂಪು ಸಮುದ್ರ–ಏಡನ್ ಕೊಲ್ಲಿ–ಅರಬ್ಬಿ ಸಮುದ್ರದ ಮಾರ್ಗವಾಗಿ ಸಂಚರಿಸುವ ಎಲ್ಲಾ ಹಡಗುಗಳ ಮೇಲೆ ಹುಥಿ ದಾಳಿ ನಡೆಸುತ್ತಿಲ್ಲ. ಇಸ್ರೇಲ್ ಮತ್ತು ಇಸ್ರೇಲ್‌ನ ಯುದ್ಧವನ್ನು ಬೆಂಬಲಿಸುತ್ತಿರುವ ದೇಶಗಳಿಗೆ ಸಂಬಂಧಿಸಿದ ಹಡಗುಗಳ ಮೇಲೆ ಉಗ್ರರು ದಾಳಿ ನಡೆಸುತ್ತಿದ್ದಾರೆ. ಇಸ್ರೇಲ್, ಅಮೆರಿಕ, ಬ್ರಿಟನ್, ಫ್ರಾನ್ಸ್‌ನ ಹಡಗುಗಳ ಮೇಲೆ ಈವರೆಗೆ ದಾಳಿ ನಡೆದಿವೆ. ಆರಂಭದಲ್ಲಿ ಭಾರತವೂ ಇಸ್ರೇಲ್‌ನ ದಾಳಿಯನ್ನು ಬೆಂಬಲಿಸಿತ್ತು. ಹುಥಿ ಉಗ್ರರು ಭಾರತೀಯ ಸಿಬ್ಬಂದಿ ಇದ್ದ ಹಡಗುಗಳ ಮೇಲೂ ದಾಳಿ ನಡೆಸಿದ್ದರು.

ರಕ್ಷಣೆಗೆ ಭಾರತ, ಅಮೆರಿಕ

ಈಗ ಅರಬ್ಬಿ ಸಮುದ್ರ ಪ್ರದೇಶದಲ್ಲಿ ಸಂಚರಿಸುವ ಹಡಗುಗಳ ರಕ್ಷಣೆಗೆ ಅಮೆರಿಕ, ಭಾರತ ಧಾವಿಸಿವೆ. ಭಾರತದ ಹಡಗುಗಳು ಭಾರತದ ಜಲಗಡಿ ಮಾತ್ರವಲ್ಲದೆ, ಅಂತರರಾಷ್ಟ್ರೀಯ ಸಮುದ್ರದ ವ್ಯಾಪ್ತಿಯಲ್ಲೂ ಗಸ್ತು ನಡೆಸುತ್ತಿವೆ. ಭಾರತ ಮಾತ್ರವಲ್ಲದೆ, ಬೇರೆ ದೇಶಗಳ ಹಡಗುಗಳ ರಕ್ಷಣೆಗೂ ಕಾರ್ಯಾಚರಣೆ ನಡೆಸುತ್ತಿದೆ. ಅಮೆರಿಕವು ರಕ್ಷಣಾ ಕಾರ್ಯ ಮಾತ್ರವಲ್ಲದೆ, ಹುಥಿ ಉಗ್ರರ ದೋಣಿಗಳ ಮೇಲೂ ದಾಳಿ ನಡೆಸಿದೆ. ಆದರೆ ಇರಾನ್ ಮತ್ತು ಹುಥಿ ಮಾತ್ರ ಇಂತಹ ದಾಳಿಗಳಿಂದ ಹಿಂದೆ ಸರಿಯುತ್ತಿಲ್ಲ. ಗಾಜಾ ಮೇಲೆ ನಡೆಸುತ್ತಿರುವ ದಾಳಿಯನ್ನು ಇಸ್ರೇಲ್ ನಿಲ್ಲಿಸದ ಹೊರತು, ನಾವೂ ದಾಳಿ ನಿಲ್ಲಿಸುವುದಿಲ್ಲ ಎಂದು ಇರಾನ್ ಹೇಳಿದೆ. ಹಡಗುಗಳ ಮೇಲೆ ನಡೆಯುತ್ತಿರುವ ದಾಳಿಗಳು ದಿನೇ-ದಿನೇ ಹೆಚ್ಚಾಗುತ್ತಲೇ ಇವೆ.

ಸಿನಿ ಬಿಟ್ಸ್

‘ಹ್ಯಾಂಗ್‌ಓವರ್’ ನೆನಪಿಸಿದ ‘ಬ್ಯಾಚುಲರ್ ಪಾರ್ಟಿ’



ಯೋಗಿ, ರಕ್ಷಿತ್, ಅಚ್ಯುತ್ ಕುಮಾರ್ ಹಾಗೂ ದಿಗಂತ್

ಪರಂವಃ ಸ್ಟುಡಿಯೋಸ್ ಲಾಂಛನದಲ್ಲಿ ಅಭಿಜಿತ್ ಮಹೇಶ್ ನಿರ್ದೇಶಿಸಿರುವ ‘ಬ್ಯಾಚುಲರ್ ಪಾರ್ಟಿ’ ಸಿನಿಮಾ ಜ.26ಕ್ಕೆ ಬಿಡುಗಡೆಯಾಗುತ್ತಿದೆ. ಇತ್ತೀಚೆಗೆ ಚಿತ್ರದ ಟ್ರೈಲರ್ ಬಿಡುಗಡೆಯಾಗಿದ್ದು, ಹಾಲಿವುಡ್‌ನ ‘ದಿ ಹ್ಯಾಂಗ್‌ಓವರ್’ ಸಿನಿಮಾವನ್ನು ಇದು ನೆನಪಿಸಿದೆ.


ಜಿ.ಎಸ್. ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ನಿರ್ಮಾಣದ ಈ ಸಿನಿಮಾದಲ್ಲಿ ದಿಗಂತ್, ‘ಲೂಸ್ ಮಾದ’ ಯೋಗಿ, ಅಚ್ಯುತಕುಮಾರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

‘ನಾನು ‘ಲೆಟ್ಸ್ ಕಿಲ್ ಗಾಂಧಿ’ ಎನ್ನುವ ಕಿರುಚಿತ್ರ ಮಾಡುತ್ತಿದ್ದ ಸಮಯದಲ್ಲಿ ನನಗೆ ಅಭಿಜಿತ್ ಮಹೇಶ್ ಪರಿಚಯವಾಯಿತು. ಅದ್ಭುತವಾದ ಬರಹಗಾರ ಈತ. ‘ಕಿರಿಕ್ ಪಾರ್ಟಿ’, ‘ಅವನೇ ಶ್ರೀಮನ್ನಾರಾಯಣ’ ಚಿತ್ರಗಳಲ್ಲಿ ಒನ್‌ಲೈನ್ ಪಂಚಿಂಗ್ ಡೈಲಾಗ್ಸ್ ಹಿಂದೆ ಅಭಿಜಿತ್ ಕೊಡುಗೆಯಿದೆ. ಬಹಳ ವರ್ಷಗಳಿಂದ ನಿರ್ದೇಶನ ಮಾಡಲು ಅಭಿಜಿತ್‌ಗೆ ಹೇಳುತ್ತಿದ್ದೆ. ದಿಗಂತ್ ಹಾಗೂ ಯೋಗಿ ಇಬ್ಬರು ಅದ್ಭುತ ಕಲಾವಿದರು. ಯೋಗಿಯನ್ನು ಆ ಪಾತ್ರಕ್ಕೆ ನಾನೇ ಸೂಚಿಸಿದ್ದೆ. ‘ಹುಡುಗರು’ ಸಿನಿಮಾದಲ್ಲಿ ಅವರ ನಟನೆ ನೋಡಿ ಮೆಚ್ಚಿದ್ದೆ’ ಎಂದರು ರಕ್ಷಿತ್ ಶೆಟ್ಟಿ.

‘ಲಾಕ್‌ಡೌನ್ ಸಮಯದಲ್ಲಿ ಈ ಸಿನಿಮಾದ ಕಥೆ ಹುಟ್ಟಿಕೊಂಡಿತ್ತು’ ಎಂದು ಅನುಭವ ಹಂಚಿಕೊಂಡ ಅಭಿಜಿತ್, ‘ಇದೊಂದು ಪಕ್ಕಾ ಎಂಟರ್‌ಟೈನರ್ ಸಿನಿಮಾ. ಪ್ರೇಕ್ಷಕರು ಕೊಡುವ ದುಡ್ಡಿಗೆ ಖಂಡಿತ ಮೋಸವಿಲ್ಲ’ ಎಂದರು. ❖

ಹೊಸ ಅವತಾರದಲ್ಲಿ ನಾಗಭೂಷಣ್

‘ಟಗರು ಪಲ್ಯ’ ಯಶಸ್ಸಿನ ಬೆನ್ನಲ್ಲೇ ಧನಂಜಯ ಹಾಗೂ ನಾಗಭೂಷಣ್ ಮತ್ತೆ ಕೈಜೋಡಿಸಿದ್ದಾರೆ. ಸಂಕ್ರಾಂತಿಯಂದು ನಾಗಭೂಷಣ್ ನಟನೆಯ ಹೊಸ ಸಿನಿಮಾದ ಪೋಸ್ಟರ್ ಬಿಡುಗಡೆಯಾಗಿದ್ದು, ಕರಾಟೆ ಕಿಂಗ್ ಆಗಿ ನಾಗಭೂಷಣ್ ಕಾಣಿಸಿಕೊಂಡಿದ್ದಾರೆ.



ನಾಗಭೂಷಣ್

ಇದು ಧನಂಜಯ ಅವರ ಡಾಲಿ ಪಿಕ್ಚರ್ಸ್‌ನ 4ನೇ ಸಿನಿಮಾವಾಗಿದ್ದು, ‘ವಿದ್ಯಾಪತಿ’ ಎಂಬ ಶೀರ್ಷಿಕೆ ಇಡಲಾಗಿದೆ. ಈ ಹಿಂದೆ ನಾಗಭೂಷಣ್ ನಟನೆಯ ‘ಇಕ್ಕಟ್’ ಸಿನಿಮಾ ನಿರ್ದೇಶಿಸಿದ್ದ ಇಶಾಂ ಖಾನ್ ಹಾಗೂ ಹಸೀಂ ಖಾನ್ ಅವರೇ ‘ವಿದ್ಯಾಪತಿ’ಯ ಸಾರಥಿಗಳಾಗಿದ್ದಾರೆ. ಈ ಚಿತ್ರದ ಸಂಕಲನದ ಜವಾಬ್ದಾರಿಯನ್ನೂ ಅವರು ಹೊತ್ತುಕೊಂಡಿದ್ದಾರೆ. ಸಿನಿಮಾದ ಫಸ್ಟ್‌ಲುಕ್‌ನಲ್ಲಿ ನಾಗಭೂಷಣ್ ಕರಾಟೆ ಕಿಂಗ್ ಅವತಾರದಲ್ಲಿ ಪ್ರತ್ಯಕ್ಷರಾಗಿದ್ದಾರೆ.

ಆ್ಯಕ್ಷನ್ ಕಾಮಿಡಿ ಕಥಾಹಂದರದ ‘ವಿದ್ಯಾಪತಿ’ ಸಿನಿಮಾದ ಶೂಟಿಂಗ್ ಆರಂಭವಾಗಲಿದೆ. ❖

ಗುಂಡಣ್ಣ



ನುಡಿ ಬೆಳಗು

ರಾಮನಿಗೆ ತೋರಬೇಕಾದ ಪ್ರೀತಿ



ಪ್ರೊ.ಎಂ. ಕೃಷ್ಣೇಗೌಡ

ನನ್ನ ಗೌರವಾರ್ಹ ಗೆಳೆಯರೊಬ್ಬರು ಮೊನ್ನೆ ನಮ್ಮ ಮಾತಿನ ಮಧ್ಯೆ ಹೇಳಿದ್ದಿದು. ಅವರ ಮಾತಿನಲ್ಲೇ ಕೇಳಿ-

‘ನನ್ನ ತಮ್ಮ ಹುಟ್ಟಿದ್ದು ರಾಮನವಮಿಯ ದಿನ. ಆದ್ದರಿಂದ ತಾರೀಕು ಗೀರೀಕು ನೋಡದೆ ಪ್ರತೀವರ್ಷ ರಾಮನವಮಿಯ ದಿನ ಅವನ ಜನ್ಮದಿನ ಆಚರಿಸುತ್ತಿದ್ದೆವು. ಅದೊಂದು ವಿಶೇಷವಾದ ಹುಟ್ಟುಹಬ್ಬ. ನಮ್ಮ ತಂದೆಯವರು ಮಹಾ ಆಸ್ತಿಕರು. ಬೆಂಗಳೂರಿನಲ್ಲಿ ಆಗ ನಮ್ಮ ಮನೆ ಇದ್ದದ್ದು ಒಂದು ಸ್ಲಮ್‌ನ ಪಕ್ಕದಲ್ಲಿ. ಆ ದಿನ ನಮ್ಮ ತಂದೆಯವರು ಸ್ಲಮ್‌ನಿಂದ ಹತ್ತಾರು ಹುಡುಗರನ್ನು ಮನೆಗೆ ಕರೆದುಕೊಂಡು ಬರೋರು. ಅವರೆಲ್ಲರಿಗೂ ತಾವೇ ಮೈಕೈಯುಜ್ಜಿ, ತಲೆತಿಕ್ಕಿ ಸ್ನಾನ ಮಾಡಿಸೋರು. ಆ ಕೆಲಸದಲ್ಲಿ ನಾವೂ ಕೈ ಸೇರಿಸುತ್ತಿದ್ವಿ. ಯಾರಾದ್ರೂ ಬಂದು ‘ಇದೇನು ಮಾಡಿಸ್ತಿದ್ದೀರಿ ಸ್ವಾಮಿಗಳೆ?’ ಅಂತ ಕೇಳಿದರೆ ‘ಇವತ್ತು ರಾಮನವಮಿ ಅಲ್ವೇನಯ್ಯ? ಅದಕ್ಕೆ ರಾಮನಿಗೆ ಅಭಿಷೇಕ ಮಾಡಿಸ್ತಾ ಇದೀನಿ’ ಅಂತಿದ್ರು. ಆಮೇಲೆ ನಮ್ಮ ತಂದೆಯವರೇ ಆ ಮಕ್ಕಳ ಮೈಯೊರಸಿ ತಲೆ ಬಾಚಿ ಊಟಕ್ಕೆ ಬಡಿಸೋರು. ‘ರಾಮನಿಗೆ ಅಭಿಷೇಕ ಆಯಿತು, ಈಗ ನೈವೇದ್ಯ ಅನ್ನೋರು’. ಆ ದಿನವೆಲ್ಲಾ ಆ ಸ್ಲಮ್ಮಿನ ಮಕ್ಕಳೊಂದಿಗೆ ಆನಂದವಾಗಿ ಕಾಲ ಕಳೆಯೋರು. ಸಂಪ್ರದಾಯಸ್ಥರೂ ಆಗಿದ್ದ ನಮ್ಮ ತಂದೆಯವರು ಒಮ್ಮೆಯೂ ನಮ್ಮನ್ನು ಕೂರಿಸಿಕೊಂಡು ಬುದ್ಧಿ ಹೇಳಲಿಲ್ಲ. ಬದುಕಿ ತೋರಿಸಿದರು. ಶ್ಲೋಕಗಳ ಕಂಠಪಾಠ ಮಾಡಿಸಲಿಲ್ಲ. ತಮ್ಮಷ್ಟಕ್ಕೆ ತಾವೇ ಆನಂದವಾಗಿ ಶ್ಲೋಕಗಳನ್ನು ಹಾಡಿಕೊಳ್ಳೋರು. ಬದುಕಿನಲ್ಲಿ ಹೇಳಿ ಕಲಿಸುವಂಥದ್ದು, ಕೇಳಿ ಕಲಿಯುವಂಥದ್ದು ಕಡಿಮೆ ಇರುತ್ತದೆ. ಸ್ಲಮ್ಮಿನ ಮಕ್ಕಳನ್ನು ಕರೆತಂದು ಅವರೊಂದಿಗೆ ಹೀಗೆ ಆನಂದವಾಗಿ ರಾಮನವಮಿ ಮಾಡುತ್ತಿದ್ದ ಅಪ್ಪ ಒಮ್ಮೆಯೂ ಆ ಮಕ್ಕಳ ಬಡತನವನ್ನು ಅವಮಾನಿಸಲಿಲ್ಲ. ಅವರು ಮಹಾ ರಾಮಭಕ್ತರಾಗಿದ್ದರು’.

ದೇಶದಲ್ಲಿ ಈಗ ರಾಮನ ಮಾತು, ರಾಮಭಕ್ತಿಯ ಮಾತು ತುಂಬಾ ಕೇಳಿಬರುತ್ತಿದೆ. ಈ ಸಂದರ್ಭದಲ್ಲಿ ಯಾಕೋ ಈ ಪ್ರಸಂಗವನ್ನು ನಿಮ್ಮೊಂದಿಗೆ ಹೇಳಬೇಕೆನಿಸಿತು.

ಹಿಂದೆ ನಮ್ಮ ಕನ್ನಡದಲ್ಲಿ ಹೇಮಾವತಿ ಅಂತ ಒಂದು ಕನ್ನಡ ಸಿನಿಮಾ ಬಂದಿತ್ತು. ಅದರದೊಂದು ಹಾಡು ಈಗ ನೆನಪಾಗುತ್ತಿದೆ-

ಪ್ರೇಮಮೂರುತಿ ಒಲಿಯನು ಕೋಪತಾಪಕೆ |
ಶಾಂತಮೂರುತಿ ಒಲಿಯನು ರೋಷದ್ವೇಷಕೆ |
ಶಬರಿ ಯಾರೊ, ಗುಹನು ಯಾರೊ
ರಾಮನೇಕೆ ಒಲಿದನು?
ಕಲಹ ಕಂಡು ಮನದಿ ನೊಂದು
ಕಣ್ಣೀರ ಮಿಡಿವನು |
ಕಲ್ಯಾಣ ರಾಮಾ
ಕೌಸಲ್ಯ ರಾಮಾ ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜನವರಿ 19, 2024

ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ನವಮಿ ಗಂ. 19-52 ನಕ್ಷತ್ರ: ಭರಣಿ ಗಂ. 26-51 ಯೋಗ: ಸಾಧ್ಯಾ ಗಂ. 12-46 ಕರಣ: ಬಾಲವ ಗಂ. 08-15, ಮಕರ ಮಾಸದ 04 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 3.

ರಾಹುಕಾಲ : ಬೆಳಿಗ್ಗೆ 10-30 – 12-00

ಸೂರ್ಯೋದಯ : 07-01 ಸೂರ್ಯಾಸ್ತ : 06-21

ಮುಸ್ಲಿಂ ದಿನಾಂಕ : 07 ರಜಬ್

ಅದೃಷ್ಟ ಸಂಖ್ಯೆ : 5, 8

ಮೇಷ: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ನಿರೀಕ್ಷೆಗೆ ಪೂರಕವಾದ ಪ್ರಚೋದನೆ ಲಭಿಸಲಿದ. ಅನವಶ್ಯಕವಾಗಿ ಕಾಲಹರಣ ಮಾಡಬೇಕಾಗುವುದು.

ವೃಷಭ: ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿಯೇ ಉತ್ತಮ ಸಂಬಂಧ ಕೂಡಿ ಬರುವುದು. ವಿದ್ಯಾರ್ಥಿಗಳಿಗೆ ಉತ್ತಮ ಮಿತ್ರವರ್ಗದವರ ಸಹವಾಸವು ಅನುಕೂಲಕರವಾಗಿ ಕಂಡುಬರುವುದು.

ಮಿಥುನ: ಪ್ರಾಚೀನ ವಸ್ತುಗಳ ಸಂಗ್ರಹದಂಥ ವಿಚಾರದಲ್ಲಿ ಆಸಕ್ತಿ ಮೂಡಲಿದ್ದು, ಆಶ್ಚರ್ಯಕರ ರೀತಿಯಲ್ಲಿ ಲಭ್ಯವಾಗುವುದು. ಮುಂದೆ ಎದುರಾಗುವ ತೊಂದರೆಯನ್ನು ಮೊದಲೇ ಊಹಿಸಿಕೊಂಡು ಪರಿಹಾರ ಕಂಡುಕೊಳ್ಳಿ.

ಕರ್ಕಾಟಕ: ಲೇವಾದೇವಿ ವ್ಯವಹಾರವನ್ನು ಆಲೋಚನೆ ಮಾಡಿ ಕೈಗೂಳ್ಳುವುದು ಒಳ್ಳೆಯದು. ಮಕ್ಕಳ ವಿಚಾರವಾಗಿ ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿಯೇ ಇರುತ್ತದೆ. ಧಾರ್ಮಿಕ ಕೆಲಸಗಳಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ.

ಸಿಂಹ: ಕಾರ್ಮಿಕ ವರ್ಗದವರಿಗೆ ಹೆಚ್ಚಿನ ಆದಾಯ ಉಂಟಾಗಲಿದೆ. ಆಪ್ತರ ಸಕಾಲಿಕ ಸಹಾಯಕ್ಕೆ ಧನ್ಯವಾದ ತಿಳಿಸಲು ಮರೆಯದಿರಿ ಮತ್ತು ಅವರ ಸಂಪರ್ಕವನ್ನು ಭದ್ರ ಮಾಡಿಕೊಳ್ಳಿ. ನೀರಿನ ಬಗ್ಗೆ ಜಾಗರೂಕತೆ ಇರಲಿ.

ಕನ್ಯಾ: ದೊಡ್ಡ ಮಟ್ಟದಲ್ಲಿ ವ್ಯವಹಾರ ನಡೆಸುವವರು ಪಾಲುದಾರರನ್ನು ಹುಡುಕುವ ಪ್ರಯತ್ನ ನಡೆಸಬಹುದು. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೆ ಆತಂಕ ಬೇಡ. ವೈದ್ಯರ ಭೇಟಿ ಅವಶ್ಯಕವಿದ್ದಲ್ಲಿ ಮಾಡಿ.

ತುಲಾ: ಶಿಕ್ಷಣ ವೃತ್ತಿಯಲ್ಲಿರುವವರಿಗೆ ಈ ದಿನ ಹೊಸ ಅನುಭವ ಸಿಗುವಂತಾಗಬಹುದು. ಯಂತ್ರೋಪಕರಣದ ಕ್ರಿಯೆಯ ಬಗ್ಗೆ ಅತೀವ ಆಸಕ್ತಿ ಮೂಡುವುದು. ಸಿದ್ಧಿವಿನಾಯಕನ ಆರಾಧನೆಯು ಶುಭವನ್ನು ಉಂಟುಮಾಡುತ್ತದೆ.

ವೃಶ್ಚಿಕ: ಕೌಟುಂಬಿಕ ಜೀವನದಲ್ಲಿ ಅದರಲ್ಲೂ ಪ್ರಮುಖವಾಗಿ ವೈವಾಹಿಕ ಜೀವನದಲ್ಲಿ ಬದಲಾವಣೆಯೊಂದನ್ನು ಕಾಣುವಿರಿ. ಇಂದಿನ ಅವಧಿಯಲ್ಲಿ ಹಿರಿಯರ ಆರೋಗ್ಯ ತಪಾಸಣೆಯನ್ನು ನಡೆಸುವ ಬಗ್ಗೆ ಗಮನಹರಿಸಿ.

ಧನು: ಸಹೋದ್ಯೋಗಿಗಳಲ್ಲಿನ ವಿಚಾರ ವಿನಿಮಯವು ಅಸೂಯೆ ಅಥವಾ ದ್ವೇಷ ಹುಟ್ಟಬಹುದು. ಸಜ್ಜನರ ಭೇಟಿಯಿಂದ ಜ್ಞಾನಾರ್ಜನೆ ಮತ್ತು ಸಂತೋಷ ಉಂಟಾಗಲಿದೆ. ಧಾರ್ಮಿಕ ಅಧ್ಯಯನದಲ್ಲಿ ಆಸಕ್ತಿ ಮೂಡುವುದು.

ಮಕರ: ಅತಿಯಾಗಿ ನಂಬಿಕೆ ಇಟ್ಟಿರುವ ವ್ಯಕ್ತಿಗಳಿಂದ ಅಥವಾ ನಿಮ್ಮವರಿಂದಲೇ ನಿಮಗೆ ಈ ದಿನ ತೊಂದರೆಗಳು ಆಗಲಿದೆ. ಸರ್ಕಾರಿ ಕಾಮಗಾರಿಯ ಗುತ್ತಿಗೆದಾರರಿಗೆ ದೊಡ್ಡ ಯೋಜನೆಯೊಂದು ಹುಡುಕಿಕೊಂಡು ಬರಲಿದೆ.

ಕುಂಭ: ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಬಹಳ ಉಪಯೋಗವಾಗಲಿದೆ. ನೀರಿನ ವ್ಯತ್ಯಾಸದಿಂದ ಕೆಮ್ಮು, ಕಫದಂತಹ ಸಮಸ್ಯೆಗಳಿಂದ ನರಳಬೇಕಾಗಬಹುದು.

ಮೀನ: ನಾನಾ ಕಡೆಗಳಿಂದ ಸಂಪಾದನೆ ಇರುವುದು ಹಾಗೂ ಬರಬೇಕಿದ್ದ ಹಣ ಅಡಚಣೆಗಳಿಲ್ಲದೆ ಶೀಘ್ರದಲ್ಲಿ ಬರುವುದು. ಕೆಲಸ ಕಾರ್ಯಗಳಲ್ಲಿ ಅಡಚಣೆ ಇರದು, ಸುಲಭದಲ್ಲಿ ನೆರವೇರುವುದು. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ಪದಬಂಧ 5565

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

5. ಕಣದಲ್ಲಿ ಹಾಕಿದ ಲಗಾಮು (4)
6. ಗಡಕ್ಕನೆ ಹಾರಿದ ಗಂಡುಬೆಕ್ಕು (3)
7. ದೇಗುಲದ ಗೋಪುರದ ತುದಿ (3)
9. ಒಯ್ಯುವ ಸಾಧನ (3)
10. ಅತ್ಯಂತ ಶ್ರೇಷ್ಠವಾದ ಪದ! (5)
11. ಪರಿತಪಿಸುತ್ತಿದ್ದಾಗ ಕಾಣಿಸಿದ್ದು ಒಳ್ಳೆಯ ಹಾದಿ (3)
12. ಕಮ್ಮತದ ಹತ್ತಿರವಿರುವ ಟಂಕಶಾಲೆ (3)
14. ವಿಕಲಾಂಗನನ್ನು ನೋಡುತ್ತಿರುವವ ಹೆಡ್ಡ (3)
16. ಕಟಕಿಯಾಡುತ್ತಿರುವವನ ಬಾಯಿಯ ಕೊನೆ (4)

ಮೇಲಿಂದ ಕೆಳಕ್ಕೆ

1. ಯಾವುದೇ ಕಳಂಕವಿಲ್ಲದ್ದು (4)
2. ಹಗರಣದಲಿ ಸಿಕ್ಕಿರುವ ದನ (2)
3. ಬಾಣಸಿಗನಿಗೆ ಸಿಕ್ಕಿರುವ ಪಾಲು (2)
4. ಅಗತ್ಯವಾದುದು ಇದು (4)
8. ಶಾಪದ ಪಥಿಕ ತೊಟ್ಟಿರುವ ಪಣ (3)
9. ಚರ್ಚಿಸುತ್ತಲೇ ವಾದ್ಯ ನುಡಿಸುವವ ಬಂದಿದ್ದಾನೆ (3)
11. ಸುಡು ಬಿಸಿಲಲ್ಲಿ ತಲುಪಿದ ಸ್ಮಶಾನ (4)
13. ಕಾಯಿಸುತ್ತಲೇ ಮೋಸಮಾಡು! (4)
15. ಅತ್ತೆ ಕೊಟ್ಟಿರುವ ಒದೆತ! (2)
16. ಕಟಕಟೆಯಲ್ಲಿರುವವಳ ನಡು! (2)

1	■	■	2	■	■	3	■	4
5				■	■	6		
	■	■	■	■	■	■	■	
7		8	■	■	■	9		
■	■	10					■	■
11			■	■	■	12		13
	■	■	■	■	■	■	■	
14		15	■	■	16			
	■		■	■		■	■	

5564ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆನನ 3.ಏಕೀಕರಣ 6.ವನಿತ 7.ಚಟ 8.ಪಲ್ಲಟ 9.ಹಾರವ 10.ಅವನಿ 13.ಹೋರಿ 14.ಜುಲುಮೆ 16.ಹರಿಕೆಕಟ್ಟು 17.ಆಸ್ತಿಕ

ಮೇಲಿಂದ ಕೆಳಕ್ಕೆ:
1.ಆಟಾಟೋಪ 2.ನವ 3.ಏತ 4.ಕರಟ 5.ಣರಚ 7.ಚಲುವ 9.ಹಾಜರಿ 11.ನಿರಾತಂಕ 12.ವ್ಯಾಮೋಹ 13.ಹೋಲಿಕೆ 14.ಜುಟ್ಟು 15.ಮೇಳ

ಸುಡೊಕು 5950

		4		7	1	2		3
						6		
5	2		8		9		4	7
		5	4			3		
	6						7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5949 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

998 ಕ್ಯೂಸೆಕ್ ನೀರು ಹರಿಸಲು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಮಾರ್ಪಡಿಸಿರುವ ಕಾವೇರಿ ನೀರು ನಿಯಂತ್ರಣ ಪ್ರಾಧಿಕಾರದ ಆದೇಶದ ಪ್ರಕಾರ, ಕರ್ನಾಟಕ ರಾಜ್ಯವು ತಮಿಳುನಾಡಿಗೆ ಫೆಬ್ರುವರಿ ತಿಂಗಳಲ್ಲಿ ಪ್ರತಿದಿನ 998 ಕ್ಯೂಸೆಕ್ ನೀರನ್ನು ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿದೆ.

ನವದೆಹಲಿಯಲ್ಲಿ ಸಮಿತಿಯ ಅಧ್ಯಕ್ಷ ವಿನಿತ್ ಗುಪ್ತ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಮಿತಿಯ ಸಭೆಯಲ್ಲಿ ಕಾವೇರಿ ಜಲಾನಯನ ಪ್ರದೇಶದ ನೀರು ಹಾಗೂ ಬೆಳೆ ಪರಿಸ್ಥಿತಿಯ ಪರಾಮರ್ಶೆ ನಡೆಸಲಾಯಿತು.

ಜನವರಿ ತಿಂಗಳ ಉಳಿದ ಅವಧಿಯಲ್ಲಿ ಪ್ರತಿದಿನ 1,182 ಕ್ಯೂಸೆಕ್ ನೀರು ಹರಿಸಬೇಕು ಎಂದು ಸಮಿತಿ ಹೇಳಿದೆ.

‘ಕಾವೇರಿ ಕಣಿವೆಯ ನಾಲ್ಕು ಜಲಾಶಯಗಳಲ್ಲಿ ಈ ವರ್ಷ ಒಳಹರಿವು ಶೇ 52.50ರಷ್ಟು ಕಡಿಮೆಯಾಗಿದೆ. ಮೆಟ್ಟೂರು ಹಾಗೂ ಭವಾನಿ ಸಾಗರ ಜಲಾಶಯಗಳಲ್ಲಿ ಪ್ರಸ್ತುತ 50.8 ಟಿಎಂಸಿ ಅಡಿಯಷ್ಟು ನೀರಿದೆ. ಜತೆಗೆ, ಹಿಂಗಾರಿನಲ್ಲಿ ತಮಿಳುನಾಡಿನಲ್ಲಿ ಉತ್ತಮ ಮಳೆಯಾಗಿದೆ. ಕೃಷಿ, ಕುಡಿಯುವ ನೀರಿನ ಬೇಡಿಕೆ ಪೂರೈಸಲು ಈ ನೀರು ಸಾಕು. ಹೀಗಾಗಿ, ಈ ವರ್ಷದ ಉಳಿದ ದಿನಗಳಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವಂತೆ ಸಮಿತಿ ಶಿಫಾರಸು ಮಾಡಬಾರದು’ ಎಂದು ಕರ್ನಾಟಕ ಸರ್ಕಾರ ಕೋರಿತು.

ಕರ್ನಾಟಕವು ಜನವರಿ 19ರಿಂದ ಮೇ ಅಂತ್ಯದವರೆಗೆ 19 ಟಿಎಂಸಿ ಅಡಿ ನೀರು ಬಿಡುಗಡೆ ಮಾಡಬೇಕು ಎಂದು ತಮಿಳುನಾಡು ಸರ್ಕಾರ ಒತ್ತಾಯಿಸಿತು.

ಹಾಸನ; ಕಾಂಗ್ರೆಸ್ ಅಭ್ಯರ್ಥಿಯಾಗಿ ಗೌಡರ ಹೆಸರು ಸೂಚಿಸಿದ ಆಕಾಂಕ್ಷಿ ಬಿ.ಶಿವರಾಂ

ಶಿವಲಿಂಗೇಗೌಡ ಹೆಸರು ಮುಂಚೂಣಿಗೆ

• ಚಿದಂಬರಪ್ರಸಾದ


ಹಾಸನ: ಅರಸೀಕೆರೆ ಶಾಸಕ ಕೆ.ಎಂ. ಶಿವಲಿಂಗೇಗೌಡರ ಹೆಸರನ್ನು ಲೋಕಸಭೆ ಚುನಾವಣೆಗೆ ಸೂಚಿಸುವ ಮೂಲಕ ಅವರನ್ನೇ ಅಭ್ಯರ್ಥಿಯನ್ನಾಗಿಸಲು ಕಾಂಗ್ರೆಸ್‌ನ ಒಂದು ಗುಂಪು ಪ್ರಯತ್ನಿಸುತ್ತಿದೆ. ಟಿಕೆಟ್ ಆಕಾಂಕ್ಷಿಯಾಗಿರುವ, ಮಾಜಿ ಸಚಿವ ಬಿ.ಶಿವರಾಂ ಅವರೇ ಇದನ್ನು ಬಹಿರಂಗಪಡಿಸಿದ್ದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

‘ಅಭಿವೃದ್ಧಿ ಕಾಮಗಾರಿಗಳು ಆ ಕ್ಷೇತ್ರಕ್ಕಷ್ಟೇ ಸೀಮಿತವಾಗಿವೆ. ಇನ್ನೊಂದೆಡೆ ನಿಗಮ–ಮಂಡಳಿಯ ನೇಮಕಾತಿಯಲ್ಲೂ ಶಿವಲಿಂಗೇಗೌಡರ ಹೆಸರೇ ಪ್ರಮುಖವಾಗಿ ಕೇಳಿ ಬರುತ್ತಿದೆ. ಹೀಗಾದರೆ, ನಮ್ಮ ಕ್ಷೇತ್ರದ ಜನ, ಕಾರ್ಯಕರ್ತರಿಗೆ ಏನೆಂದು ಉತ್ತರಿಸಬೇಕು ಎಂದು ಮುಖಂಡರು ಕೇಳುತ್ತಿದ್ದಾರೆ. ಅವರನ್ನೇ ಅಭ್ಯರ್ಥಿಯನ್ನಾಗಿಸಿ ಗೆಲ್ಲಿಸಿ’ ಎಂದೂ ಪ್ರತಿಪಾದಿಸುತ್ತಿದ್ದಾರೆ.

‘ಜಿಲ್ಲೆಯಲ್ಲಿ ಬಹಳಷ್ಟು ನಿಷ್ಠಾವಂತ ಕಾರ್ಯಕರ್ತರಿದ್ದರೂ ಮೂಲೆ ಗುಂಪಾಗಿದ್ದಾರೆ. ಅಧಿಕಾರವಿಲ್ಲದಿದ್ದಾಗ ಮಾತ್ರ ನಮ್ಮನ್ನು ಬಳಸಿಕೊಳ್ಳುತ್ತಾರೆ. ಅಧಿಕಾರ ಬಂದಾಗ ಬಿಡುತ್ತಾರೆ. 40 ವರ್ಷದ ರಾಜಕೀಯದಲ್ಲಿ ನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಮೂಲೆ ಗುಂಪಾಗುತ್ತಿದ್ದೇನೆ ಎಂದು ನನಗೂ ಅನಿಸುತ್ತಿದೆ’ ಎಂದು ಬಿ.ಶಿವರಾಂ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಏನೇ ಇದ್ದರೂ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಲೇಬೇಕು. ಯಾರು ಸಮರ್ಥ ಅಭ್ಯರ್ಥಿಯೆಂಬ ಪ್ರಶ್ನೆ ನಮ್ಮಲ್ಲಿದೆ. ಜನಾಭಿಪ್ರಾಯ ಸಂಗ್ರಹಿಸಿದ್ದೇವೆ. ಇಡೀ ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಕೆ.ಎಂ. ಶಿವಲಿಂಗೇಗೌಡರೇ ಸಮರ್ಥರೆಂಬ ಅಭಿಪ್ರಾಯ ಬಂದಿದೆ’ ಎಂದಿದ್ದಾರೆ.

‘ಬಿ.ಶಿವರಾಂ ಅವರೊಂದಿಗೆ, ಪ್ರಮುಖ ಆಕಾಂಕ್ಷಿಗಳಾದ ಶ್ರೇಯಸ್ ಪಟೇಲ್, ಎಂ.ಎ. ಗೋಪಾಲಸ್ವಾಮಿ, ಬಾಗೂರು ಮಂಜೇಗೌಡ ಅವರು, ಮುಂಚಿತವಾಗಿಯೇ ಅಭ್ಯರ್ಥಿಯನ್ನು ಘೋಷಿಸಬೇಕೆಂದು ಆಗ್ರಹಿಸುತ್ತಿದ್ದಾರೆ. ಅಭ್ಯರ್ಥಿಯ ಘೋಷಣೆಯಾಗದಿರುವುದರಿಂದ ಸ್ಪರ್ಧಿಸಲು ಹಿಂದೇಟು ಹಾಕುತ್ತಿದ್ದಾರೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ.



ಚುನಾವಣೆ ಸಂದರ್ಭದಲ್ಲಿ ಗೊಂದಲ ಮೂಡಿಸುವುದು ಬೇಡ. ಹೈಕಮಾಂಡ್ ಅನ್ನು ಒಪ್ಪಿಸಿ ಟಿಕೆಟ್ ತಂದರೆ ನಾನೇ ಬಿ. ಶಿವರಾಂ ಪರವಾಗಿ ಪ್ರಚಾರ ಮಾಡುವೆ

ಕೆ.ಎಂ. ಶಿವಲಿಂಗೇಗೌಡ, ಶಾಸಕ



ಜೆಡಿಎಸ್-ಬಿಜೆಪಿ ಒಂದಾಗಿದ್ದು, ಆ ಕುಟುಂಬದ ವಿರುದ್ಧ ಸೆಣಸಬಲ್ಲ ಸಮರ್ಥ ಅಭ್ಯರ್ಥಿ ಎಂದರೆ ಕೆ.ಎಂ. ಶಿವಲಿಂಗೇಗೌಡರು ಮಾತ್ರ. ಇದು ಜನಾಭಿಪ್ರಾಯವೂ ಹೌದು

ಬಿ. ಶಿವರಾಂ, ಮಾಜಿ ಸಚಿವ

ಅರಸೀಕೆರೆ ಕ್ಷೇತ್ರದ ಮೇಲೆ ಕಣ್ಣು

‘ತಡವಾಗಿ ಟಿಕೆಟ್ ಘೋಷಿಸಿದರೆ ಗೆಲ್ಲುವುದು ಸುಲಭವಲ್ಲ. ಹೀಗಾಗಿ ಶಿವಲಿಂಗೇಗೌಡರನ್ನು ಲೋಕಸಭೆಗೆ ಕಳುಹಿಸಬೇಕು. ತೆರವಾಗುವ ಅರಸೀಕೆರೆ ಕ್ಷೇತ್ರದಲ್ಲಿ ಬಿ.ಶಿವರಾಂ ಅವರನ್ನು ಕಣಕ್ಕಿಳಿಸಿ ಗೆಲ್ಲಿಸಬೇಕು’ ಎಂಬುದು ಶಿವರಾಂ ಬೆಂಬಲಿಗರ ಲೆಕ್ಕಾಚಾರ.

‘ಶಿವಲಿಂಗೇಗೌಡರು ನಿಗಮ–ಮಂಡಳಿ ಅಧ್ಯಕ್ಷ ಸ್ಥಾನದ ನಿರೀಕ್ಷೆಯಲ್ಲಿದ್ದಾರೆ. ಅವರನ್ನೇ ಅಭ್ಯರ್ಥಿಯನ್ನಾಗಿಸಿದರೆ ಜಿಲ್ಲೆಯ ಮತ್ತೊಬ್ಬ ಮುಖಂಡರಿಗೆ ನಿಗಮ–ಮಂಡಳಿಯಲ್ಲಿ ಸ್ಥಾನ ಸಿಗುತ್ತದೆ. ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆದಂತಾಗುತ್ತದೆ’ ಎಂಬುದು ಕಾಂಗ್ರೆಸ್‌ನ ಕೆಲ ಮುಖಂಡರ ಆಲೋಚನೆ.

‘ಎಲ್ಲೋ ಕುಳಿತು ಅಭ್ಯರ್ಥಿ ಘೋಷಿಸಿದರೆ ಗೆಲ್ಲಲಾಗದು’

ಹಾಸನ: ‘ಜಿಲ್ಲೆಯಲ್ಲಿರುವ ಉಸ್ತುವಾರಿ, ವೀಕ್ಷಕರು ಲೋಕಸಭೆ ಚುನಾವಣೆ ಅಭ್ಯರ್ಥಿ ಆಯ್ಕೆ ಸಂಬಂಧ ಯಾವ ತಾಲ್ಲೂಕಿಗೂ ಭೇಟಿ ನೀಡಿಲ್ಲ. ಎಲ್ಲೋ ಕುಳಿತು ಅಭ್ಯರ್ಥಿ ಘೋಷಿಸಿದರೆ ಗೆಲ್ಲುವುದು ಸುಲಭವಲ್ಲ’ ಎಂದು ಮಾಜಿ ಸಚಿವ ಬಿ. ಶಿವರಾಂ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನೀತಿ ಗೆಟ್ಟು ಕಾಂಗ್ರೆಸ್‌ಗೆ ಬರುವವರು ಇಂದು ಹೆಚ್ಚಾಗಿದ್ದಾರೆ. ನಿಷ್ಠಾವಂತರಿಗೆ ಮನ್ನಣೆ ಇಲ್ಲದಂತಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಚಿಕ್ಕಮಗಳೂರು ಜಿಲ್ಲೆಯಲ್ಲಿ ತಮ್ಮಯ್ಯ ಎಂಬುವರಿಗೆ ಟಿಕೆಟ್ ನೀಡಿದ್ದರಿಂದ ಅಲ್ಲಿ ಎಲ್ಲ ಸ್ಥಾನಗಳಲ್ಲೂ ಗೆಲ್ಲುವಂತಾಯಿತು. ಹಾಸನ ಜಿಲ್ಲೆಯಲ್ಲಿ ಲಿಂಗಾಯತ ಸಮುದಾಯವನ್ನು ಕಡೆಗಣಿಸಿದ್ದರಿಂದ ಅರಸೀಕೆರೆ ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿ ಸೋಲಬೇಕಾಯಿತು’ ಎಂದರು.

‘ಅರಸೀಕೆರೆ ಕ್ಷೇತ್ರದಿಂದ ಲಿಂಗಾಯತ ಸಮುದಾಯದ ಶಶಿಧರ್ ಆಕಾಂಕ್ಷಿ ಆಗಿದ್ದರು. ಶಿವಲಿಂಗೇಗೌಡರಿಗೆ ಟಿಕೆಟ್ ನೀಡುವ ಸಂದರ್ಭದಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು, ನಿಗಮ, ಮಂಡಳಿಯಲ್ಲಿ ಅವಕಾಶ ನೀಡುವುದಾಗಿ ಶಶಿಧರ್ ಅವರಿಗೆ ಭರವಸೆ ನೀಡಿದ್ದರು. ಅದರಂತೆ ನಡೆದುಕೊಳ್ಳಲಿ. ಶಿವಲಿಂಗೇ ಗೌಡರಿಗೆ ಸ್ಥಾನ ಕೊಡುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯ’ ಎನ್ನುವ ಮೂಲಕ ಶಿವಲಿಂಗೇಗೌಡರ ನೇಮಕಕ್ಕೆ ಪರೋಕ್ಷವಾಗಿ ವಿರೋಧ ವ್ಯಕ್ತಪಡಿಸಿದರು.

‘ಜಿಲ್ಲೆಯ ಏಕೈಕ ಕಾಂಗ್ರೆಸ್ ಶಾಸಕ ಶಿವಲಿಂಗೇಗೌಡ ಅರಸೀಕೆರೆ ಬಿಟ್ಟು ಬೇರೆ ಎಲ್ಲಿಗೆ ಹೋಗಿದ್ದಾರೆ? ಹೀಗಿರುವಾಗ ಅಧ್ಯಕ್ಷರಾಗಬೇಕು, ಮಂತ್ರಿಯಾಗಬೇಕೆಂದರೆ ಹೇಗೆ? ಶಿವಲಿಂಗೇಗೌಡರು ಕಾಂಗ್ರೆಸ್‌ಗೆ ಬಂದು ಎಂಟು ತಿಂಗಳಾಯಿತು. ನಾನು 47 ವರ್ಷಗಳಿಂದ ಇದ್ದೇನೆ. ಬೇರೆಯವರಂತೆ ವಲಸೆ ಹೋಗಿಲ್ಲ’ ಎಂದರು.

‘ಕೈ’ ಟಿಕೆಟ್‌ಗೆ ಕಾತರಕಿ ಲಾಬಿ

ನವದೆಹಲಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಮೋಹನ್ ಕಾತರಕಿ ಲಾಬಿ ನಡೆಸಿದ್ದಾರೆ. ತಮ್ಮನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಮಾಡುವಂತೆ ಕೋರಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ಪತ್ರ ಬರೆದಿದ್ದಾರೆ.

34 ವರ್ಷಗಳಿಂದ ಸುಪ್ರೀಂ ಕೋರ್ಟ್‌ನ ವಕೀಲರಾಗಿರುವ ಅವರು, ಕಾವೇರಿ, ಕೃಷ್ಣಾ ಹಾಗೂ ಮಹದಾಯಿ ಜಲವಿವಾದಗಳಲ್ಲಿ ರಾಜ್ಯದ ಪರವಾಗಿ ವಾದ ಮಂಡಿಸಿದ್ದಾರೆ.

‘ನಾನು 1985ರಿಂದಲೂ ಕಾಂಗ್ರೆಸ್ ಪಕ್ಷದ ಜತೆಗೆ ನಂಟು ಹೊಂದಿದ್ದು, ನನ್ನನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಗೆಲುವಿನ ಸಾಧ್ಯತೆ ಹೆಚ್ಚು. ಪಕ್ಷದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಲು ಸಿದ್ಧ’ ಎಂದು ಅವರು ಹೇಳಿದ್ದಾರೆ.

ಚುನಾವಣಾ ಸಮಿತಿ ಸಭೆ ಇಂದು

ಬೆಂಗಳೂರು: ಮುಂಬರುವ ಲೋಕಸಭೆ ಚುನಾವಣೆಗೆ ಸಿದ್ಧತೆ, ಕಾರ್ಯತಂತ್ರ, ಸಚಿವರ ಸ್ಪರ್ಧೆ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಮತ್ತಿತರ ವಿಷಯಗಳ ಕುರಿತು ಚರ್ಚಿಸಲು ಕೆಪಿಸಿಸಿ ಚುನಾವಣಾ ಸಮಿತಿಯ ಮಹತ್ವದ ಸಭೆ ಶುಕ್ರವಾರ (ಜ. 19) ನಡೆಯಲಿದೆ.

ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯ ಇಂದಿರಾ ಗಾಂಧಿ ಭವನದಲ್ಲಿ ಸಂಜೆ 4.30ಕ್ಕೆ ನಡೆಯಲಿರುವ ಈ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಸ್ಕ್ರೀನಿಂಗ್ ಕಮಿಟಿ ಅಧ್ಯಕ್ಷ ಹರೀಶ್ ಚೌಧರಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಮಿತಿಯ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧರಾಗುವಂತೆ ದೆಹಲಿಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಕೆಲವು ಸಚಿವರಿಗೆ ಕಾಂಗ್ರೆಸ್ ವರಿಷ್ಠರು ಪರೋಕ್ಷವಾಗಿ ಸೂಚನೆ ನೀಡಿದ್ದಾರೆ ಎಂದು ಗೊತ್ತಾಗಿದೆ. ಆದರೆ, ಸ್ಪರ್ಧಿಸಲು ಸಚಿವರು ಉತ್ಸುಕರಾಗಿಲ್ಲ ಎನ್ನಲಾಗಿದೆ. ಸಚಿವರ ಸ್ಪರ್ಧೆಯ ಕುರಿತ ಗೊಂದಲಕ್ಕೆ ಈ ಸಭೆಯಲ್ಲಿ ತೆರೆ ಬೀಳುವ ಸಾಧ್ಯತೆಯಿದೆ.

‘ಬಿಜೆಪಿ– ಜೆಡಿಎಸ್ ಮೈತ್ರಿಯಿಂದಾಗಿ ಸುಲಭ ಗೆಲುವಿನ ನಿರೀಕ್ಷೆಯಲ್ಲಿದ್ದ ಕೆಲವು ಕ್ಷೇತ್ರಗಳಲ್ಲಿ ತೀವ್ರ ಪೈಪೋಟಿ ಎದುರಾಗಬಹುದು. ಮೈತ್ರಿಕೂಟದ ಅಭ್ಯರ್ಥಿಯನ್ನು ಎದುರಿಸಲು ಸಚಿವರನ್ನು ಕಣಕ್ಕಿಸುವುದು ಸೂಕ್ತ ಎಂಬ ಚರ್ಚೆ ಕಾಂಗ್ರೆಸ್ ವಲಯದಲ್ಲಿದೆ. ಎಲ್ಲ ಸಚಿವರಿಗೆ ಈಗಾಗಲೇ ಕ್ಷೇತ್ರಗಳ ಹೊಣೆಗಾರಿಕೆ ಹಂಚಿಕೆ ಮಾಡಲಾಗಿದೆ. ಅಲ್ಲದೆ, ಜಿಲ್ಲಾ ಉಸ್ತುವಾರಿ ಸಚಿವರು ಆಯಾ ಕ್ಷೇತ್ರಗಳ ಮುಖಂಡರ ಜೊತೆ ಚರ್ಚಿಸಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಕೆಪಿಸಿಸಿಗೆ ನೀಡಿದ್ದಾರೆ. ಈ ಪಟ್ಟಿಯ ಬಗ್ಗೆ ಚರ್ಚಿಸಿ, ಅಭ್ಯರ್ಥಿ ಆಯ್ಕೆ ನಿಟ್ಟಿನಲ್ಲಿ ರಾಜ್ಯದ ನಾಯಕರು ಒಂದು ಹಂತದ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳುವ ಸಾಧ್ಯತೆ ಇದೆ. ಪಟ್ಟಿಯಲ್ಲಿರುವ ಹೆಸರುಗಳು ಮತ್ತು ಗೆಲ್ಲುವ ಕಲಿಗಳನ್ನು ಗುರುತಿಸುವ ಬಗ್ಗೆಯೂ ನಾಯಕರು ವಿಚಾರ ವಿನಿಮಯ ನಡೆಸಲಿದ್ದಾರೆ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಪ್ರಭಾಕರ ಭಟ್ ಪರ ವಕಾಲತ್ತು: ವಕೀಲ ಕಾಂಗ್ರೆಸ್‌ನಿಂದ ವಜಾ

ಮಂಡ್ಯ: ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಪರ ವಕಾಲತ್ತು ವಹಿಸಿ ಅವರಿಗೆ ನಿರೀಕ್ಷಣಾ ಜಾಮೀನು ಕೊಡಿಸಿದ ಕಾರಣಕ್ಕೆ ವಕೀಲ ಡಿ.ಚಂದ್ರೇಗೌಡ ಅವರನ್ನು ಶ್ರೀರಂಗಪಟ್ಟಣ ತಾಲ್ಲೂಕು ಕಾಂಗ್ರೆಸ್ ಕಾನೂನು ಘಟಕದ ಅಧ್ಯಕ್ಷ ಸ್ಥಾನದಿಂದ ಗುರುವಾರ ವಜಾಗೊಳಿಸಲಾಗಿದೆ.

ಹನುಮಾನ್ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆ ಸಂದರ್ಭದಲ್ಲಿ ವಿವಾದಾತ್ಮಕ ಹೇಳಿಕೆ ನೀಡಿದ್ದ ಭಟ್ ಅವರ ವಿರುದ್ಧ ದೂರು ದಾಖಲಾಗಿತ್ತು. ಅವರ ಪರವಾಗಿ ನ್ಯಾಯಾಲಯದಲ್ಲಿ ವಕಾಲತ್ತು ವಹಿಸಿದ್ದ ಚಂದ್ರೇಗೌಡ ನಿರೀಕ್ಷಣಾ ಜಾಮೀನು ಮಂಜೂರು ಮಾಡಿಸಿದ್ದರು.

‘ಮುಸ್ಲಿಂ ಮಹಿಳೆ ವಿರುದ್ಧ ಪ್ರಚೋದನಾಕಾರಿಯಾಗಿ ಮಾತನಾಡಿರುವ ವ್ಯಕ್ತಿ ಪರವಾಗಿ ವಕಾಲತ್ತು ವಹಿಸಿರುವುದು ಕಾನೂನು ಘಟಕದ ನಿಂಬಂಧನೆಗಳಿಗೆ ವಿರುದ್ಧವಾಗಿದೆ. ಹೀಗಾಗಿ ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಲಾಗಿದೆ’ ಎಂದು ಕಾನೂನು ವಿಭಾಗ ಜಿಲ್ಲಾ ಘಟಕದ ಅಧ್ಯಕ್ಷ ಎ.ಎಸ್. ಗೌರಿಶಂಕರ್ ತಿಳಿಸಿದ್ದಾರೆ.

ಸಿ.ಎಂ ಉದ್ಧಟತನ: ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಕುರಿತು ಪ್ರಧಾನಿ ಮೋದಿ ಅವರನ್ನು ಚರ್ಚೆಗೆ ಕರೆದಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉದ್ಧಟತನದ ಪರಮಾವಧಿಗೆ ಸಾಕ್ಷಿ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು.



ಕುಮಾರಸ್ವಾಮಿ

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಕರ್ನಾಟಕದ ಕಾಂಗ್ರೆಸ್ ನೇತೃತ್ವದ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ನಡುವೆ ವಿಶ್ವಾಸದ ಕೊರತೆ ಎದ್ದು ಕಾಣುತ್ತಿದೆ. ರಾಜ್ಯ ಸರ್ಕಾರ ಪ್ರತಿಯೊಂದಕ್ಕೂ ಕೇಂದ್ರ ಮತ್ತು ಪ್ರಧಾನಿ ಅವರನ್ನು ದೂರುವ ಪರಿಪಾಟ ಬೆಳೆಸಿಕೊಂಡಿದೆ. ಇದು ಸರಿಯಲ್ಲ. ಕಾಂಗ್ರೆಸ್ ಸರ್ಕಾರವು ತನ್ನ ಆಡಳಿತ ವೈಫಲ್ಯ, ಗ್ಯಾರಂಟಿಗಳ ವೈಫಲ್ಯ, ಬರಗಾಲ ಮತ್ತು ರೈತರ ಸಂಕಷ್ಟದ ಬಗ್ಗೆ ಜನರ ಗಮನವನ್ನು ಬೇರೆಡೆಗೆ ಹೊರಳಿಸುವ ಉದ್ದೇಶದಿಂದ ಮೋದಿ ಅವರ ಮೇಲೆ ನಿರಂತರವಾಗಿ ವಾಗ್ದಾಳಿ ನಡೆಸುತ್ತಿದೆ’ ಎಂದು ದೂರಿದರು.

‘ಲೋಪ ಆಗಿರುವ ಕಡೆ ಗಮನಹರಿಸಿ ಸರಿ ಮಾಡಿಕೊಳ್ಳಬೇಕು. ಮುಖ್ಯಮಂತ್ರಿಯವರು ದೆಹಲಿಗೆ ಬಂದು ಪ್ರಧಾನಿ ಹಾಗೂ ಸಂಬಂಧಪಟ್ಟ ಸಚಿವರ ಜತೆಗೆ ಚರ್ಚೆ ಮಾಡಬೇಕು. ಪ್ರಧಾನಿ ಅವರನ್ನು ಚರ್ಚೆಗೆ ಕರೆಯುವ ಮುನ್ನ ತಮ್ಮಿಂದ ಆಗಿರುವ ಲೋಪಗಳನ್ನು ಸರಿಪಡಿಸಿಕೊಳ್ಳುವ ಸೌಜನ್ಯವನ್ನು ಮುಖ್ಯಮಂತ್ರಿ ತೋರಿಸಬೇಕಿದೆ. ಸತತ 40 ವರ್ಷ ಆಡಳಿತ ನಡೆಸಿದ್ದ ಕಾಂಗ್ರೆಸ್ ಸರ್ಕಾರ ರಾಜ್ಯದ ನೀರಾವರಿಗೆ ಏನಾದರೂ ಕೊಡುಗೆ ನೀಡಿದೆಯಾ’ ಎಂದು ಅವರು ಪ್ರಶ್ನಿಸಿದರು.

‘ಕೇಂದ್ರದ ಜತೆ ಸಂಘರ್ಷ ಸರಿ ಅಲ್ಲ. ಇಂತಹ ಸಂಘರ್ಷದಿಂದ ಉಪಯೋಗವೂ ಇಲ್ಲ’ ಎಂದರು.

‘ಒಡಿಶಾದಲ್ಲಿ ನವೀನ್ ಪಟ್ನಾಯಕ್ ಅವರು ಐದು ಅವಧಿಗಳಿಂದ ಸರ್ಕಾರ ನಡೆಸುತ್ತಿದ್ದಾರೆ. ಆ ರಾಜ್ಯದಲ್ಲಿ ನಮ್ಮ ರಾಜ್ಯಕ್ಕಿಂತ ಹೆಚ್ಚು ಬಡತನ ಇದೆ. ಕೇಂದ್ರದ ಜತೆಗೆ ಪಟ್ನಾಯಕ್ ಯಾವತ್ತೂ ಸಂಘರ್ಷಕ್ಕೆ ಇಳಿದಿಲ್ಲ. ಕೇಂದ್ರದ ಜತೆಗೆ ಸೌಹಾರ್ದಯುತವಾಗಿ ಇದ್ದು ಕೇಂದ್ರದ ನೆರವು ಪಡೆಯುತ್ತಿದ್ದಾರೆ. ಆದರೆ, ಸಿದ್ದರಾಮಯ್ಯ ರಾಜಕೀಯ ಕಾರಣಕ್ಕೆ ಮೋದಿ ಅವರನ್ನು ಟೀಕಿಸುತ್ತಿದ್ದಾರೆ’ ಎಂದು ದೂರಿದರು.

ಏಕವಚನ ಬಳಕೆ ಸರಿಯಲ್ಲ: ‘ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಅವರು ಸಿದ್ದರಾಮಯ್ಯ ಅವರನ್ನು ಏಕವಚನದಲ್ಲಿ ಟೀಕೆ ಮಾಡಿರುವುದು ಸರಿಯಲ್ಲ’ ಎಂದೂ ಅವರು ಹೇಳಿದರು.

ಐದು ಸ್ಥಾನ ಕೇಳಿದ ಜೆಡಿಎಸ್; ಮೂರು ಸ್ಥಾನ ಬಿಟ್ಟುಕೊಡಲು ಒಪ್ಪಿದ ಬಿಜೆಪಿ

ಸೀಟು ಹಂಚಿಕೆ: ಮತ್ತೆ ಮಾತುಕತೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಕರ್ನಾಟಕದಲ್ಲಿ ಕನಿಷ್ಠ ನಾಲ್ಕರಿಂದ ಐದು ಕ್ಷೇತ್ರಗಳನ್ನು ಪಕ್ಷಕ್ಕೆ ಬಿಟ್ಟುಕೊಡಬೇಕು ಎಂದು ಜೆಡಿಎಸ್ ನಾಯಕರು ಬಿಜೆಪಿ ವರಿಷ್ಠರ ಮೇಲೆ ಒತ್ತಡ ಹೇರಿದ್ದಾರೆ. ಜೆಡಿಎಸ್‌ಗೆ ಗರಿಷ್ಠ ಮೂರು ಕ್ಷೇತ್ರಗಳನ್ನು ಬಿಡಲು ಬಿಜೆಪಿ ವರಿಷ್ಠರು ಒಲವು ತೋರಿದ್ದಾರೆ.

ಲೋಕಸಭಾ ಚುನಾವಣೆಯ ಸೀಟು ಹಂಚಿಕೆಯ ಸಂಬಂಧ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಬುಧವಾರ ರಾತ್ರಿ ಸುದೀರ್ಘವಾಗಿ ಸಮಾಲೋಚನೆ ನಡೆಸಿದರು. ಈ ತಿಂಗಳ ಅಂತ್ಯದೊಳಗೆ ಸೀಟು ಹಂಚಿಕೆ ಪ್ರಕ್ರಿಯೆ ಪೂರ್ಣಗೊಳಿಸುವ ಬಗ್ಗೆಯೂ ಚರ್ಚೆಗಳು ನಡೆದಿವೆ. ಜನವರಿ 22ರ ನಂತರ ಕುಮಾರಸ್ವಾಮಿ ಅವರು ಬಿಜೆಪಿ ವರಿಷ್ಠರೊಂದಿಗೆ ಮತ್ತೊಂದು ಸುತ್ತಿನ ಮಾತುಕತೆ ನಡೆಸಲಿದ್ದಾರೆ.

ಹಾಸನ, ಮಂಡ್ಯ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ಜೆಡಿಎಸ್ ನಾಯಕರು ಉತ್ಸುಕರಾಗಿದ್ದಾರೆ. ಈ ವಿಷಯವನ್ನು ಶಾ ಬಳಿ ಕುಮಾರಸ್ವಾಮಿ ಪ್ರಸ್ತಾಪಿಸಿದ್ದಾರೆ. ಹಾಸನ, ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಸಿದ್ಧ ಎಂದು ಬಿಜೆಪಿ ನಾಯಕರು ಹೇಳಿದ್ದಾರೆ.

ಜೆಡಿಎಸ್ ಪಕ್ಷವು ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿದ ಬೆನ್ನಲ್ಲೇ ಕುಮಾರಸ್ವಾಮಿ ಅವರು ಬಿಜೆಪಿಯ ಸಿ.ಪಿ.ಯೋಗೇಶ್ವರ ಜತೆಗೆ ಮಾತುಕತೆ ನಡೆಸಿದ್ದರು. ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಕಣಕ್ಕೆ ಇಳಿಯುವಂತೆ ಹಾಗೂ ಅದಕ್ಕೆ ಈಗಿನಿಂದಲೇ ಸಿದ್ಧತೆ ಆರಂಭಿಸುವಂತೆ ಯೋಗೇಶ್ವರ ಅವರಿಗೆ ಸಲಹೆ ನೀಡಿದ್ದರು. ಯೋಗೇಶ್ವರ ಸಿದ್ಧತೆಗಳನ್ನು ಆರಂಭಿಸಿದ್ದರು. ಬಿಜೆಪಿ ನಡೆಸಿರುವ ಎರಡು ಸಮೀಕ್ಷೆಗಳ ಪ್ರಕಾರ, ಯೋಗೇಶ್ವರ ಅಭ್ಯರ್ಥಿ ಆದರೆ ಪಕ್ಷಕ್ಕೆ ಗೆಲುವು ಕಷ್ಟ ಎಂದಿದೆ. ಈ ಬಗ್ಗೆಯೂ ಉಭಯ ಪಕ್ಷಗಳ ನಾಯಕರು ಚರ್ಚಿಸಿದ್ದಾರೆ.

‘ಬೆಂಗಳೂರು ಗ್ರಾಮಾಂತರದಿಂದ ಕುಮಾರಸ್ವಾಮಿ ಅವರೇ ಕಣಕ್ಕೆ ಇಳಿಯಬೇಕು. ಆಗ ಸಂಸದ ಡಿ.ಕೆ. ಸುರೇಶ್ ಅವರನ್ನು ಕಟ್ಟಿ ಹಾಕಬಹುದು’ ಎಂದು ಬಿಜೆಪಿಯ ವರಿಷ್ಠರು ಹೇಳಿದ್ದಾರೆ. ಈ ಪ್ರಸ್ತಾವಕ್ಕೆ ಕುಮಾರಸ್ವಾಮಿ ಒಪ್ಪಲಿಲ್ಲ. ಅವರು ಮಂಡ್ಯ ಕ್ಷೇತ್ರದಿಂದ ಅಭ್ಯರ್ಥಿಯಾಗುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ತಿಳಿಸಿವೆ.

‘ಬಿಜೆಪಿ ರಾಜ್ಯ ಘಟಕದಲ್ಲಿ ಹಲವು ಗುಂಪುಗಳಿವೆ. ಪಕ್ಷದ ನಾಯಕರ ವಿರುದ್ಧವೇ ಕೆಲವು ನಾಯಕರು ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ. ಭಿನ್ನಮತಕ್ಕೆ ಕೂಡಲೇ ಕಡಿವಾಣ ಹಾಕಬೇಕು. ಇಲ್ಲದಿದ್ದರೆ 28 ಕ್ಷೇತ್ರಗಳಲ್ಲೂ ಗೆಲುವು ಕಷ್ಟ’ ಎಂದು ಕುಮಾರಸ್ವಾಮಿ ಅವರು ಶಾ ಗಮನಕ್ಕೆ ತಂದರು. ‘ಅಸಮಾಧಾನಗೊಂಡ ನಾಯಕರನ್ನು ಕರೆಸಿ ಮಾತುಕತೆ ನಡೆಸಲಾಗುತ್ತಿದೆ. ಶೀಘ್ರದಲ್ಲಿ ಎಲ್ಲವೂ ಪರಿಹಾರ ಆಗಲಿದೆ’ ಎಂದು ಶಾ ಭರವಸೆ ನೀಡಿದರು ಎಂದು ಗೊತ್ತಾಗಿದೆ.

‘ವಿಧಾನಸಭಾ ಚುನಾವಣೆಯಲ್ಲಿ ಕನಿಷ್ಠ 15 ಕ್ಷೇತ್ರಗಳಲ್ಲಿ ಜೆಡಿಎಸ್ ಹಾಗೂ ಬಿಜೆಪಿ ನಡುವೆ ಪೈಪೋಟಿ ನಡೆದಿತ್ತು. ಮೈತ್ರಿಗೆ ಈ ಕ್ಷೇತ್ರಗಳ ಸ್ಥಳೀಯ ನಾಯಕರ ವಿರೋಧ ಇದೆ. ಈ ಅಸಮಾಧಾನವನ್ನು ಶೀಘ್ರ ಶಮನ ಮಾಡಬೇಕು. ಇದಕ್ಕಾಗಿ ಎರಡೂ ಪಕ್ಷಗಳ ಉನ್ನತ ನಾಯಕರು ಕಾರ್ಯೋನ್ಮುಖರಾಗಬೇಕು. ಇಲ್ಲದಿದ್ದರೆ, ಪಕ್ಷಕ್ಕೆ ಚುನಾವಣೆಯಲ್ಲಿ ಹಿನ್ನಡೆಯಾಗುವ ಸಾಧ್ಯತೆ ಇದೆ’ ಎಂಬ ಬಗ್ಗೆಯೂ ಚರ್ಚೆಗಳು ನಡೆದಿವೆ. ಬಿಜೆಪಿ–ಜೆಡಿಎಸ್ ನಡುವಿನ ಸಮನ್ವಯಕ್ಕೆ ರಾಷ್ಟ್ರೀಯ ನಾಯಕರೊಬ್ಬರನ್ನು ನಿಯೋಜಿಸಬೇಕು ಎಂದು ಕುಮಾರಸ್ವಾಮಿ ಸಲಹೆ ನೀಡಿದ್ದಾರೆ. ಇದಕ್ಕೆ ನಡ್ಡಾ ಹಾಗೂ ಶಾ ಒಪ್ಪಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಸ್ಪರ್ಧೆಗೆ ಒತ್ತಡ ಇದೆ: ಎಚ್‌ಡಿಕೆ

‘ನಾನು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಬೇಕು ಎಂದು ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಒತ್ತಡ ಹೇರುತ್ತಿದ್ದಾರೆ. ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಮಂಡ್ಯದಿಂದ ಸ್ಪರ್ಧೆ ಮಾಡುವಂತೆ ಆಯಾ ಕ್ಷೇತ್ರದ ಕಾರ್ಯಕರ್ತರಿಂದ ಒತ್ತಡವಿದೆ. ನನ್ನ ಸ್ಪರ್ಧೆಯ ಬಗ್ಗೆ ಸೂಕ್ತ ನಿರ್ಣಯವನ್ನು ಎರಡೂ ಪಕ್ಷದ ನಾಯಕರು ಕುಳಿತು ತೀರ್ಮಾನ ಮಾಡುತ್ತಾರೆ’ ಎಂದು ಕುಮಾರಸ್ವಾಮಿ ತಿಳಿಸಿದರು.

‘ಸಮಾಲೋಚಿಸಿ ತೀರ್ಮಾನ’

‘ಅಯೋಧ್ಯೆಯಲ್ಲಿ ಶ್ರೀರಾಮ ದೇವರ ಪ್ರಾಣಪ್ರತಿಷ್ಠೆ ಕಾರ್ಯಕ್ರಮ ಮುಗಿದ ಮೇಲೆ ಕ್ಷೇತ್ರ ಹಂಚಿಕೆ ಮತ್ತಿತರ ಪ್ರಕ್ರಿಯೆಗಳನ್ನು ಪೂರ್ಣ ಮಾಡಲು ನಿರ್ಧರಿಸಲಾಗಿದೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ರಾಜ್ಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಅಮಿತ್ ಶಾ ಹಾಗೂ ಜೆ.ಪಿ. ನಡ್ಡಾ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಕ್ಷೇತ್ರಗಳ ಹಂಚಿಕೆಯ ಬಗ್ಗೆ ಎರಡೂ ಪಕ್ಷಗಳಲ್ಲಿ ಸೌಹಾರ್ದ ಭಾವನೆ ಇದೆ. ಯಾವುದೇ ಗೊಂದಲಗಳು ಇಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ರಾಜ್ಯದ ಸ್ಥಿತಿಗತಿ, ಕ್ಷೇತ್ರವಾರು ಪರಿಸ್ಥಿತಿಗಳ ಬಗ್ಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಬಳಿ ಸಮೀಕ್ಷಾ ವರದಿಗಳಿವೆ. ಅದೇ ರೀತಿ ನಾವೂ ವರದಿಗಳನ್ನು ಸಿದ್ಧ ಮಾಡಿದ್ದೇವೆ. ಎರಡೂ ಕಡೆಯ ಮಾಹಿತಿಗಳು ಹಾಗೂ ವರದಿಗಳ ಬಗ್ಗೆಯೂ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ’ ಎಂದರು.

‘ಜೆಡಿಎಸ್ ಹಾಗೂ ಬಿಜೆಪಿ ನಡುವಿನ ಮೈತ್ರಿ ಕರ್ನಾಟಕಕ್ಕೆ ಸೀಮಿತ’ ಎಂದೂ ಸ್ಪಷ್ಟಪಡಿಸಿದರು.

ಆದೇಶ ಉಲ್ಲಂಘಿಸಿ ಸಾಕ್ಷ್ಯಚಿತ್ರ ಪ್ರಸಾರ: ವಿಚಾರಣೆಗೆ ದಿನಾಂಕ ನಿಗದಿಪಡಿಸಿದ ಹೈಕೋರ್ಟ್

ಬಿಬಿಸಿ, ನೆಟ್‌ಫ್ಲಿಕ್ಸ್ ಮೇಲೆ ದೋಷಾರೋಪ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ನೀಡಿದ್ದ ಮಧ್ಯಂತರ ನಿರ್ಬಂಧಕ ಆದೇಶವನ್ನು ಲೆಕ್ಕಿಸದೆ, ಕರ್ನಾಟಕದ ಸಂಪದ್ಭರಿತ ಜೀವವೈವಿಧ್ಯವನ್ನು ಪ್ರಸ್ತುತ ಪಡಿಸುವ 52 ನಿಮಿಷಗಳ ಸಾಕ್ಷ್ಯಚಿತ್ರವನ್ನು ವಿವಿಧ ದೃಶ್ಯ ಮಾಧ್ಯಮಗಳ ಮೂಲಕ ಪ್ರಸಾರ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಕೆಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳ ಮೇಲೆ ನ್ಯಾಯಾಂಗ ನಿಂದನೆಯ ದೋಷಾರೋಪಣೆ ನಿಗದಿ ಪಡಿಸಿರುವ ಹೈಕೋರ್ಟ್, ಫೆಬ್ರುವರಿ 8ರಿಂದ ವಿಚಾರಣೆ ಕೈಗೆತ್ತಿಕೊಳ್ಳಲಿದೆ.

ಈ ಕುರಿತಂತೆ ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಸೋನಾರ್ ವಾಡ ನಿವಾಸಿಯಾದ ರವೀಂದ್ರ ಎನ್.ರೆಡ್‌ಕರ್ ಮತ್ತು ಬೆಂಗಳೂರಿನ ಆರ್.ಕೆ.ಉಲ್ಲಾಸ್ ಕುಮಾರ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ದೋಷಾರೋಪ ನಿಗದಿಪಡಿಸಿದ ನಂತರ ಫೆಬ್ರುವರಿ 8ರಿಂದ ವಿಚಾರಣೆ ಆರಂಭಿಸುವುದಾಗಿ ಆದೇಶಿಸಿತು.

ವಿಚಾರಣೆ ವೇಳೆ ಪ್ರಕರಣದ ಎಲ್ಲಾ ಆರೋಪಿಗಳು ಭೌತಿಕವಾಗಿ ಮತ್ತು ವಿದೇಶದಲ್ಲಿರುವ ವ್ಯಕ್ತಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಕಲಾಪದಲ್ಲಿ ಹಾಜರಾಗಿದ್ದರು.

ಆರೋಪಿಗಳಾದ ಬೆಂಗಳೂರಿನ ಶರತ್ ಚಂಪಾಟಿ, ಕಲ್ಯಾಣ ವರ್ಮಾ, ಜೆ.ಎಸ್. ಅಮೋಘವರ್ಷ, ಮೆಸರ್ಸ್ ವೈಲ್ಡ್ ಕರ್ನಾಟಕ ಸಂಸ್ಥೆ, ಮೆಸರ್ಸ್ ಮಡ್‌ಸ್ಕಿಪ್ಪರ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ನಿರ್ದೇಶಕ (ಜೆ.ಎಸ್. ಅಮೋಘವರ್ಷ), ಮೆಸರ್ಸ್ ಐಕಾನ್ ಫಿಲ್ಮ್ಸ್ ಲಿಮಿಟೆಡ್ ಕಂಪನಿಯ ಪ್ರತಿನಿಧಿ ಲಾರಾ ಮಾರ್ಷಲ್, ಮೆಸರ್ಸ್ ಐಟಿವಿ ಸ್ಟುಡಿಯೋಸ್ ಗ್ಲೋಬಲ್ ಡಿಸ್ಟ್ರಿಬ್ಯೂಷನ್ ಲಿಮಿಟೆಡ್ ಕಂಪನಿಯ ಪ್ರತಿನಿಧಿ ಭಾರ್ತಿ ಮಿತ್ತಲ್, ಮೆಸರ್ಸ್ ಡಿಸ್ಕವರಿ ಕಮ್ಯುನಿಕೇಷನ್ ಇಂಡಿಯಾದ ಮೇಘಾ ಅರಿಯೇಝ್ ಟಾಟಾ, ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಕಂಪನಿಯ ನವದೆಹಲಿ ಪ್ರತಿನಿಧಿ ನೀರಜ್ ನಿರಾಶ್ ಮತ್ತು ಮುಂಬೈನ ಮೆಸರ್ಸ್ ನೆಟ್‌ಫ್ಲಿಕ್ಸ್ ಎಂಟರ್‌ಟೈನ್‌ಮೆಂಟ್ ಸರ್ವೀಸಸ್ ಇಂಡಿಯಾ ಲಿಮಿಟೆಡ್ ಕಂಪನಿಯ ನಿರ್ದೇಶಕ ಕಿರಣ್ ಕುಮಾರ್ ದೇಸಾಯಿ ವಿರುದ್ಧ ನ್ಯಾಯಾಂಗ ನಿಂದನೆ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ದೋಷಾರೋಪ ನಿಗದಿಪಡಿಸಲಾಯಿತು.

ಅರ್ಜಿದಾರರ ಪರ ಹಿರಿಯ ವಕೀಲ ಬಿ.ಕೆ. ಸಂಪತ್ ಕುಮಾರ್ ವಾದ ಮಂಡಿಸಿದರು. ಸೂರಜ್ ಸಂಪತ್ ಪ್ರಕರಣದ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?: ‘ಸಾಕ್ಷ್ಯಚಿತ್ರದ ಭಾಗಗಳು ಅಥವಾ ಕಚ್ಚಾ ದೃಶ್ಯಗಳನ್ನು ಪ್ರಸಾರ ಮಾಡಬಾರದು’ ಎಂದು ಹೈಕೋರ್ಟ್ 2021ರ ಜೂನ್ 29ರಂದು ಮಧ್ಯಂತರ ಆದೇಶ ನೀಡಿತ್ತು. ‘ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ನೀಡಿದ್ದ ಈ ಮಧ್ಯಂತರ ಆದೇಶದ ಹೊರತಾಗಿಯೂ, ಆರೋಪಿಗಳು ಸಾಕ್ಷ್ಯಚಿತ್ರದ ತುಣುಕುಗಳನ್ನು ವಿವಿಧ ವಿಧಾನಗಳ ಮೂಲಕ ಹಲವಾರು ದೇಶಗಳಲ್ಲಿ 2023ರ ಡಿಸೆಂಬರ್‌ವರೆಗೆ ಪ್ರಸಾರ ಮಾಡಿದ್ದಾರೆ’ ಎಂಬುದು ದೂರುದಾರರ ಆರೋಪ.

ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿಗಳು ಈ ಹಿಂದಿನ ವಿಚಾರಣೆ ವೇಳೆ ಕ್ಷಮಾಪಣೆ ಕೋರಿ ಸಾಂಕೇತಿಕವಾಗಿ ಡಾಲರ್ ಮತ್ತು ಪೌಂಡುಗಳಲ್ಲಿ ಪರಿಹಾರದ ಮೊತ್ತ ನೀಡುವುದಾಗಿ ತಿಳಿಸಿದ್ದರು. ಆದರೆ, ಇದನ್ನು ಒಪ್ಪದ ನ್ಯಾಯಪೀಠ, ‘ಎಲ್ಲ ಆರೋಪಿಗಳ ವಿರುದ್ಧ ವಿಚಾರಣೆ ಅಗತ್ಯವಿದೆ’ ಎಂಬ ತೀರ್ಮಾನದೊಂದಿಗೆ ದೋಷಾರೋಪ ನಿಗದಿಪಡಿಸಿ ವಿಚಾರಣೆಗೆ ಆದೇಶಿಸಿದೆ.

ಹೆಗಡೆ ಬಿಜೆಪಿಯೊಳಗಿರುವ ಹುಚ್ಚ: ಸಚಿವ ತಂಗಡಗಿ

ಬೆಂಗಳೂರು: ‘ಸಂಸದ ಅನಂತ ಕುಮಾರ್ ಹೆಗಡೆ ಬಿಜೆಪಿಯೊಳಗಿರುವ ಹುಚ್ಚ. ಆತನಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಚಿಕಿತ್ಸೆ ಕೊಡಿಸಲಿ. ಇಲ್ಲದಿದ್ದರೆ ನಾವು ಕೊಡಿಸುತ್ತೇವೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿತು ಅನಂತ ಕುಮಾರ್ ಹೆಗಡೆ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ತಂಗಡಗಿ, ‘ಹೆಗಡೆ ಮಾತಿಗೆ ನಾವು ಬೆಲೆ ಕೊಡುವುದಿಲ್ಲ. ಅವರ ಹೇಳಿಕೆಗೂ ಪಕ್ಷಕ್ಕೂ ಯಾವುದೇ ಸಂಬಂಧ ಇಲ್ಲವೆಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೇ ಹೇಳಿದ್ದಾರೆ. ಆ ಮೂಲಕ, ಆತ ಹುಚ್ಚ ಎಂದು ಬಿಜೆಪಿಯವರು ಒಪ್ಪಿಕೊಂಡಂತಾಗಿದೆ. ಹೆಗಡೆ ಮೇಲೆ ಕ್ರಮ ತೆಗೆದುಕೊಳ್ಳುವ ಕುರಿತು ಮುಖ್ಯಮಂತ್ರಿ ಮತ್ತು ಗೃಹ ಸಚಿವರು ನಿರ್ಧರಿಸುತ್ತಾರೆ’ ಎಂದರು.



‘ಸಂಯುಕ್ತ ಹೋರಾಟ’ ಸಂಸ್ಥೆಯ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬೇಡಿಕೆಗಳ ಮನವಿ ಸಲ್ಲಿಸಿದರು. ರಾಜ್ಯ ರೈತ ಸಂಘದ ಮುಖಂಡರಾದ ಎಚ್‌.ಆರ್‌. ಬಸವರಾಜಪ್ಪ, ಬಡಗಲಪುರ ನಾಗೇಂದ್ರ ಮತ್ತಿತರರು ಇದ್ದರು

ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಅಭಿಮತ

ಸಮಾಜದ ಉನ್ನತಿಗಾಗಿ ಶ್ರಮಿಸಿದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ


ನಾಗಮಂಗಲ: ‘ಸಮಾಜದ ಉನ್ನತಿಗಾಗಿ ಹಗಲಿರುಳು ಶ್ರಮಿಸಿದ ಬಾಲಗಂಗಾಧರನಾಥ ಸ್ವಾಮೀಜಿ ಹಲವು ಸಂಸ್ಥೆಗಳನ್ನು ಕಟ್ಟಿ ಹೋಗಿದ್ದಾರೆ. ಅವರು ಭೈರವೈಕ್ಯರಾಗುವುದಕ್ಕೆ ಮುನ್ನ ನಿರ್ಮಲಾನಂದನಾಥ ಸ್ವಾಮೀಜಿಯನ್ನು ಗುರುತಿಸಿ ಶ್ರೇಷ್ಠ ಕೆಲಸ ಮಾಡಿದ್ದಾರೆ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಹೇಳಿದರು.

ಬಾಲಗಂಗಾಧರನಾಥ ಸ್ವಾಮೀಜಿಯ 79ನೇ ಜಯಂತ್ಯುತ್ಸವದ ಅಂಗವಾಗಿ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಗುರುವಾರ ನಡೆದ ಸಂತಭಕ್ತ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿ, ‘ಆದಿಚುಂಚನಗಿರಿ ಸಂಸ್ಥೆಗಳನ್ನು ನಿರ್ಮಲಾನಂದನಾಥ ಶ್ರೀಗಳು ಮತ್ತಷ್ಟು ಬಲಯುತವಾಗಿ ಮುಂದುವರಿಸುತ್ತಿದ್ದಾರೆ. ರಾಮ ಸೇತುವೆ ಕಟ್ಟುವಾಗ ವಾನರ ಸೇನೆ ನೆರವಾದಂತೆ ಸಮಾಜದ ಸದಸ್ಯರೆಲ್ಲರೂ ಕೈಜೋಡಿಸುತ್ತಿದ್ದಾರೆ. ನನ್ನ ತಂದೆ, ತಾಯಿ ಅನಕ್ಷರಸ್ಥರಾಗಿದ್ದು, ಅವರ ಆಶೀರ್ವಾದದಿಂದ ನಾನು ಇಷ್ಟು ಎತ್ತರಕ್ಕೆ ಬೆಳೆದಿದ್ದೇನೆ. ದೇವರು, ಮಠ, ಮಂದಿರಗಳ ಆಶೀರ್ವಾದ ನನ್ನ ಮೇಲಿದೆ. ರೈತರೇ ನನ್ನ ಪರಿವಾರವಾಗಿದ್ದಾರೆ’ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ‘ದೇಶದಲ್ಲಿ ಒಕ್ಕಲಿಗರ ಮಠವಿದೆ ಎಂಬ ಕೀರ್ತಿಯನ್ನು ಭಕ್ತರಿಗೆ ನೀಡಿದವರು ಬಾಲಗಂಗಾಧರನಾಥ ಸ್ವಾಮೀಜಿ. ಅವರು ಮನೆಮನೆಗೆ ತೆರಳಿ ದೇಣಿಗೆ ಸಂಗ್ರಹಿಸಿ ಜನಪರ ಕೆಲಸ ಮಾಡಿದ್ದಾರೆ. ಶಿಕ್ಷಣ, ಅನ್ನ ದಾಸೋಹ ಮತ್ತು ಆರೋಗ್ಯ ಸೇವೆಯನ್ನು ಸಮಾಜಕ್ಕೆ ನೀಡಿದ್ದಾರೆ. ಕೆಳ ಜಾತಿಯ ಸಮುದಾಯ ಎಂದು ಕರೆಯಲ್ಪಡುತ್ತಿದ್ದ ಮಕ್ಕಳನ್ನು ಕರೆತಂದು ಸಂಸ್ಕೃತ ಪಾಠ ಪ್ರಾರಂಭಿಸಿದರು. ಜಾತ್ಯತೀತವಾಗಿ ಎಲ್ಲರನ್ನೂ ಮಠದ ಭಕ್ತರನ್ನಾಗಿ ಸ್ವೀಕರಿಸಿದರು’ ಎಂದರು.

ವಿಧಾನ ಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ‘ಸಮಾಜವು ಒಡೆದು ಹೋಗಿದ್ದ ಕಾಲದಲ್ಲಿ ಸ್ವಾಮೀಜಿ ಸಮಾಜಕ್ಕೆ ದಿಕ್ಕು ತೋರಿಸಿ ಗೌರವ ತಂದುಕೊಟ್ಟರು. ತಪಸ್ಸು ಮಾಡಿ ಅದರ ಫಲವನ್ನು ಸಮಾಜಕ್ಕೆ ನೀಡಿದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರ ಪ್ರದೇಶದಲ್ಲಿ ಕಲಿಯಲು ಸಹಾಯಕವಾಗುವಂತೆ ವಿದ್ಯಾರ್ಥಿ ನಿಲಯ ಸ್ಥಾಪಿಸಿ ಬದುಕು ನೀಡಿದರು’ ಎಂದರು.

ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ವಡೋದರದ ಶಿವಾನಂದ ಆಶ್ರಮದ ಪೀಠಾಧ್ಯಕ್ಷ ಪರಮಾತ್ಮಾನಂದ ಸರಸ್ವತಿ ಸ್ವಾಮೀಜಿ, ಮಾದಾರ ಗುರುಪೀಠದ ಮಾದಾರಚನ್ನಯ್ಯ ಸ್ವಾಮೀಜಿ, ಕಬೀರಾನಂದ ಆಶ್ರಮದ ಶಿವಲಿಂಗಾನಂದ ಸ್ವಾಮೀಜಿ, ಗೋಸಾಯಿ ಮಠದ ಮಂಜುನಾಥ ಭಾರತೀ ಸ್ವಾಮೀಜಿ, ಶಾಸಕ ಅಶ್ವತ್ಥ ನಾರಾಯಣ್, ಅಮೆರಿಕದ ಒಕ್ಕಲಿಗರ ಪರಿಷತ್ ಸಲಹೆಗಾರ ಅಮರನಾಥ್ ಗೌಡ, ಜೆಡಿಎಸ್ ಮುಖಂಡರಾದ ಸಿ.ಎಸ್.ಪುಟ್ಟರಾಜು, ಸುರೇಶ್ ಗೌಡ, ಅನ್ನದಾನಿ ಇದ್ದರು.



ಬಾಲಗಂಗಾಧರನಾಥ ಸ್ವಾಮೀಜಿಯ 79ನೇ ಜಯಂತ್ಯುತ್ಸವದ ಅಂಗವಾಗಿ ಆದಿಚುಂಚನಗಿರಿ ಮಠದಲ್ಲಿ ಗುರುವಾರ ನಡೆದ ಸಂತಭಕ್ತ ಸಂಗಮ ಕಾರ್ಯಕ್ರಮದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಮಾತನಾಡಿದರು. ಮಾದಾರ ಚನ್ನಯ್ಯ ಸ್ವಾಮೀಜಿ, ಪ್ರಸನ್ನನಾಥ ಸ್ವಾಮೀಜಿ, ಶಿವಲಿಂಗಾನಂದ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ ಇದ್ದರು

ಮೋದಿಗೆ ದೀರ್ಘಾಯುಷ್ಯ ನೀಡಲಿ

‘ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅನೇಕ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದಾರೆ. ಅವರಿಗೆ ಶ್ರೀರಾಮ ದೀರ್ಘಾಯುಷ್ಯ ನೀಡಿ ಮತ್ತಷ್ಟು ಶಕ್ತಿ ಕರುಣಿಸಲಿ. ಜ.22ರಂದು ಸ್ಥಾಪನೆಯಾಗುತ್ತಿರುವ ಶ್ರೀರಾಮಚಂದ್ರನ ಮೂರ್ತಿ ಸೂರ್ಯಚಂದ್ರರು ಇರುವವರೆಗೂ ಶಾಶ್ವತವಾಗಿ ಉಳಿಯಲಿದೆ’ ಎಂದು ಎಚ್‌.ಡಿ.ದೇವೇಗೌಡ ಹೇಳಿದರು.

ಕೆಲಸದ ಅವಧಿ ಮತ್ತೆ 8 ಗಂಟೆಗೆ ಇಳಿಕೆ- ಮುಖ್ಯಮಂತ್ರಿ ಆಶ್ವಾಸನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿನಕ್ಕೆ 12 ಗಂಟೆ ಕೆಲಸ ಮಾಡಬೇಕೆಂಬ ‘ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ಕಾಯ್ದೆ–2023’ ಅನ್ನು ತಿದ್ದುಪಡಿ ಮಾಡಿ, ಈ ಮೊದಲಿನಂತೆ 8 ಗಂಟೆಗೆ ಇಳಿಸಲು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಗೃಹ ಕಚೇರಿ ಕೃಷ್ಣದಲ್ಲಿ ತಮ್ಮನ್ನು ಗುರುವಾರ ಭೇಟಿ ಮಾಡಿದ ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯೋಜನಾ ಹಾಗೂ ಮಹಿಳಾ ಸಂಘಟನೆಗಳ ಸಮನ್ವಯ ಸಮಿತಿಯ ನೇತೃತ್ವದ ಸಂಯುಕ್ತ ಹೋರಾಟ ವೇದಿಕೆಯ ಪದಾಧಿಕಾರಿಗಳು ಮತ್ತು ಮುಖಂಡರ ನಿಯೋಗಕ್ಕೆ ಮುಖ್ಯಮಂತ್ರಿ ಈ ಆಶ್ವಾಸನೆ ನೀಡಿದರು.

ಭೂ ಸ್ವಾಧೀನ ಹಾಗೂ ಬಗರ್ ಹುಕುಂ ಸಮಸ್ಯೆಗಳು, ಗೋ ಹತ್ಯೆ ನಿಷೇಧ ಕಾಯ್ದೆ ವಾಪಸ್, ಕಾರ್ಮಿಕರಿಗೆ 12 ಗಂಟೆಗಳ ಕೆಲಸ ಕಡ್ಡಾಯ ಕಾಯ್ದೆ ತಿದ್ದುಪಡಿ, ಗ್ರಾಮೀಣ ಬ್ಯಾಂಕುಗಳಲ್ಲಿ ರೈತರ ಸಾಲಕ್ಕೆ ಒಂದಾವರ್ತಿ ತೀರುವಳಿ (ಒಟಿಎಸ್) ವ್ಯವಸ್ಥೆ, ಸ್ವಾತಂತ್ರ್ಯ ಉದ್ಯಾನವನ್ನು ಹೋರಾಟಗಳಿಗೆ ಮೀಸಲಿಡುವುದು ಸೇರಿದಂತೆ ಹಲವು ಬೇಡಿಕೆಗಳ ಬಗ್ಗೆ ಸಂಘದ ಸದಸ್ಯರು ಮುಖ್ಯಮಂತ್ರಿಯ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ, ‘ರೈತರಿಂದ ಬಲವಂತವಾಗಿ ಸಾಲ ವಸೂಲು ಮಾಡಬಾರದೆಂದು ಸಹಕಾರಿ ಹಾಗೂ ರಾಷ್ಟ್ರೀಯ ಬ್ಯಾಂಕ್‌ಗಳಿಗೆ ಸೂಚಿಸಲಾಗುವುದು. ಬಗರ್ ಹುಕುಂ, ಅಕ್ರಮ - ಸಕ್ರಮ, ಅರಣ್ಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಉಪ ಮುಖ್ಯಮಂತ್ರಿ, ಕಂದಾಯ, ಅರಣ್ಯ ಮತ್ತು ಕೃಷಿ ಸಚಿವರು ಹಾಗೂ ಅಧಿಕಾರಿಗಳ ಸಭೆ ಶೀಘ್ರ ಕರೆಯಲಾಗುವುದು’ ಎಂದರು.

‘ಎಪಿಎಂಸಿ ಕಾಯ್ದೆ ತಿದ್ದುಪಡಿಗೆ ವಿಧಾನ ಪರಿಷತ್‌ನ ಅನುಮೋದನೆ ಸಿಕ್ಕಿಲ್ಲ. ಜಂಟಿ ಸಮಿತಿಯಲ್ಲಿ ಇದಕ್ಕೆ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುವುದು. ಭೂ ಸುಧಾರಣಾ ಕಾಯ್ದೆ 79 ಎ ಹಾಗೂ ಬಿ ಪರಿಚ್ಛೇದಕ್ಕೆ ತಂದಿರುವ ತಿದ್ದುಪಡಿ ಸರಿಪಡಿಸಲಾಗುವುದು’ ಎಂದೂ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿಯ ಸಲಹೆಗಾರ ಬಿ.ಆರ್.ಪಾಟೀಲ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಗ್ರಾಮೀಣಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಂಜುಂ ಪರ್ವೇಜ್, ಕೃಷಿ ಇಲಾಖೆ ಕಾರ್ಯದರ್ಶಿ ಅನ್ಬು ಕುಮಾರ್, ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಮುಖ್ಯಮಂತ್ರಿಯ ಕಾರ್ಯದರ್ಶಿ ಕೆ.ವಿ. ತ್ರಿಲೋಕ್ ಚಂದ್ರ ಇದ್ದರು.



ಶ್ರೀರಾಮನ ಚಿತ್ರವಿರುವ ಅಂಚೆ ಚೀಟಿಗಳ ಮಾಹಿತಿ ಒಳಗೊಂಡಿರುವ ಪುಸ್ತಕ ಲೋಕಾರ್ಪಣೆ

ರಾಮಮಂದಿರ ಅಂಚೆಚೀಟಿ ಬಿಡುಗಡೆ

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿ ರಾಮಮಂದಿರದ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಸಿದ್ಧತೆಗಳು ಭರದಿಂದ ಸಾಗಿದ್ದು, ಜ. 22ರ ಸಮಾರಂಭದ ಸ್ಮರಣಾರ್ಥ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿ ಗುರುವಾರ ವಿಶೇಷ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದರು.

ರಾಮಮಂದಿರ, ಗಣೇಶ, ಹನುಮಂತ, ಜಟಾಯು, ಕೇವತ್ ರಾಜ್ ಮತ್ತು ಶಬರಿಯ ಚಿತ್ರಗಳಿರುವ ಒಟ್ಟು ಆರು ಅಂಚೆ ಚೀಟಿಗಳನ್ನು ಅವರು ಬಿಡುಗಡೆ ಮಾಡಿದರು.

ಜಗತ್ತಿನಾದ್ಯಂತ ಈ ವರೆಗೆ ಬಿಡುಗಡೆಯಾಗಿರುವ ಶ್ರೀರಾಮನ ಚಿತ್ರವಿರುವ ಅಂಚೆ ಚೀಟಿಗಳ ಕುರಿತು ಮಾಹಿತಿ ಒಳಗೊಂಡಿರುವ ಪುಸ್ತಕವನ್ನೂ ಅವರು ಈ ವೇಳೆ ಬಿಡುಗಡೆಗೊಳಿಸಿರು.

ರಾಮಮಂದಿರ ಅಂಚೆ ಚೀಟಿಯಲ್ಲಿ 'ಮಂಗಲ್ ಭವನ್ ಅಮಂಗಲ್ ಹಾರಿ' ಎಂದು ಬರೆಯಲಾಗಿದೆ. ರಾಮಮಂದಿರ, ಸೂರ್ಯ, ಸರಯೂ ನದಿ, ಮಂದಿರದ ಸುತ್ತಲಿರುವ ಇತರ ಶಿಲ್ಪಕಲೆಗಳನ್ನು ಈ ಅಂಚೆ ಚೀಟಿಯಲ್ಲಿ ಚಿತ್ರಿಸಲಾಗಿದೆ.

ರಾಮ, ಸೀತಾ ಮತ್ತು ರಾಮಾಯಣವು ಕಾಲ, ಸಮಾಜ, ಜಾತಿ, ಧರ್ಮ ಹಾಗೂ ಪ್ರದೇಶಗಳನ್ನು ಮೀರಿ ಜನರಿಗೆ ಪ್ರಿಯವಾದ ವಿಚಾರಗಳಾಗಿವೆ. ಎಲ್ಲರ ಜೊತೆಗೂ ಬೆಸೆದು ಕೊಳ್ಳುತ್ತಿವೆ. ರಾಮಾಯಣವು ಪ್ರೀತಿಗೆ ಸಲ್ಲುವ ವಿಜಯ, ತ್ಯಾಗ, ಒಗ್ಗಟ್ಟು ಧೈರ್ಯದ ಕುರಿತು ಸಂದೇಶ ನೀಡುತ್ತದೆ. ಈ ಕಾರಣಕ್ಕಾಗಿ ರಾಮಾಯಣವು ಜಾಗತಿಕವಾಗಿ ಆಕರ್ಷಣೆಯ ಕೇಂದ್ರಬಿಂದು ಆಗಿದೆ ಎಂದು ಅವರು ವಿಡಿಯೊ ಸಂದೇಶದಲ್ಲಿ ಮೋದಿ ಹೇಳಿದ್ದಾರೆ.

ಪುಸ್ತಕ ಬಿಡುಗಡೆ: ಜಗತ್ತಿನಾದ್ಯಂತ ಶ್ರೀರಾಮನ ಕುರಿತು ಇರುವ ಅಭಿಮಾನವನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ 48 ಪುಟಗಳಿರುವ ಅಂಚೆ ಚೀಟಿ ಪುಸ್ತಕವನ್ನು ಬಿಡುಗಡೆ ಮಾಡಲಾಗಿದೆ. ಅಮೆರಿಕ, ನ್ಯೂಜಿಲೆಂಡ್, ಸಿಂಗಪುರ, ಕೆನಡಾ, ಕಾಂಬೋಡಿಯಾ ಸೇರಿ 20 ದೇಶಗಳು ಈ ವರೆಗೆ ಶ್ರೀರಾಮನ ಚಿತ್ರವಿರುವ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿವೆ.

ವಿಶ್ವಸಂಸ್ಥೆ ಬಿಡುಗಡೆ ಮಾಡಿದ್ದ ಅಂಚೆ ಚೀಟಿ ಕುರಿತ ಮಾಹಿತಿಯೂ ಇದೆ.



ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ವಿಶೇಷ ಅಂಚೆ ಚೀಟಿಗಳನ್ನು ಗುರುವಾರ ಬಿಡುಗಡೆ ಮಾಡಿದರು —ಪಿಟಿಐ ಚಿತ್ರ



ಅಯೋಧ್ಯೆಯಲ್ಲಿ ಗುರುವಾರ ಭಕ್ತರು 'ಶ್ರೀ ಹನುಮಾನ್ ಮಹಾಯಜ್ಞ ನೆರವೇರಿಸಿದರು —ಪಿಟಿಐ ಚಿತ್ರ

- ರಾಮಲಲ್ಲಾ ಪ್ರತಿಷ್ಠಾಪನೆಯ ದಿನವನ್ನು ಮನೆಗಳಲ್ಲಿ ದೀಪ ಬೆಳಗುವ ಮತ್ತು ಬಡವರಿಗೆ ಆಹಾರ ನೀಡುವ ಮೂಲಕ ಆಚರಿಸಬೇಕು ಎಂದು ಪ್ರಧಾನಿ ಮೋದಿ ಅವರು ಸಂಪುಟ ಸಭೆಯಲ್ಲಿ ಸಹೋದ್ಯೋಗಿಗಳಿಗೆ ಮನವಿ ಮಾಡಿದ್ದಾರೆ.
- ಅಂದು ಸಚಿವರು ತಮ್ಮ ರಾಜ್ಯಗಳಲ್ಲಿ ಭಕ್ತರೊಂದಿಗೆ ದೇವಾಲಯಗಳಿಗೆ ತೆರಳಬೇಕು ಎಂದು ಕೂಡ ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.
- ಉಜ್ಜೈನ್‌ನಿಂದ 5 ಲಕ್ಷ ಲಡ್ಡುಗಳನ್ನು ಅಯೋಧ್ಯೆಗೆ ಶುಕ್ರವಾರ ಕಳುಹಿಸಲಾಗುವುದು ಎಂದು ಮಹಾಕಾಳೇಶ್ವರ ಮಂದಿರದ ಅಧಿಕಾರಿಗಳು ಹೇಳಿದ್ದಾರೆ.
- ಅಯೋಧ್ಯೆ ಮತ್ತು ಸಮೀಪದ ಪ್ರಮುಖ ಪ್ರದೇಶಗಳ ಹವಾಮಾನ ಮುನ್ಸೂಚನೆ ಒದಗಿಸುವ ಸಂಬಂಧ ಭಾರತೀಯ ಹವಾಮಾನ ಇಲಾಖೆಯು ತನ್ನ ವೆಬ್‌ಸೈಟ್‌ನಲ್ಲಿ ಪ್ರತ್ಯೇಕ ಪುಟ ಆರಂಭಿಸಿದೆ.
- 'ಬಳೆ ನಗರ' ಎಂದೇ ಪ್ರಸಿದ್ಧವಾಗಿರುವ ಉತ್ತರ ಪ್ರದೇಶದ ಫಿರೋಜಾಬಾದ್‌ನ ಬಳೆ ತಯಾರಕರು 10 ಸಾವಿರಕ್ಕೂ ಹೆಚ್ಚು ಗಾಜಿನ ಬಳೆಗಳನ್ನು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ನೀಡಿದ್ದಾರೆ.

ನೇರಪ್ರಸಾರ

ಭಾರತೀಯ ರೈಲ್ವೆಯು ದೇಶದಾದ್ಯಂತ ವಿವಿಧ ನಿಲ್ದಾಣಗಳಲ್ಲಿ ಕನಿಷ್ಠ 9,000 ಪರದೆಗಳನ್ನು ಅಳವಡಿಸಿ ಅಯೋಧ್ಯೆಯ ರಾಮ ಲಲ್ಲಾ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಿದೆ.

> ಅಂಚೆ ಚೀಟಿಗಳು ಕೇವಲ ಚಿತ್ರ ಮೂಡಿಸಿರುವ ಕಾಗದದ ಚೂರು ಅಲ್ಲ. ಪುರಾಣ ಮತ್ತು ಉದಾತ್ತ ಚಿಂತನೆಗಳ ಕಿರು ಪ್ರತಿರೂಪ
> **ನರೇಂದ್ರ ಮೋದಿ,** ಪ್ರಧಾನಿ

> ರಾಮಮಂದಿರ ನಿರ್ಮಾಣ ಆಗುತ್ತಿರುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಮಸೀದಿಯನ್ನು ಕೆಡವಿ ಮಂದಿರ ನಿರ್ಮಿಸಿದ್ದಕ್ಕೆ ನಮ್ಮ ಸಹಮತವಿಲ್ಲ
> **ಉದಯನಿಧಿ ಸ್ಟಾಲಿನ್**
> ತಮಿಳುನಾಡು ಸಚಿವ

> ಅಯೋಧ್ಯೆಯಲ್ಲಿ ಅತ್ಯುನ್ನತ ಮಟ್ಟದ ಮೂಲಸೌಕರ್ಯ ಒದಗಿಸಲಾಗುತ್ತಿದೆ. ಸದ್ಯದಲ್ಲೇ ಪ್ರಮುಖ ಪ್ರವಾಸಿ ಸ್ಥಳವಾಗಿ ಅಯೋಧ್ಯೆ ಹೊರಹೊಮ್ಮಲಿದೆ
> **ಹೇಮಾ ಮಾಲಿನಿ,** ಬಿಜೆಪಿ ಸಂಸದೆ

ಇ– ಗಾಡಿಗಳ ಸೌಲಭ್ಯ

ಭಕ್ತರು ರಾಮಮಂದಿರ ಮತ್ತು ಹನುಮಾನ್ ಗಢಿ ದೇವಾಲಯಕ್ಕೆ ಭೇಟಿ ನೀಡಲು ಅನುಕೂಲವಾಗುವಂತೆ ಅಯೋಧ್ಯೆಯಲ್ಲಿ ಬ್ಯಾಟರಿ ಚಾಲಿತ ಗಾಡಿಗಳು ಕಾರ್ಯಾಚರಿಸಲಿವೆ. ಮೊದಲ ಹಂತದಲ್ಲಿ ಮಾರ್ಚ್‌ವರೆಗೆ 650 ಇ-ಗಾಡಿಗಳು ಇಲ್ಲಿ ಲಭ್ಯವಾಗಲಿವೆ ಎಂದು ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರು ಹೇಳಿದ್ದಾರೆ.

ಜ.22 ರವರೆಗೆ ಉಚಿತ ಹೆರಿಗೆಗೆ ಅವಕಾಶ

ವಿಜಯಪುರ: ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯುವ ರಾಮ ಮಂದಿರ ಉದ್ಘಾಟನೆ ಹಾಗೂ ರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯ ಪ್ರಯುಕ್ತ ವಿಜಯಪುರದ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮೀಜಿ (ಜೆಎಸ್‌ಎಸ್) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅಯೋಧ್ಯೆ ಸಂಭ್ರಮೋತ್ಸವ ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಈ ಆಸ್ಪತ್ರೆಯಲ್ಲಿ ಗುರುವಾರದಿಂದ ಜನವರಿ 22ರವರೆಗೆ ಉಚಿತ ಹೆರಿಗೆಗೆ ಅವಕಾಶ ಕಲ್ಪಿಸಲಾಗಿದೆ.

'ಈ ಅವಧಿಯಲ್ಲಿ ಆಸ್ಪತ್ರೆಯಲ್ಲಿ ಹುಟ್ಟುವ ಮಗುವನ್ನು ರಾಮ ಮತ್ತು ಸೀತಾದೇವಿ ಪ್ರತಿರೂಪವೆಂದು ಪರಿಗಣಿಸಿ ಹೆರಿಗೆ ಸಂಪೂರ್ಣ ಉಚಿತವಾಗಿ ನೆರವೇರಿಸುವಂತೆ ಆಸ್ಪತ್ರೆ ಮಾಲೀಕ, ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಪೇಕ್ಷೆಯಾಗಿದೆ. ಅಯೋಧ್ಯೆಯಲ್ಲಿ ಜರುಗುವ ರಾಮ ಮಂದಿರದ ಉದ್ಘಾಟನೆಯ ಸಮಯವನ್ನು ಸಾರ್ಥಕಗೊಳಿಸುವ ಉದ್ದೇಶದಿಂದ ಉಚಿತ ಕೊಡುಗೆ ನೀಡಲಾಗುತ್ತಿದೆ' ಎಂದು ಜೆಎಸ್‌ಎಸ್ ಆಸ್ಪತ್ರೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಶರಣ ಮಳಖೇಡ್ಕರ್ ತಿಳಿಸಿದ್ದಾರೆ.


'ರಾಮದೇವರ ಬೆಟ್ಟದಲ್ಲಿ ರಾಮ ಮಂದಿರ: ಚುನಾವಣಾ ಗಿಮಿಕ್'

ಪ್ರಜಾವಾಣಿ ವಾರ್ತೆ

ರಾಮನಗರ: ರಾಮದೇವರ ಬೆಟ್ಟದಲ್ಲಿ ರಾಮ ಮಂದಿರ ನಿರ್ಮಾಣ ಮಾಡುತ್ತೇವೆ ಎಂದು ಕಾಂಗ್ರೆಸ್‌ನವರು ಹೇಳುತ್ತಿರುವುದು ಚುನಾವಣಾ ಗಿಮಿಕ್ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಟೀಕಿಸಿದ್ದಾರೆ.

ಗುರುವಾರ ಜಿಲ್ಲಾ ಬಿಜೆಪಿ ಹಮ್ಮಿಕೊಂಡಿದ್ದ ವಿಕಸಿತ ಭಾರತ ವೀಕ್ಷಣೆ ಮತ್ತು ರಾಮನಗರ ಜಿಲ್ಲಾ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಅಡ್ಡಗಾಲು ಹಾಕಿದ್ದ ಮತ್ತು ಮಂದಿರ ಉದ್ಘಾಟನೆಯಲ್ಲಿ ಭಾಗವಹಿಸಲ್ಲ ಎಂದ ಕಾಂಗ್ರೆಸ್‌ನವರು ಈಗ ರಾಮದೇವರ ಬೆಟ್ಟದಲ್ಲಿ ರಾಮಮಂದಿರ ಕಟ್ಟುತ್ತೇವೆ ಎನ್ನುತ್ತಿರುವುದು ಆಶ್ಚರ್ಯ ತಂದಿದೆ ಎಂದರು.



ಯೋಗೇಶ್ವರ್

'ರಾಮ ಮಂದಿರವನ್ನು ಕಾಂಗ್ರೆಸ್‌ನವರು ನಿರ್ಮಿಸಬೇಕಿಲ್ಲ. ಬದಲಿಗೆ, ಮುಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ನಾವೇ ಮಂದಿರ ಕಟ್ಟೋಣ ಎಂದು ಶಪಥ ಮಾಡೋಣ. ರಾಮನಗರವನ್ನು ಮತ್ತೊಂದು ಅಯೋಧ್ಯೆ ಮಾಡೋಣ' ಎಂದರು.

ರಾಮದೇವರ ಬೆಟ್ಟದಲ್ಲಿ ರಾಮ ಮಂದಿರ ನಿರ್ಮಾಣ ಕುರಿತು ಸಚಿವ ಸಂಪುಟದಲ್ಲಿ ಚರ್ಚಿಸಲಾಗಿದೆ. ಬೆಟ್ಟದಲ್ಲಿ ಮಂದಿರ ನಿರ್ಮಾಣಕ್ಕೆ ಲಭ್ಯವಿರುವ ಜಾಗ ಗುರುತಿಸಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ ಎಂದು ಇತ್ತೀಚೆಗೆ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಮತ್ತು ಸ್ಥಳೀಯ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅವರು ಹೇಳಿದ್ದರು.



ಕೇಕ್‌ನಲ್ಲಿ ಅರಳಿದ ಅಯೋಧ್ಯೆ ರಾಮಮಂದಿರದ ಪ್ರತಿಕೃತಿ

ಕೇಕ್‌ನಲ್ಲಿ ಅರಳಿದ ರಾಮ ಮಂದಿರ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ರಾಣೆಬೆನ್ನೂರಿನ ಪ್ರವಾಸಿ ಮಂದಿರದ ಬಳಿ ಇರುವ 'ಬೇಕರಿ ಸರ್ಕಲ್' ಎಂಬ ಬೇಕರಿಯಲ್ಲಿ 20 ಕೆ.ಜಿ ಶುಗರ್ ಪೇಸ್ಟ್‌ನಿಂದ ಅಯೋಧ್ಯೆಯ ರಾಮ ಮಂದಿರದ ಪ್ರತಿಕೃತಿ ನಿರ್ಮಿಸಿ ಪ್ರದರ್ಶನಕ್ಕೆ ಇಡಲಾಗಿದೆ.

'15 ವರ್ಷಗಳಿಂದ ವಿವಿಧ ಬಗೆಯ ಕೇಕ್ ತಯಾರಿಸುತ್ತಿರುವೆ. ರಾಮ ಮಂದಿರ ಕೇಕ್‌ಗೆ 20 ಕೆ.ಜಿ ಸಕ್ಕರೆ ಬಳಸಲಾಗಿದೆ. ₹ 40 ಸಾವಿರ ಖರ್ಚು ಆಗಿದ್ದು, ಕೇಕ್ ಸಿದ್ಧಪಡಿಸಲು ಐದು ದಿನ ಬೇಕಾಯಿತು' ಎಂದು ಕೇಕ್ ತಯಾರಕ ಮಹಾಂತೇಶ್.ಟಿ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು .

ಅವರು ದಾವಣಗೆರೆ ತಾಲ್ಲೂಕಿನ ಹೊಸೂರು ಗ್ರಾಮದವರು.

ತಮಿಳುನಾಡಿಗೆ ಮೋದಿ ಭೇಟಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರು ಜನವರಿ 20 ಮತ್ತು 21ರಂದು ತಮಿಳುನಾಡಿನ ಪ್ರಮುಖ ದೇಗುಲಗಳಿಗೆ ಭೇಟಿ ನೀಡಲಿದ್ದಾರೆ ಎಂದು ಪ್ರಧಾನಿ ಕಚೇರಿ ಗುರುವಾರ ತಿಳಿಸಿದೆ.

'ಜ.20ರಂದು 11 ಗಂಟೆಗೆ ತಿರುಚಿರಾಪಲ್ಲಿಯ ಶ್ರೀರಂಗನಾಥ ಸ್ವಾಮಿ ದೇಗುಲದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

21ರಂದು ಅವರು ಧನುಷ್ಕೋಡಿಯ ಕೋದಂಡರಾಮಸ್ವಾಮಿ ದೇಗುಲಕ್ಕೆ ಭೇಟಿ ನೀಡಲಿದ್ದಾರೆ. ಬಳಿಕ ರಾಮಸೇತುವೆ ನಿರ್ಮಾಣವಾದ ಸ್ಥಳ ಎಂಬ ಪ್ರತೀತಿ ಇರುವ ಅರಿಚಲ್ ಮುನೈಗೂ ಭೇಟಿ ನೀಡುವರು.

ಮಂಡ್ಯ: ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿದ್ದ ಮೂರ್ತಿ

ಇನ್ನೊಂದು ರಾಮಮೂರ್ತಿ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಅಯೋಧ್ಯೆಯ ರಾಮ ಮಂದಿರಕ್ಕಾಗಿ ಬಾಲರಾಮನ ಮೂರ್ತಿ ಕೆತ್ತುವುದಕ್ಕೂ ಮೊದಲು ಕೆತ್ತಿದ್ದ ರಾಮಮೂರ್ತಿಯು ನಗರದ ಲೇಬರ್ ಕಾಲೊನಿಯ ರಾಮಮಂದಿರಲ್ಲಿ ಜ.22ರಂದೇ ಪ್ರತಿಷ್ಠಾಪನೆ ಆಗಲಿದೆ.

'ಅಯೋಧ್ಯೆ ರಾಮ ಮಂದಿರದಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಮೂರ್ತಿ ಬಹಿರಂಗಗೊಂಡಿಲ್ಲ. ರಾಮ, ಲಕ್ಷ್ಮಣ, ಸೀತೆ, ಹನುಮಂತ ಮೂರ್ತಿಗಳ ಜೊತೆ ಅರುಣ್ ಯೋಗಿರಾಜ್ ಇರುವ ಹಲವು ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಅವುಗಳಲ್ಲಿ ಮಂಡ್ಯ ರಾಮ ಮಂದಿರಕ್ಕಾಗಿ ಕೆತ್ತನೆ ಮಾಡಿರುವ ಮೂರ್ತಿಗಳಿವೆ' ಎಂದು ಲೇಬರ್ ಕಾಲೊನಿ ರಾಮಮಂದಿರ ಟ್ರಸ್ಟ್ ಪದಾಧಿಕಾರಿಗಳು ಮಾಹಿತಿ ನೀಡಿದರು.

ವರ್ಷದ ಹಿಂದೆಯೇ ಅರುಣ್ ಯೋಗಿರಾಜ್ ಅವರು ಕೆತ್ತನೆ ಮಾಡಿಕೊಟ್ಟಿರುವ ಮೂರ್ತಿಗಳನ್ನು ಟ್ರಸ್ಟ್ ಸದಸ್ಯರು ಭತ್ತದ ಹೊಟ್ಟು, ಹುಲ್ಲಿನ ನಡುವೆ ಜೋಪಾನವಾಗಿಟ್ಟಿದ್ದಾರೆ. ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆ ದಿನವೇ ದೇವಾಲಯ ಉದ್ಘಾಟಿಸಿ, ಮೂರ್ತಿ ಪ್ರತಿಷ್ಠಾಪನೆ ಮಾಡಲು ಸಕಲ ಸಿದ್ಧತೆಗಳನ್ನು ನಡೆಸಲಾಗಿದೆ.

ಅಯೋಧ್ಯೆ ಮಾದರಿಯಲ್ಲೇ ಜನವರಿ 19ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿವೆ. ಅಷ್ಟಬಂಧ ಬ್ರಹ್ಮ ಕಲಶ ಮಹೋತ್ಸವ, ಆಲಯ ಪರಿಗ್ರಹ, ಗುರು- ಗಣಪತಿ ಪೂಜೆ, ಋತ್ವಿಗವರ್ಣನೆ, ಪಂಚಗವ್ಯ ಹವನ ನಡೆಯಲಿವೆ.



ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತನೆ ಮಾಡಿರುವ ರಾಮ, ಲಕ್ಷ್ಮಣ, ಸೀತೆ, ಹನುಮಂತ ಮೂರ್ತಿಗಳು

ಪತಿಯಿಂದ ಪತ್ನಿ ಮಾತ್ರವಲ್ಲ, ತಂದೆಯಿಂದ ಮಗಳು ಜೀವನಾಂಶ ಪಡೆಯಲು ಕೂಡ ಅವಕಾಶ

'ಮಗಳಿಗೆ ಇದೆ ಜೀವನಾಂಶ ಪಡೆಯುವ ಹಕ್ಕು'

ಪ್ರಯಾಗರಾಜ್ (ಪಿಟಿಐ): ಧರ್ಮ ಯಾವುದೇ ಆಗಿರಲಿ, ವಯಸ್ಸು ಎಷ್ಟೇ ಆಗಿರಲಿ ಮದುವೆ ಆಗದ ಮಗಳು ತನ್ನ ತಂದೆ–ತಾಯಿಯಿಂದ 'ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರಿಗೆ ರಕ್ಷಣೆ ಕಾಯ್ದೆ 2005'ರ ಅಡಿಯಲ್ಲಿ ಜೀವನಾಂಶ ಪಡೆಯುವ ಹಕ್ಕು ಹೊಂದಿದ್ದಾಳೆ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ನೈಮುಲ್ಲಾ ಶೇಖ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸುವ ಸಂದರ್ಭದಲ್ಲಿ ಹೈಕೋರ್ಟ್ ಈ ಮಾತು ಹೇಳಿದೆ. ಹೆಣ್ಣುಮಕ್ಕಳಿಗೆ ಜೀವನಾಂಶ ನೀಡಬೇಕು ಎಂದು ಅಧೀನ ನ್ಯಾಯಾಲಯವೊಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಶೇಖ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

'ಮದುವೆಯಾಗದ ಹೆಣ್ಣುಮಗಳು ಹಿಂದೂ ಆಗಿರಲಿ, ಮುಸ್ಲಿಂ ಆಗಿರಲಿ, ಆಕೆಯ ವಯಸ್ಸು ಎಷ್ಟೇ ಆಗಿರಲಿ, ಆಕೆಗೆ ಜೀವನಾಂಶ ಪಡೆಯುವ ಹಕ್ಕು ಇದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಜೀವನ ನಿರ್ವಹಣೆಯ ಹಕ್ಕಿನ ಪ್ರಶ್ನೆ ಇದ್ದಾಗ ಅನ್ವಯವಾಗುವ ಇತರ ಕಾನೂನುಗಳ ಬಗ್ಗೆಯೂ ಕೋರ್ಟ್‌ಗಳು ಗಮನ ಹರಿಸಬೇಕು ಎಂಬುದನ್ನು ಸ್ಪಷ್ಟಪಡಿಸಲಾಗುತ್ತಿದೆ' ಎಂದು ನ್ಯಾಯಮೂರ್ತಿ ಜ್ಯೋತ್ಸ್ನಾ ಶರ್ಮ ಅವರು ಹೇಳಿದ್ದಾರೆ.

ಶೇಖ್ ಅವರ ಮೂವರು ಹೆಣ್ಣು ಮಕ್ಕಳು ಈ ಕಾಯ್ದೆಯ ಅಡಿಯಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದರು. ತಂದೆ, ಮಲತಾಯಿ ತಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ದೂರಿದ್ದರು. ಮಧ್ಯಂತರ ಜೀವನಾಂಶವನ್ನು ಮೂವರು ಹೆಣ್ಣುಮಕ್ಕಳಿಗೆ ನೀಡಬೇಕು ಎಂದು ವಿಚಾರಣಾ ನ್ಯಾಯಾಲಯವು ಆದೇಶಿಸಿತ್ತು. ಈ ಆದೇಶವನ್ನು ಶೇಖ್ ಅವರು ಪ್ರಶ್ನಿಸಿ, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೆಣ್ಣುಮಕ್ಕಳಿಗೆ 18 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ, ಅವರು ಹಣಕಾಸಿನ ವಿಚಾರವಾಗಿ ಸ್ವತಂತ್ರರಾಗಿದ್ದಾರೆ ಎಂದಿದ್ದರು.

ಆದರೆ 18 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಹೆಣ್ಣುಮಕ್ಕಳು ಜೀವನಾಂಶ ಕೇಳುವಂತೆ ಇಲ್ಲ ಎಂಬ ವಾದವನ್ನು ಒಪ್ಪಲು ಆಗದು ಎಂದು ಜನವರಿ 10ರಂದು ನೀಡಿರುವ ಆದೇಶದಲ್ಲಿ ಹೈಕೋರ್ಟ್ ಹೇಳಿದೆ.

ಕುಲಾಂತರಿ ತಳಿ ಬಳಕೆ: ತೀರ್ಪು ಕಾಯ್ದಿರಿಸಿದ ಕೋರ್ಟ್

ನವದೆಹಲಿ (ಪಿಟಿಐ): ಕುಲಾಂತರಿ ತಳಿಗಳನ್ನು ಮುಕ್ತ ಬಳಕೆಗೆ ಬಿಡುಗಡೆ ಮಾಡುವುದಕ್ಕೆ ತಾತ್ಕಾಲಿಕ ನಿಷೇಧ ಹೇರಬೇಕು ಎಂಬ ಕೋರಿಕೆ ಇರುವ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ.



ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸಂಜಯ್ ಕರೋಲ್ ಅವರು ಇರುವ ವಿಭಾಗೀಯ ಪೀಠವು ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹಿರಿಯ ವಕೀಲರಾದ ಪ್ರಶಾಂತ್ ಭೂಷಣ್, ಸಂಜಯ್ ಪಾರೀಖ್ ಅವರ ವಾದಗಳನ್ನು ಆಲಿಸಿತು.

ಕುಲಾಂತರಿ ತಳಿಗಳ ವಿಚಾರವು ವಿಜ್ಞಾನಕ್ಕೆ ಸಂಬಂಧಿಸಿದೆ ಎಂದು ಹೇಳಿರುವ ಪೀಠವು, ಈ ತಳಿಗಳನ್ನು ಮುಕ್ತ ಬಳಕೆಗೆ ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಗಳನ್ನು ದೇಶಕ್ಕೆ ಯಾವುದು ಒಳಿತು ಎಂಬುದರ ಆಧಾರದಲ್ಲಿ ಇತ್ಯರ್ಥಪಡಿಸುವುದಾಗಿ ತಿಳಿಸಿದೆ.

ಕುಲಾಂತರಿ ಬೆಳೆಗಳು ಮನುಷ್ಯನ ಆರೋಗ್ಯದ ಮೇಲೆ ಹಾಗೂ ಪರಿಸರದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎಂಬುದನ್ನು ಪರಿಶೀಲಿಸಲು ಕೋರ್ಟ್ ನೇಮಕ ಮಾಡಿದ ತಾಂತ್ರಿಕ ತಜ್ಞರ ಸಮಿತಿಯ ವರದಿಗಳನ್ನು 'ಕುಲಾಂತರಿತಳಿ ಎಂಜಿನಿಯರಿಂಗ್ ಪರಿಶೀಲನಾ ಸಮಿತಿ'ಯು (ಜಿಇಎಸಿ) ಏಕೆ ಗಮನಿಸಿಲ್ಲ ಎಂದು ಕೋರ್ಟ್, ಕೇಂದ್ರ ಸರ್ಕಾರವನ್ನು ಈ ಹಿಂದೆ ಪ್ರಶ್ನಿಸಿತ್ತು.

ಕುಲಾಂತರಿ ಸಾಸಿವೆಯನ್ನು ಹೊಲಗದ್ದೆಗಳಲ್ಲಿ ವ್ಯಾಪಕವಾಗಿ ಬಳಕೆ ಮಾಡಲು 2022ರ ಅಕ್ಟೋಬರ್‌ನಲ್ಲಿ ಅನುಮತಿ ನೀಡುವ ಮೊದಲು ಜಿಇಎಸಿ ಅಥವಾ ತಜ್ಞರ ಯಾವುದೇ ಉಪಸಮಿತಿಯು, ಕೋರ್ಟ್ ನೇಮಕ ಮಾಡಿದ್ದ ತಾಂತ್ರಿಕ ತಜ್ಞರು ಸಲ್ಲಿಸಿದ ವರದಿಯನ್ನು ಪರಿಶೀಲಿಸಿತ್ತೇ ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ವೆಂಕಟರಮಣಿ ಅವರಿಗೆ ನ್ಯಾಯಪೀಠವು ಕೇಳಿತ್ತು.

ಶಾಸನಾತ್ಮಕ ಸ್ಥಾನ ಹೊಂದಿರುವ ಜಿಇಎಸಿ ಇಂತಹ ವರದಿಗಳನ್ನು ಪರಿಶೀಲಿಸಬೇಕಾದ ಅಗತ್ಯ ಇಲ್ಲ. ಹೀಗಿದ್ದರೂ, ಅದು ಕುಲಾಂತರಿ ತಳಿಯ ವ್ಯಾಪಕ ಬಳಕೆಗೆ ಅನುಮತಿ ನೀಡುವ ಮೊದಲು ಅಗತ್ಯವಿರುವ ಎಲ್ಲ ವೈಜ್ಞಾನಿಕ ಮಾಹಿತಿ ಪರಿಗಣಿಸಿದೆ ಎಂದು ವೆಂಕಟರಮಣಿ ಅವರು ಪೀಠಕ್ಕೆ ವಿವರಿಸಿದ್ದರು.

ಸಾಮಾಜಿಕ ಕಾರ್ಯಕರ್ತೆ ಅರುಣಾ ರಾಡ್ರಿಗಸ್ ಮತ್ತು ಸರ್ಕಾರೇತರ ಸಂಘಟನೆ (ಎನ್‌ಜಿಒ) 'ಜೀನ್ ಕ್ಯಾಂಪೇನ್' ಕಡೆಯಿಂದ ಅರ್ಜಿಗಳು ಸಲ್ಲಿಕೆಯಾಗಿವೆ.

ಅಯೋಧ್ಯೆ: ರಾಮಲಲ್ಲಾ ವಿರಾಜಮಾನ

ಒಂದನೇ ಪುಟದಿಂದ

ಈಚಿನ ದಿನಗಳಲ್ಲಿ ನಸುಕಿನ ಜಾವ ದಟ್ಟ ಮಂಜು ಆವರಿಸುತ್ತಿದೆ. ಇದರಿಂದಾಗಿ ಮೋದಿ ಅವರ ವಿಮಾನವು ಸೋಮವಾರ ನಿಗದಿತ ಸಮಯದಲ್ಲಿ ಅಯೋಧ್ಯೆ ತಲುಪುವುದಕ್ಕೆ ಸಮಸ್ಯೆಯಾಗುವ ಸಂಭವ ಇರುವುದರಿಂದ ಅವರ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡಲಾಗಿದೆ ಎನ್ನಲಾಗಿದೆ. ಮೋದಿ ಅವರು ಸರಯೂ ನದಿಯಲ್ಲಿ ಪವಿತ್ರಸ್ನಾನ ಮಾಡಿ, ನದಿ ನೀರನ್ನು ಹತ್ತಿರದ ನಾಗೇಶ್ವರ ಮಹಾದೇವ ದೇವಾಲಯಕ್ಕೆ ತಂದು ಜಲಾಭಿಷೇಕ ಮಾಡುವ ಸಾಧ್ಯತೆ ಇದೆ. ಅವರು ಸೀತೆಯ ಕುಲದೇವಿ 'ದೇವಕಲಿ' ಮಂದಿರ ಮತ್ತು ಹನುಮಾನ್ ಗಢಿ ಮಂದಿರಕ್ಕೂ ಭೇಟಿ ನೀಡಬಹುದು ಎಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಮೂಲಗಳು ತಿಳಿಸಿವೆ. ರಾಮಲಲ್ಲಾ ವಿಗ್ರಹಕ್ಕೆ ಕಣ್ಣಿಗೆ ಕಟ್ಟಿರುವ ಬಟ್ಟೆಯನ್ನು ಪ್ರಾಣ ಪ್ರತಿಷ್ಠಾಪನೆ ದಿನದಂದು ಮೋದಿ ಅವರ ಎದುರೇ ತೆರೆಯಲಾಗುತ್ತದೆ. ವಿಗ್ರಹದ ಕಣ್ಣಿಗೆ ಕಾಡಿಗೆಯನ್ನು ಮೋದಿ ಅವರೇ ಹಚ್ಚಿ, ಕನ್ನಡಿ ತೋರಲಿದ್ದಾರೆ ಮೂಲಗಳು ತಿಳಿಸಿವೆ.

ಶರಣಾಗಲು ಹೆಚ್ಚಿನ ಸಮಯ ಕೇಳಿದ ಬಿಲ್ಕಿಸ್ ಪ್ರಕರಣದ ಅಪರಾಧಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಶರಣಾಗಲು ಹೆಚ್ಚಿನ ಸಮಯಾವಕಾಶ ಕೊಡಬೇಕು ಎಂದು ಕೋರಿ ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳು ಸಲ್ಲಿಸಿರುವ ಅರ್ಜಿಯನ್ನು ಶುಕ್ರವಾರ ಪರಿಗಣಿಸಲು ಸುಪ್ರೀಂ ಕೋರ್ಟ್ ಒಪ್ಪಿದೆ. ಈ ಅಪರಾಧಿಗಳಿಗೆ ಗುಜರಾತ್ ಸರ್ಕಾರ ನೀಡಿದ್ದ ಕ್ಷಮಾದಾನವನ್ನು ಸುಪ್ರೀಂ ಕೋರ್ಟ್ ಈಚೆಗೆ ರದ್ದುಪಡಿಸಿದೆ.

ಶರಣಾಗಲು ಹೆಚ್ಚುವರಿ ಕಾಲಾವಕಾಶ ಕೋರಿ ಅರ್ಜಿ ಸಲ್ಲಿಸಿರುವ ಸಂಗತಿಯನ್ನು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಇದ್ದ ಪೀಠಕ್ಕೆ ಅಪರಾಧಿಗಳ ಪರ ವಕೀಲರು ತಿಳಿಸಿದರು. ಅಪರಾಧಿಗಳಿಗೆ ಶರಣಾಗಲು ಸುಪ್ರೀಂ ಕೋರ್ಟ್ ಎರಡು ವಾರಗಳ ಕಾಲಾವಕಾಶ ನೀಡಿತ್ತು. ಅದು ಜನವರಿ 21ಕ್ಕೆ ಕೊನೆಗೊಳ್ಳಲಿದೆ.

ಕುಟುಂಬದಲ್ಲಿ ಬಾಕಿ ಇರುವ ಹೊಣೆಗಾರಿಕೆಗಳನ್ನು ಪೂರ್ಣಗೊಳಿಸಬೇಕಿರುವ ಕಾರಣ ಶರಣಾಗಲು ಆರು ವಾರ ಸಮಯ ನೀಡಬೇಕು ಎಂದು ಅಪರಾಧಿ ರಮೇಶ್ ಚಂದನ ಮನವಿ ಮಾಡಿದ್ದಾನೆ. ಚಳಿಗಾಲದ ಬೆಳೆ ಕಟಾವು ಕೆಲಸ ಇರುವ ಕಾರಣ ಆರು ವಾರ ಸಮಯ ಬೇಕು ಎಂದು ಅಪರಾಧಿ ಮಿತೇಶ್ ಭಟ್ ಕೇಳಿದ್ದಾನೆ.

ಇನ್ನೊಬ್ಬ ಅಪರಾಧಿ ತನಗೆ ತಂದೆಯ ಆರೋಗ್ಯದ ಕಡೆ ಗಮನ ನೀಡಬೇಕಿರುವ ಕಾರಣ ಶರಣಾಗಲು ಹೆಚ್ಚು ಸಮಯ ಬೇಕು ಎಂದು ಕೇಳಿದ್ದಾನೆ. ಇದೇ ರೀತಿ ಇತರ ಅಪರಾಧಿಗಳು ಕೂಡ ಶರಣಾಗಲು ಹೆಚ್ಚುವರಿ ಸಮಯ ಕೇಳಿದ್ದಾರೆ.

ಜಮ್ಮು– ಕಾಶ್ಮೀರ: ₹ 36 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದಿದ್ದ ರಿಲಯನ್ಸ್ ಇನ್ಶೂರೆನ್ಸ್ ಹಗರಣಕ್ಕೆ ಸಂಬಂಧಿಸಿದಂತೆ ₹ 36.57 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಗುರುವಾರ ಜಪ್ತಿ ಮಾಡಿಕೊಂಡಿದ್ದಾರೆ.

ಸಿಬಿಐ ದಾಖಲಿಸಿರುವ ಪ್ರಥಮ ತನಿಖಾ ವರದಿಯಲ್ಲಿ (ಎಫ್‌ಐಆರ್) ರಿಯಯನ್ಸ್ ಜನರಲ್ ಇನ್ಶೂರೆನ್ಸ್ ಮತ್ತು ಟ್ರಿನಿಟಿ ರಿಇನ್ಶೂರೆನ್ಸ್‌ನ ಮಧ್ಯವರ್ತಿಗಳನ್ನು ಆರೋಪಿಗಳಾಗಿ ಉಲ್ಲೇಖಿಸಲಾಗಿದೆ. ಸರ್ಕಾರಿ ನೌಕರರು, ಅವರ ಕುಟುಂಬ ಸದಸ್ಯರಿಗೆ ಜಾರಿಗೊಳಿಸಿದ್ದ ಆರೋಗ್ಯ ವಿಮಾ ಭದ್ರತೆಯ ಯೋಜನೆಗೆ ಸಂಬಂಧಿಸಿದ ಹಗರಣ ಇದಾಗಿದೆ.

ಹಿಂದಿನ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲ ಸತ್ಯಪಾಲ್ ಮಲ್ಲಿಕ್, 2018ರಲ್ಲಿ ಅನಿಲ್ ಅಂಬಾನಿ ಮಾಲೀಕತ್ವದ ಕಂಪನಿ ಜೊತೆಗಿನ ಒಪ್ಪಂದವನ್ನು ರದ್ದುಪಡಿಸಿದ್ದರು. ಈ ಯೋಜನೆ ಜಾರಿಯಲ್ಲಿ ಭಾರಿ ಅಕ್ರಮ ನಡೆದಿದೆ ಎಂದು ಕಾರಣ ನೀಡಲಾಗಿತ್ತು.

ನಿರ್ದಿಷ್ಟ ಕಂಪನಿಗೆ ನೆರವಾಗಲು ರಜೆ ದಿನ ಟೆಂಡರ್ ತೆರೆಯಲಾಗಿತ್ತು. 'ಸಂಬಂಧಿಸಿದ ಕಡತಗಳಿಗೆ ಅನುಮೋದನೆ ನೀಡಲು ತಮಗೆ ₹300 ಕೋಟಿ ಲಂಚದ ಆಮಿಷ ಒಡ್ಡಲಾಗಿತ್ತು' ಎಂದು ಮಲ್ಲಿಕ್ 2021ರ ಅಕ್ಟೋಬರ್‌ನಲ್ಲಿ ಆರೋಪಿಸಿದ್ದರು.

ಟಿಎಂಸಿ ರ‍್ಯಾಲಿಗೆ ಕೋರ್ಟ್ ಅನುಮತಿ

ಕೋಲ್ಕತ್ತ (ಪಿಟಿಐ): ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷವು ಈ ತಿಂಗಳ 22ರಂದು ಇಲ್ಲಿ ಸೌಹಾರ್ದ ರ‍್ಯಾಲಿ ನಡೆಸಲು ಕಲ್ಕತ್ತ ಹೈಕೋರ್ಟ್ ಗುರುವಾರ ಅನುಮತಿ ನೀಡಿದೆ.

ರ‍್ಯಾಲಿ ನಡೆಯುವ ವೇಳೆ ಶಾಂತಿ ಕಾಯ್ದುಕೊಳ್ಳಬೇಕು ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಕೋರ್ಟ್ ಸೂಚಿಸಿದೆ. ಅಯೋಧ್ಯೆಯ ರಾಮಮಂದಿರದಲ್ಲಿ ರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆಯ ದಿನವೇ ಈ ರ‍್ಯಾಲಿ ನಡೆಯಲಿದೆ.

ಅಂದು ರಾಜ್ಯದಲ್ಲಿ ಅರೆಸೇನಾಪಡೆ ನಿಯೋಜಿಸುವಂತೆ ಬಿಜೆಪಿ ಶಾಸಕ, ಅರ್ಜಿದಾರ ಸುವೇಂದು ಅಧಿಕಾರಿ ಅವರು ಮಾಡಿದ ಮನವಿ ಕುರಿತು ಕೋರ್ಟ್ ಯಾವುದೇ ಆದೇಶ ನೀಡಲಿಲ್ಲ.

'ಅಸ್ಸಾಂ ಸರ್ಕಾರ ಅತಿ ಭ್ರಷ್ಟ'

ಶಿವಸಾಗರ್/ಜೋರ್‌ಹಾಟ್ (ಅಸ್ಸಾಂ) (ಪಿಟಿಐ): ಅಸ್ಸಾಂನಲ್ಲಿರುವುದು ಭಾರತದ ಅತ್ಯಂತ ಭ್ರಷ್ಟ ಸರ್ಕಾರ ಮತ್ತು ಇಲ್ಲಿ ಅತ್ಯಂತ ಭ್ರಷ್ಟ ಮುಖ್ಯಮಂತ್ರಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

'ಭಾರತ ಜೋಡೊ ನ್ಯಾಯ ಯಾತ್ರೆ'ಯು ಗುರುವಾರ ನಾಗಾಲ್ಯಾಂಡ್‌ನಿಂದ ಅಸ್ಸಾಂ ಪ್ರವೇಶಿಸಿದ ಬಳಿಕ ಅವರು ಹೆಲೋಎಟಿಂಗ್‌ನಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದರು.

'ಆಡಳಿತಾರೂಢ ಬಿಜೆಪಿಯು ದ್ವೇಷ ಭಾವನೆಯನ್ನು ಹರಡುತ್ತಿದೆ ಮತ್ತು ಜನರ ಹಣ ಲೂಟಿ ಮಾಡುತ್ತಿದೆ. ಇಲ್ಲಿ ಏನಾಗುತ್ತಿದೆ ಎಂದು ಬಹುಶಃ ನಿಮಗೆ ಗೊತ್ತಿದೆ. ಯಾತ್ರೆಯ ಸಂದರ್ಭದಲ್ಲಿ ನಾವು ಅಸ್ಸಾಂ ವಿಷಯ ಪ್ರಸ್ತಾಪಿಸುತ್ತೇವೆ' ಎಂದರು.

ದೇಬರ್‌ಪರ್‌ನಲ್ಲಿ ಮಾರ್ಗದ ಬದಿಯಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, ಅಸ್ಸಾಂನ ಸ್ಥಳೀಯ ಸಮುದಾಯಗಳಿಗೆ, ಟೀ ಕಾರ್ಮಿಕರಿಗೆ ಮತ್ತು ಬುಡಕಟ್ಟು ಜನರಿಗೆ ಬಿಜೆಪಿ ಸರ್ಕಾರ ಅನ್ಯಾಯ ಮಾಡಿದೆ ಎಂದು ಆಪಾದಿಸಿದರು.

ಇಂತಹ ಯಾತ್ರೆಗಳಿಂದ ಯಾವುದೇ ಪ್ರಯೋಜನವಿಲ್ಲ ಎಂಬ ಬಿಜೆಪಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕಳೆದ ವರ್ಷದ ಭಾರತ ಜೋಡೊ ಯಾತ್ರೆಯು ದೇಶದ ರಾಜಕೀಯ ನಿರೂಪಣೆಯನ್ನು ಬದಲಾಯಿಸಿದೆ ಎಂದರು.

ಜೋರಟ್ ಜಿಲ್ಲೆಯಲ್ಲಿ ಹೊಸದಾಗಿ ಘೋಷಿಸಿದ ಸರ್ಕಾರಿ ಯೋಜನೆಗಾಗಿ ಅರ್ಜಿಗಳನ್ನು ಸಂಗ್ರಹಿಸಲು ನೂರಾರು ಸಂಖ್ಯೆಯಲ್ಲಿ ಗ್ರಾಮೀಣ ಮಹಿಳೆಯರು ಸೇರಿದ್ದರು. ಯಾತ್ರೆ ಬರುತ್ತಿರುವುದು ಗೊತ್ತಾಗುತ್ತಿದ್ದಂತೆಯೇ ಸರತಿ ಸಾಲು ಬಿಟ್ಟು ರಾಹುಲ್ ಅವರತ್ತ ದೌಡಾಯಿಸಿದರು. ರಾಹುಲ್ ಅವರು ಬಸ್ಸಿನಿಂದ ಹೊರಬಂದು ಅವರ ಕುಶಲೋಪರಿ ವಿಚಾರಿಸಿದರು. ಅವರು ತಡೆಯಲು ಯತ್ನಿಸಿದರೂ ಕೆಲ ಮಹಿಳೆಯರು ಅವರ ಪಾದ ಮುಟ್ಟಿ ನಮಸ್ಕರಿಸಿದರು. ಕೆಲವರು ರಾಹುಲ್ ಜತೆ ಚಿತ್ರ ತೆಗೆಸಿಕೊಂಡು ಸಂಭ್ರಮಿಸಿದರು.

- ನಾಗಾಲ್ಯಾಂಡ್‌ನ ತುಲೀಯಿಂದ ಅಸ್ಸಾಂಗೆ ರಾಹುಲ್ ಅವರು ಬಸ್‌ನಲ್ಲಿ ಪಯಣಿಸಿದರು
- ಯಾತ್ರೆಯು ರಾಜ್ಯದಲ್ಲಿ ಎಂಟು ದಿನಗಳವರೆಗೆ ಸಂಚರಿಸಲಿದೆ
- ಯಾತ್ರೆಯ ದಿನಗಳ ಸಂದರ್ಭದಲ್ಲೇ ಸರ್ಕಾರದ ಯೋಜನೆಯ ಅರ್ಜಿಗಳನ್ನು ವಿತರಿಸಲು ರಾಜ್ಯ ಸರ್ಕಾರ ದಿನಾಂಕ ನಿಗದಿಪಡಿಸಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.



ಯಾತ್ರೆ ವೇಳೆ ರಾಹುಲ್ ಗಾಂಧಿ ಜನರತ್ತ ಕೈ ಬೀಸಿದರು

> ದೇಶದಲ್ಲಿ ಗಾಂಧಿ ಕುಟುಂಬ ಅತ್ಯಂತ ಭ್ರಷ್ಟ ಕುಟುಂಬ. ಇದು ನ್ಯಾಯ ಯಾತ್ರೆಯಲ್ಲ. ಎಲ್ಲಿ ಮುಸ್ಲಿಮರು ಇರುತ್ತಾರೊ ಅಲ್ಲಿಗೆ ಅವರು ಭೇಟಿ ನೀಡುತ್ತಾರೆ.
> **ಹಿಮಂತ್ ಬಿಸ್ವಾ ಶರ್ಮ**
> ಅಸ್ಸಾಂ ಮುಖ್ಯಮಂತ್ರಿ

ಬಾಲಕಿ ಮೇಲೆ ಅತ್ಯಾಚಾರ: 20 ವರ್ಷ ಜೈಲು

ಕೊಚ್ಚಿ (ಪಿಟಿಐ): ನಾಲ್ಕು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ 44 ವರ್ಷದ ವ್ಯಕ್ತಿಗೆ ಕೇರಳ ನ್ಯಾಯಾಲಯವು 20 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಗುರುವಾರ ಆದೇಶಿಸಿದೆ.

ಮುವಾಟ್ಟುಪುಳದ ವಿಶೇಷ ನ್ಯಾಯಾಧೀಶ (ಪೋಕ್ಸೊ) ಪಿ.ವಿ.ಅನೀಶ್ ಕುಮಾರ್ ಅವರು ಪೋಕ್ಸೊ ಕಾಯ್ದೆಯ ಸೆಕ್ಷನ್ 4ರ ಅಡಿಯಲ್ಲಿ ಜಿಲಾನಿ ಎಂಬಾತನಿಗೆ 20 ವರ್ಷಗಳ ಶಿಕ್ಷೆ ಪ್ರಕಟಿಸಿದರು.

ಈ ಶಿಕ್ಷೆಯ ಜತೆಗೆ ಅಪರಾಧಿಗೆ ₹ 50 ಸಾವಿರ ದಂಡವನ್ನೂ ವಿಧಿಸಲಾಗಿದೆ.

ಈ ಮೊತ್ತವನ್ನು ಪರಿಹಾರವಾಗಿ ಸಂತ್ರಸ್ತೆಗೆ ಒದಗಿಸುವಂತೆ ನ್ಯಾಯಾಲಯ ಆದೇಶಿಸಿದೆ.

ಇದಲ್ಲದೇ ಸಂತ್ರಸ್ತೆಗೆ ಸೂಕ್ತ ಪರಿಹಾರ ನೀಡುವಂತೆ ಕೂಡಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ನ್ಯಾಯಾಲಯವು ಶಿಫಾರಸು ಮಾಡಿದೆ.

ಭಾರತೀಯ ಬಾಹ್ಯಾಕಾಶ ಕೇಂದ್ರ: 2025ಕ್ಕೆ ಪ್ರಥಮ ಹಂತದ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಫರೀದಾಬಾದ್: 'ಮಹತ್ವಾಕಾಂಕ್ಷೆಯ ಭಾರತೀಯ ಬಾಹ್ಯಾಕಾಶ ಕೇಂದ್ರದ ಮೊದಲ ಹಂತದ ಪರೀಕ್ಷಾರ್ಥ ಪ್ರಯೋಗ 2025ರಲ್ಲಿ ನಡೆಯಲಿದೆ' ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಗುರುವಾರ ಇಲ್ಲಿ ಹೇಳಿದರು.

ಬಾಹ್ಯಾಕಾಶದ ಕೇಂದ್ರದ ಪ್ರಥಮ ಮಾದರಿಯನ್ನು 2028ರಲ್ಲಿ ಉಡಾವಣೆ ಮಾಡುವ ಕುರಿತಂತೆ ಕ್ಷೇತ್ರದ ಪ್ರಮುಖರ ಜೊತೆಗೆ ಚರ್ಚೆ ನಡೆದಿದೆ ಎಂದು ಅವರು ತಿಳಿಸಿದರು.

'ಆರಂಭಿಕ ಹಂತದ ಪರೀಕ್ಷಾ ಪ್ರಯೋಗವು ಮುಂದಿನ ವರ್ಷ ನಡೆಯಲಿದೆ. ಭಾರತೀಯ ಅಂತರಿಕ್ಷ ಕೇಂದ್ರದ ಸ್ವರೂಪ ಕುರಿತು ಮಂಗಳವಾರವಷ್ಟೇ ಪರಿಶೀಲನೆ ನಡೆಯಿತು. ಕೇಂದ್ರದ ಅಭಿವೃದ್ಧಿ ಕುರಿತಂತೆ ಉದ್ಯಮ ಪ್ರಮುಖರ ಜೊತೆ ಚರ್ಚೆ ನಡೆದಿದೆ. ಪ್ರಸ್ತುತ ಲಭ್ಯವಿರುವ ರಾಕೆಟ್ ಬಳಸಿಯೇ 2028ರಲ್ಲಿ ಅಂತರಿಕ್ಷ ಕೇಂದ್ರದ ಉಡ್ಡಯನ ನಡೆಯಲಿದೆ' ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷದಲ್ಲಿ 2035ರ ಒಳಗೆ ಭಾರತೀಯ ಅಂತರಿಕ್ಷ ಕೇಂದ್ರ ಸ್ಥಾಪನೆ ಕುರಿತಂತೆ ಇಸ್ರೊಗೆ ಮಹತ್ವಾಕಾಂಕ್ಷೆಯ ಗುರಿಯನ್ನು ನಿಗದಿಪಡಿಸಿದ್ದರು.

ಮೊದಲು ಉಡಾವಣೆ ಮಾಡುವ ಕೇಂದ್ರವು ಮಾನವರಹಿತ ಆಗಿರುತ್ತದೆ. ಇನ್ನೊಂದೆಡೆ, 10 ಟನ್ ತೂಕದ ರಾಕೆಟ್ ಅಭಿವೃದ್ಧಿಪಡಿಸುವ ಕುರಿತು ಚಟುವಟಿಕೆ ನಡೆದಿದೆ. ದೀರ್ಘಾವಧಿ ಬಳಕೆಯ ಅಗತ್ಯವಿದ್ದಾಗ ರಾಕೆಟ್ ಅಭಿವೃದ್ಧಿ ಅಗತ್ಯ. ಈಗ ಅಂತಹ ಅಗತ್ಯ ಬಂದಿದೆ. ನಾವು ಚಂದಿರನಲ್ಲಿಗೆ ಮನುಷ್ಯನನ್ನು ಕಳುಹಿಸುವ ಯೋಜನೆ ಹೊಂದಿದ್ದೇವೆ. ಅಂತರಿಕ್ಷ ಕೇಂದ್ರ ಹೊಂದುವ ಯೋಜನೆಯೂ ಇದೆ. ಹೀಗಾಗಿ, ದೊಡ್ಡ ರಾಕೆಟ್ ಅಗತ್ಯವಿದೆ ಎಂದು ಇಸ್ರೊ ಅಧ್ಯಕ್ಷರು ಅಭಿಪ್ರಾಯಪಟ್ಟರು.

ಭಾರತ ಮತ್ತು ಅಮೆರಿಕ ನಡುವಣ ಒಪ್ಪಂದದ ಅನುಸಾರ, ಭಾರತೀಯ ಗಗನಯಾತ್ರಿಯೊಬ್ಬರು ಈ ವರ್ಷ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಪ್ರಯಾಣಿಸಲಿದ್ದಾರೆ. ಗಗನಯಾನ ಉದ್ದೇಶಕ್ಕಾಗಿ ತರಬೇತಿ ನೀಡಲಾಗಿರುವ ವಾಯುಪಡೆಯ ನಾಲ್ವರು ಪೈಲಟ್‌ಗಳಲ್ಲಿಯೇ ಒಬ್ಬರನ್ನು ಕಳುಹಿಸಬೇಕೇ ಎಂಬ ಬಗ್ಗೆ ನಿರ್ಧಾರವಾಗಿಲ್ಲ ಎಂದರು.

ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಕರೆದೊಯ್ಯಲು ಭಿನ್ನವಾದ ರಾಕೆಟ್ ಬಳಕೆಯಾಗುವುದರಿಂದ, ಹೀಗೆ ಆಯ್ಕೆಯಾದವರಿಗೆ ಅಮೆರಿಕದ ನಾಸಾದಲ್ಲಿ ಪ್ರತ್ಯೇಕ ತರಬೇತಿ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಮುಂಬೈ ಧಾರಣೆ

ಶೇಂಗಾ

18-1-2024

ಜವಾರ 70/80(ಹೊಸ)	12100-12200
ಜವಾರ 80/90(ಹೊಸ)	11500-11600
ದಪ್ಪ ಮದ್ರಾಸ್(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆಂಗಿನ ಟಿನ್)	1580 (1590)
ಒಂದು ವಾರದ ಡೆಲಿವರಿ	1575 (1585)
ಸೋಯಾ ಕಚ್ಚಾ	860 (875)
ಪಾಮ್ ವಾರದ ಡೆಲಿವರಿ	848 (848)
ಸೂರ್ಯಕಾಂತಿ ಎಣ್ಣೆ ಕಚ್ಚಾ	875 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)


ಅಪರಂಜಿ ಚಿನ್ನ 10ಗ್ರಾಂ

₹61,650 (62,350)

ಬೆಳ್ಳಿ ಕೆ.ಜಿ ₹70,800 (71,650)

ಆವರಣದಲ್ಲಿ ಬುಧವಾರದ ಧಾರಣೆ

ಷೇರುಪೇಟೆ ವಹಿವಾಟು 313



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,571
ಇಂದಿನ ಅಂತ್ಯ	21,462
▼	109
ದಿನದ ಕನಿಷ್ಠ	21,285

ವಿನಿಮಯ ದರ

$ ಡಾಲರ್	83.13
£ ಪೌಂಡ್	105.46
€ ಯುರೊ	90.54
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100ಕ್ಕೆ	₹550
12 ಕ್ಕೆ	₹72

ಮೈಸೂರು

100ಕ್ಕೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದರ)

ಶೇಂಗಾ (ರಿಫೈನ್ಡ್)	₹1570 (1580)
ಸೋಯಾ (ರಿಫೈನ್ಡ್)	₹910 (905)
ಸೂರ್ಯಕಾಂತಿ (ರಿಫೈನ್ಡ್)	₹925 (930)
ಪಾಮೊಲಿನ್	₹850 (844)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹156.50
ಆರ್‌ಎಸ್‌ಎಸ್-5	₹150
ಗುಡ್ ಲಾಟ್ (ಪ್ರತಿ ಕೆಜಿಗೆ)	₹133

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹280-479
ದ್ವಿತಳಿ (ಬಿ.ವಿ)	₹333-561

ಸಿರಿಯಾ: ವೈಮಾನಿಕ ದಾಳಿ– 9 ಸಾವು

ಬೈರೂತ್ (ಪಿಟಿಐ): ದಕ್ಷಿಣ ಸಿರಿಯಾ ಮೇಲೆ ಗುರುವಾರ ನಡೆದ ವೈಮಾನಿಕ ದಾಳಿಯಲ್ಲಿ ಕನಿಷ್ಠ ಒಂಬತ್ತು ಮಂದಿ ಸಾವಿಗೀಡಾಗಿದ್ದಾರೆ. ಮಾದಕ ವಸ್ತು ಕಳ್ಳ ಸಾಗಣೆದಾರರು ಸಕ್ರಿಯರಾಗಿರುವ, ಸರಣಿ ದಾಳಿಗಳು ನಡೆದ ಗಡಿ ಭಾಗದಲ್ಲಿಯೇ ಮತ್ತೆ ದಾಳಿ ನಡೆದಿದ್ದು, ಜೋರ್ಡಾನ್ ವಾಯುಪಡೆಯೇ ದಾಳಿ ನಡೆಸಿರುವ ಸಾಧ್ಯತೆ ಇದೆ ಎಂದು ಸಿರಿಯಾದ ವಿರೋಧ ಪಕ್ಷಗಳ ಕಾರ್ಯಕರ್ತರು ಹೇಳಿದ್ದಾರೆ. ಆದರೆ, ಸ್ವೈದಾ ಎಂಬ ಪ್ರಾಂತ್ಯದಲ್ಲಿ ನಡೆದ ಈ ದಾಳಿಯ ಹೊಣೆಯನ್ನು ಜೋರ್ಡಾನ್ ಹೊತ್ತು ಕೊಂಡಿಲ್ಲ.

ಓರ್ಮನ್ ಎನ್ನುವ ಹಳ್ಳಿಯ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ ಇಬ್ಬರು ಮಕ್ಕಳು, ಮೂವರು ಮಹಿಳೆಯರು ಸೇರಿದಂತೆ ಕನಿಷ್ಠ 9 ಮಂದಿ ಸತ್ತಿದ್ದಾರೆ ಎಂದು ಬ್ರಿಟನ್ ಮೂಲದ ಮಾನವ ಹಕ್ಕು ಕಣ್ಗಾವಲು ಸಂಸ್ಥೆ ಹೇಳಿದೆ.

ಗೂಗಲ್‌ನಲ್ಲಿ ಉದ್ಯೋಗ ಕಡಿತ?

ನ್ಯೂಯಾರ್ಕ್ (ರಾಯಿಟರ್ಸ್): ಪ್ರಸಕ್ತ ವರ್ಷವೂ ಆಲ್ಫಾಬೆಟ್ ಒಡೆತನದ ಗೂಗಲ್ ಕಂಪನಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಕಡಿತ ಮಾಡುವುದಾಗಿ ಕಂಪನಿಯ ಸಿಇಒ ಸುಂದರ್ ಪಿಚೈ ಅವರು, ಉದ್ಯೋಗಿಗಳಿಗೆ ಸಂದೇಶ ರವಾನಿಸಿದ್ದಾರೆ ಎಂದು ಹೇಳಲಾಗಿದೆ.

ಕೆಲಸದ ಹೊರೆಯನ್ನು ಹಗುರಗೊಳಿಸುವ ನಿಟ್ಟಿನಲ್ಲಿ ಗೂಗಲ್ ಕಂಪನಿಯು ಕೃತಕ ಬುದ್ಧಿಮತ್ತೆ ಮತ್ತು ಸ್ವಯಂಚಾಲಿತ ವ್ಯವಸ್ಥೆ ಅಳವಡಿಸಿಕೊಳ್ಳಲು ಮುಂದಾಗಿದೆ. ಹಾಗಾಗಿ, ನೌಕರರ ವಜಾಕ್ಕೆ ನಿರ್ಧರಿಸಿದೆ ಎಂದು ಅಮೆರಿಕದ ನ್ಯೂಸ್ ಪೋರ್ಟಲ್ 'ದಿ ವರ್ಜ್' ವರದಿ ಮಾಡಿರುವುದಾಗಿ ರಾಯಿಟರ್ಸ್ ಸುದ್ದಿಸಂಸ್ಥೆ ಹೇಳಿದೆ.

ಪಿಚೈ ಅವರು ಈ ಕುರಿತು ಉದ್ಯೋಗಿಗಳಿಗೆ ಕಳುಹಿಸಿರುವ ಸಂದೇಶದ ಬಗ್ಗೆ ಗೂಗಲ್ ಪ್ರತಿನಿಧಿಗಳು ಖಚಿತಪಡಿಸಿದ್ದಾರೆ. ಆದರೆ, ಮೆಮೊದಲ್ಲಿರುವ ಹೆಚ್ಚಿನ ವಿವರವನ್ನು ಬಹಿರಂಗಪಡಿಸಲು ನಿರಾಕರಿಸಿದ್ದಾರೆ ಎಂದು ಹೇಳಿದೆ.

ಗೂಗಲ್ ಅಸಿಸ್ಟೆಂಟ್ ವಿಭಾಗ, ಹಾರ್ಡ್‌ವೇರ್ ಪಿಕ್ಸಲ್ ವಿಭಾಗ, ಜಾಹೀರಾತು ಮಾರಾಟ ವಿಭಾಗದಲ್ಲಿ ಹಲವು ನೌಕರರನ್ನು ವಜಾಗೊಳಿಸುವುದಾಗಿ ಕಳೆದ ವಾರ ಗೂಗಲ್ ಹೇಳಿತ್ತು.

2023ರ ಜನವರಿಯಲ್ಲಿ ಆಲ್ಫಾಬೆಟ್ ಕಂಪನಿಯು 12 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿತ್ತು. ಕಂಪನಿಯ ಮಾಹಿತಿ ಪ್ರಕಾರ ಸೆಪ್ಟೆಂಬರ್ ಅಂತ್ಯದವರೆಗೆ ಒಟ್ಟು 1,82,381 ಉದ್ಯೋಗಿಗಳು ಇದ್ದಾರೆ.

ಕೆಎಸ್‌ಆರ್‌ಟಿಸಿಗೆ 1,225 ಅಶೋಕ್ ಲೇಲ್ಯಾಂಡ್ ಬಸ್

ಮುಂಬೈ (ಪಿಟಿಐ): ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ 1,225 ಬಸ್‌ಗಳನ್ನು ಪೂರೈಸಲು ಆರ್ಡರ್ ಪಡೆಯಲಾಗಿದೆ. ಏಪ್ರಿಲ್ ವೇಳೆಗೆ ಈ ಬಸ್‌ಗಳನ್ನು ಪೂರೈಸಲಾಗುವುದು ಎಂದು ದೇಶದ ವಾಣಿಜ್ಯ ವಾಹನ ತಯಾರಿಕಾ ಕಂಪನಿ ಅಶೋಕ್ ಲೇಲ್ಯಾಂಡ್ ತಿಳಿಸಿದೆ.

ಈಗಾಗಲೇ, ಕರ್ನಾಟಕ ಸರ್ಕಾರವು ಕಂಪನಿಯ 11,680ಕ್ಕೂ ಹೆಚ್ಚು ಬಸ್‌ಗಳನ್ನು ಹೊಂದಿದೆ. ಈ ಹೊಸ ಆರ್ಡರ್ ವಾಹನಗಳ ತಯಾರಿಕಾ ಉದ್ಯಮದಲ್ಲಿ ಕಂಪನಿಯ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದು ಹೇಳಿದೆ. ಈ ಬಸ್‌ಗಳು ಎಐಎಸ್153 ಪ್ರಮಾಣೀಕೃತವಾಗಿವೆ ಎಂದು ತಿಳಿಸಿದೆ.

'ಕೆಎಸ್‌ಆರ್‌ಟಿಸಿ ಜೊತೆಗಿನ ಕಂಪನಿಯ ಪಯಣ ಮುಂದುವರಿಯಲಿದೆ. ಸ್ಥಳೀಯ ಸಾರಿಗೆ ವ್ಯವಸ್ಥೆಯು ರಾಷ್ಟ್ರ ಮತ್ತು ಆರ್ಥಿಕತೆಯ ಬೆಳವಣಿಗೆಗೆ ಸಹಕಾರಿಯಾಗಲಿದೆ. ಇದಕ್ಕೆ ಪೂರಕವಾಗಿ ಸುಧಾರಿತ ತಂತ್ರಜ್ಞಾನ ಬಳಸಿಕೊಂಡು ವಾಹನಗಳನ್ನು ತಯಾರಿಸಲಾಗುತ್ತಿದೆ. ಗ್ರಾಹಕರ ಅಗತ್ಯತೆಗೆ ಅನುಗುಣವಾಗಿ ವಾಹನಗಳ ಪೂರೈಕೆಗೆ ಒತ್ತು ನೀಡಲಾಗಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಶೇನು ಅಗರ್ವಾಲ್ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೊಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	580

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14150	-	179.20 ಸೆಂಟ್ಸ್
ಎಸಿ	-	7,800	-	
ಆರ್‌ಪಿ	-	12,000	-	ಲಂಡನ್
ಆರ್‌ಸಿ	-	7,300	-	3,156 ಡಾಲರ್ಸ್

ಒಂದು ಕ್ವಿಂಟಲ್‌ಗೆ ₹8 ಸಾವಿರ ಧಾರಣೆ • ನವದೆಹಲಿ, ಪುಣೆಗೆ ರವಾನೆ

ಬೆಳೆಗಾರರ ಕೈಹಿಡಿದ ಶುಂಠಿ

• ರಾಜೇಂದ್ರ ಹೆಗಡೆ

ಶಿರಸಿ: ಪ್ರಸಕ್ತ ವರ್ಷದಲ್ಲಿ ಕೊಯ್ಲಿನ ಆರಂಭದಲ್ಲೇ ಶುಂಠಿಗೆ ಉತ್ತಮ ಬೆಲೆ ಸಿಗುತ್ತಿದ್ದು, ಬೆಳೆಗಾರರ ಮೊಗದಲ್ಲಿ ಸಂತಸ ಮೂಡಿದೆ.

ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿ, ಮುಂಡಗೋಡ, ಯಲ್ಲಾಪುರ, ಹಳಿಯಾಳ ಭಾಗದಲ್ಲಿ ಸುಮಾರು 2 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶುಂಠಿ ಬೆಳೆಯಲಾಗಿದೆ. ಬಹುತೇಕ ಬೆಳೆಗಾರರು ಹಿಮಾಚಲ ತಳಿಯ ಶುಂಠಿ ಬೆಳೆದಿದ್ದು, ಕೊಯ್ಲು ಆರಂಭಿಸಿದ್ದಾರೆ.

'ಕೊಳೆರೋಗ ಬಾಧಿಸಿದ ವರ್ಷಗಳಲ್ಲಿ ಒಂದು ಎಕರೆಗೆ 120ರಿಂದ 130 ಕ್ವಿಂಟಲ್ ಇಳುವರಿ ಸಿಗುತ್ತಿತ್ತು.



ಶಿರಸಿಯ ಬನವಾಸಿಯಲ್ಲಿ ಮಾರುವ ಉದ್ದೇಶಕ್ಕೆ ರಾಶಿ ಹಾಕಿರುವ ಶುಂಠಿ

ಈ ಬಾರಿ ಸರಾಸರಿ 200ರಿಂದ 250 ಕ್ವಿಂಟಲ್‌ನಷ್ಟು ಇಳುವರಿ ಲಭಿಸುತ್ತಿದೆ. ಕೊಯ್ಲಿನ ಆರಂಭದಲ್ಲೇ ಒಂದು ಕ್ವಿಂಟಲ್‌ಗೆ ₹8 ಸಾವಿರಕ್ಕೆ ಮಾರಾಟವಾಗುತ್ತಿದೆ. ವ್ಯಾಪಾರಿಗಳೇ ಜಮೀನಿಗೆ ಬಂದು ಖರೀದಿಸುತ್ತಿದ್ದಾರೆ' ಎಂದು ಬುಗಡಿಕೊಪ್ಪದ ಶುಂಠಿ ಬೆಳೆಗಾರ ನವೀನ್ ನಾಯ್ಕ ತಿಳಿಸಿದರು.

ಮೂರ್ನಾಲ್ಕು ವರ್ಷಗಳಿಂದ ಶುಂಠಿಗೆ ಉತ್ತಮ ಬೆಲೆ ಸಿಕ್ಕಿರಲಿಲ್ಲ. ಕಳೆದ ವರ್ಷ ಒಂದು ಕ್ವಿಂಟಲ್ ಶುಂಠಿಗೆ ಗರಿಷ್ಠ ₹6 ಸಾವಿರ ದರ ಇತ್ತು. ಕಳೆದ ವರ್ಷ ಬರಗಾಲದಿಂದ ತತ್ತರಿಸಿದ್ದ ಬೆಳೆಗಾರರನ್ನು ಈಗ ಶುಂಠಿ ಕೈಹಿಡಿದಿದೆ.

ಸಕಾಲದಲ್ಲಿ ಮಳೆಯಾಗದ ಕಾರಣ ಭತ್ತ ಬೆಳೆಯುತ್ತಿದ್ದ ತಾಲ್ಲೂಕಿನ ಬಹುತೇಕ ರೈತರು ಕಡಿಮೆ ನೀರು ಬೇಡುವ ಶುಂಠಿ ಕೃಷಿಗೆ ಮೊರೆ ಹೋಗಿದ್ದಾರೆ.

ಶುಂಠಿಗೆ ನವದೆಹಲಿ, ಪುಣೆ ಮಾರುಕಟ್ಟೆಯಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಮುಂದಿನ ದಿನಗಳಲ್ಲಿ ದರ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಬೆಳೆಗಾರರು ಹೇಳುತ್ತಾರೆ.

> ಶುಂಠಿಗೆ ನಿಶ್ಚಿತ ದರ ಸಿಗುವುದು ಕಡಿಮೆ. ಈ ಬಾರಿ ಬೇಡಿಕೆ ಬಂದಿದೆ. ಬರಗಾಲದ ಸನ್ನಿವೇಶದಲ್ಲಿ ರೈತರಿಗೆ ವರದಾನವಾಗಿದೆ
>
> **ಸತೀಶ ಹೆಗಡೆ,** ಸಹಾಯಕ ನಿರ್ದೇಶಕ, ತೋಟಗಾರಿಕೆ ಇಲಾಖೆ

> ಈ ಬಾರಿ ಶುಂಠಿಗೆ ಮಾರಕವಾದ ಕೊಳೆ ರೋಗ, ಸೊರಗು ಬರಲಿಲ್ಲ. ಹೀಗಾಗಿ ಇಳುವರಿ ಕೂಡ ಉತ್ತಮವಾಗಿದೆ
>
> **ನವೀನ್ ನಾಯ್ಕ,** ಶುಂಠಿ ಬೆಳೆಗಾರ, ಬುಗಡಿಕೊಪ್ಪ

3ನೇ ದಿನವೂ ಷೇರುಪೇಟೆ ಕುಸಿತ

ಮುಂಬೈ (ಪಿಟಿಐ): ಷೇರುಪೇಟೆಯಲ್ಲಿ ಮೂರನೇ ದಿನವಾದ ಗುರುವಾರವೂ ಕರಡಿ ಕುಣಿತ ಮುಂದುವರಿದಿದ್ದು, ಸೂಚ್ಯಂಕಗಳು ನಷ್ಟ ದಾಖಲಿಸಿವೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದವು. ಹೂಡಿಕೆದಾರರು ಲಾಭ ಮಾಡಿಕೊಳ್ಳಲು ಮುಂದಾಗಿದ್ದರಿಂದ ಷೇರುಪೇಟೆ ಇಳಿಕೆಯ ಹಾದಿ ಹಿಡಿಯಿತು ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 313 ಅಂಶ ಇಳಿಕೆಯಾಗಿ, 71,186ಕ್ಕೆ ಸ್ಥಿರಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 109 ಅಂಶ ಕಡಿಮೆಯಾಗಿ, 21,462ರಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿದೆ.

ಮೂರು ದಿನಗಳ ವಹಿವಾಟಿನಲ್ಲಿ ಬಿಎಸ್‌ಇ 2,141 ಅಂಶ (ಶೇ 3) ಮತ್ತು ನಿಫ್ಟಿ 635 ಅಂಶ (ಶೇ 2.89) ನಷ್ಟ ಕಂಡಿವೆ.

ನಷ್ಟ ಕಂಡ ಕಂಪನಿಗಳು: ಎನ್‌ಟಿಪಿಸಿ, ಏಷ್ಯನ್ ಪೇಂಟ್ಸ್, ಪವರ್ ಗ್ರಿಡ್, ಇಂಡಸ್‌ಇಂಡ್ ಬ್ಯಾಂಕ್, ನೆಸ್ಲೆ ಮತ್ತು ಮಾರುತಿ ಕಂಪನಿಯ ಷೇರುಗಳು ನಷ್ಟ ಕಂಡಿವೆ.

ಲಾಭ ಕಂಡ ಕಂಪನಿಗಳು: ರಿಲಯನ್ಸ್ ಇಂಡಸ್ಟ್ರೀಸ್, ಸನ್‌ಫಾರ್ಮಾ, ಟೆಕ್ ಮಹೀಂದ್ರ, ಟಾಟಾ ಮೋಟರ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಆ್ಯಕ್ಸಿಸ್ ಬ್ಯಾಂಕ್ ಮತ್ತು ಲಾರ್ಸನ್ ಆ್ಯಂಡ್ ಟೂಬ್ರೊ ಲಾಭ ದಾಖಲಿಸಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಈಕ್ವಿಟಿಗಳಲ್ಲಿ ಬುಧವಾರ ₹10,578 ಕೋಟಿ ಹೂಡಿಕೆ ಮಾಡಿದ್ದಾರೆ.

ಎಚ್‌ಡಿಎಫ್‌ಸಿಗೆ ₹1.45 ಲಕ್ಷ ಕೋಟಿ ನಷ್ಟ

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರುಗಳ ಕುಸಿತ ಮುಂದುವರಿದಿದ್ದು, ಎರಡು ದಿನಗಳಲ್ಲಿ ಶೇ 11.44ರಷ್ಟು ಇಳಿಕೆಯಾಗಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯ ₹1.45 ಲಕ್ಷ ಕೋಟಿ ಕಡಿಮೆಯಾಗಿದೆ.

ಗುರುವಾರ ಸೆನ್ಸೆಕ್ಸ್‌ನಲ್ಲಿ ಷೇರಿನ ಮೌಲ್ಯ ಶೇ 3.26ರಷ್ಟು ಕುಸಿದಿದ್ದು, ಷೇರಿನ ಬೆಲೆ ₹1,486 ಇದೆ. ನಿಫ್ಟಿಯಲ್ಲಿ ಷೇರಿನ ಮೌಲ್ಯ ಶೇ 3ರಷ್ಟು ಕುಸಿದಿದ್ದು, ಷೇರಿನ ಬೆಲೆ ₹1,490 ಆಗಿದೆ.

ಇಸ್ರೇಲ್ ದಾಳಿ 16 ಮಂದಿ ಸಾವು

ರಫಾ (ಎಪಿ): ದಕ್ಷಿಣ ಗಾಜಾದಲ್ಲಿರುವ ರಫಾ ಪಟ್ಟಣದ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ 16 ಜನರು ಮೃತಪಟ್ಟಿದ್ದಾರೆ. ಇದರಲ್ಲಿ ಅರ್ಧದಷ್ಟು ಮಕ್ಕಳಿದ್ದಾರೆ ಎಂದು ವೈದ್ಯರು ಗುರುವಾರ ತಿಳಿಸಿದ್ದಾರೆ.

ಇಸ್ರೇಲ್ ಸೇನೆಯು ದಾಳಿ ಮುಂದುವರಿಸಿದ್ದು, ಈ ಪ್ರದೇಶದಲ್ಲಿರುವ ನಾಗರಿಕರು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆಯುವಂತೆ ಸೂಚಿಸಿದೆ.

ಫ್ರಾನ್ಸ್ ಮತ್ತು ಕತಾರ್‌ನ ಮಧ್ಯಸ್ಥಿಕೆಯ ಒಪ್ಪಂದದ ಭಾಗವಾಗಿ ಔಷಧಗಳು ಬುಧವಾರ ಗಾಜಾ ತಲುಪಿವೆ. ಇವನ್ನು ಅನಾರೋಗ್ಯಕ್ಕೀಡಾಗಿರುವ ರೋಗಿಗಳಿಗೆ ವಿತರಿಸಲಾಗಿದೆಯೇ ಎಂಬ ಬಗ್ಗೆ ಮಾಹಿತಿ ಸಿಕ್ಕಿಲ್ಲ.



ಜನ್ಮ ದಿನಾಂಕ ತಿದ್ದುಪಡಿಗೆ ಆಧಾರ್ ಪರಿಗಣಿಸಲ್ಲ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಜನ್ಮ ದಿನಾಂಕದ ಪರಿಷ್ಕರಣೆಗೆ ಸ್ವೀಕಾರಾರ್ಹ ದಾಖಲೆಗಳ ಪಟ್ಟಿಯಿಂದ ಆಧಾರ್ ಕಾರ್ಡ್ ಅನ್ನು ಕೈಬಿಟ್ಟು ಸುತ್ತೋಲೆ ಹೊರಡಿಸಿದೆ.

ಇಪಿಎಫ್‌ಒ ಚಂದಾದಾರರು ಜನ್ಮ ದಿನಾಂಕದ ತಿದ್ದುಪಡಿಗೆ ಅರ್ಹ ದಾಖಲೆಯಾಗಿ ಆಧಾರ್ ಕಾರ್ಡ್ ಸಲ್ಲಿಸುತ್ತಿದ್ದರು. ಇನ್ನು ಮುಂದೆ ಇದನ್ನು ಪರಿಗಣಿಸುವುದಿಲ್ಲ. ಈ ಉದ್ದೇಶಕ್ಕಾಗಿ ಜನನ ಪ್ರಮಾಣ ಪತ್ರ, ಅಂಕಪಟ್ಟಿ, ಪ್ಯಾನ್ ಕಾರ್ಡ್ ಬಳಸಬಹುದು ಎಂದು ತಿಳಿಸಿದೆ.

ಕಾರಣ ಏನು?: ಇಪಿಎಫ್‌ಒ ಸೇರಿದಂತೆ ಸರ್ಕಾರದ ಹಲವು ಸಂಸ್ಥೆಗಳು ಜನ್ಮ ದಿನಾಂಕದ ತಿದ್ದುಪಡಿಗೆ ಆಧಾರ್ ಅನ್ನು ಅರ್ಹ ದಾಖಲೆಯಾಗಿ ಬಳಸುತ್ತಿದ್ದುದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ (ಯುಐಡಿಎಐ) ಗಮನಕ್ಕೆ ಬಂದಿತ್ತು. ಮತ್ತೊಂದೆಡೆ ಈ ಉದ್ದೇಶಕ್ಕಾಗಿ ಆಧಾರ್ ಬಳಸದಂತೆ ನ್ಯಾಯಾಲಯಗಳು ಹಲವು ಪ್ರಕರಣಗಳಲ್ಲಿ ಆದೇಶ ನೀಡಿವೆ.

ಹಾಗಾಗಿ, ವೈಯಕ್ತಿಕ ಗುರುತು ಮತ್ತು ದೃಢೀಕರಣಕ್ಕಾಗಿ ಮಾತ್ರವಷ್ಟೇ ಆಧಾರ್ ಬಳಸಬೇಕು. ಹುಟ್ಟಿದ ದಿನಾಂಕ ತಿದ್ದುಪಡಿಗೆ ಪರಿಗಣಿಸಬಾರದು ಎಂದು 2023ರ ಡಿಸೆಂಬರ್ 22ರಂದು ಹೊರಡಿಸಿದ ಆದೇಶದಲ್ಲಿ ಯುಐಡಿಎಐ ಸೂಚಿಸಿತ್ತು. ಯುಐಡಿಎಐ ನಿರ್ದೇಶನದ ಮೇರೆಗೆ ಇಪಿಎಫ್‌ಒ ಈ ಕ್ರಮಕೈಗೊಂಡಿದೆ.

ಫಿಲಿಪ್ಪೀನ್ಸ್: ಮಣ್ಣು ಕುಸಿದು 7 ಜನ ಸಾವು

ಮನಿಲಾ (ಫಿಲಿಪ್ಪೀನ್ಸ್) (ಪಿಟಿಐ): ಹಲವು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಮನೆಯೊಂದರ ಮೇಲೆ ಮಣ್ಣು ಕುಸಿದು ಐವರು ಮಕ್ಕಳು ಸೇರಿದಂತೆ 7 ಮಂದಿ ಸತ್ತು, 10 ಮಂದಿ ಕಣ್ಮರೆಯಾಗಿರುವ ದುರ್ಘಟನೆ ದಕ್ಷಿಣ ಡಾವೋ ದೆ ಒರೋ ಪ್ರಾಂತ್ಯದಲ್ಲಿ ಸಂಭವಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದು, 10 ಮಂದಿ ಇನ್ನೂ ಪತ್ತೆಯಾಗಿಲ್ಲ ಎಂದು ಡಾವೋ ಪ್ರಾಂತ್ಯದ ನಾಗರಿಕ ರಕ್ಷಣಾ ವಿಭಾಗದ ನಿರ್ದೇಶಕ ಎಡ್ನಾರ್ ದಯಾಂಘಿರಂಗ್ ತಿಳಿಸಿದ್ದಾರೆ.

₹16 ಸಾವಿರ ಕೋಟಿ ಹೂಡಿಕೆಗೆ ಎನ್‌ಟಿಟಿ ಡೇಟಾ ಕಂಪನಿ ನಿರ್ಧಾರ

ಪೆಟ್ರೋನಾಸ್‌ನಿಂದ ಮರುಬಳಕೆ ಇಂಧನ ತಯಾರಿಕೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಈಗಾಗಲೇ ಸುಮಾರು ₹7,480 ಕೋಟಿ ಹೂಡಿಕೆ ಮಾಡಿರುವ ಎನ್‌ಟಿಟಿ ಡೇಟಾ ಕಂಪನಿಯು ಮುಂಬರುವ ವರ್ಷಗಳಲ್ಲಿ ಇನ್ನೂ ₹16 ಸಾವಿರ ಕೋಟಿ ಬಂಡವಾಳ ತೊಡಗಿಸಲು ನಿರ್ಧರಿಸಿದೆ. ಅಲ್ಲದೆ, ತನ್ನ ಉತ್ಪಾದನೆ ಹೆಚ್ಚಿಸಲು ಪಾನೀಯಗಳ ತಯಾರಿಕಾ ಕಂಪನಿ ಆ್ಯಬ್ ಇನ್ಬೇವ್ ಇಂಡಿಯಾದಲ್ಲಿ ₹400 ಕೋಟಿ ಹೂಡಿಕೆಗೆ ಒಪ್ಪಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಸ್ವಿಟ್ಜರ್ಲೆಂಡ್‌ನ ದಾವೋಸ್ ನಗರದಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮಾವೇಶದ ಮೂರನೆಯ ದಿನವಾದ ಬುಧವಾರ, ರಾಜ್ಯದಲ್ಲಿ ಹೂಡಿಕೆ ಮಾಡುವ ಕುರಿತಂತೆ ಎಚ್‌ಪಿ, ಆ್ಯಬ್ ಇನ್ಬೇವ್ ಬ್ರೂವರೀಸ್, ಎಚ್‌ಸಿಎಲ್, ಗೆನಾತ್ರಿ (ಪೆಟ್ರೋನಾಸ್), ಎನ್‌ಟಿಟಿ ಡೇಟಾ, ಸಿಸ್ಕೋ, ಸ್ವಿಗ್ಗಿ ಸೇರಿದಂತೆ ಕೆಲವು ಕಂಪನಿಗಳ ಮುಖ್ಯಸ್ಥರ ಜತೆ ಎಂ.ಬಿ. ಪಾಟೀಲರ ನೇತೃತ್ವದ ನಿಯೋಗ ಮಾತುಕತೆ ನಡೆಸಿದೆ.

'ಇನ್ನೂ ನಾಲ್ಕು ಸಾವಿರ ಉದ್ಯೋಗಗಳನ್ನು ಸೃಷ್ಟಿಸಲು ನಿರ್ಧರಿಸಿರುವ ಎಚ್‌ಪಿ (ಹ್ಯೂಲೆಟ್ ಪೆಕಾರ್ಡ್) ಕಂಪನಿಯು ಬೆಂಗಳೂರಿನ ಮಹದೇವಪುರದಲ್ಲಿ ಎರಡು ಸುಸಜ್ಜಿತ ಕಚೇರಿಗಳನ್ನು ಆರಂಭಿಸಲಿದೆ. ಮೈಸೂರಿನಲ್ಲಿ ಸರ್ವರ್ ತಯಾರಿಕಾ ಘಟಕ ಆರಂಭಿಸುವ ಕುರಿತು ಮಾತುಕತೆ ನಡೆಸುತ್ತಿದೆ. ಇದು ಸಾಧ್ಯವಾದರೆ ಸುಮಾರು ₹8,300 ಕೋಟಿ ವಾರ್ಷಿಕ ವಹಿವಾಟು ಸಾಧ್ಯವಾಗಲಿದೆ. ಅಲ್ಲದೆ, ಎಚ್‌ಪಿ ಕಂಪನಿಯು ರಾಜ್ಯದಲ್ಲಿ ತನ್ನ 'ಗ್ಲೋಬಲ್ ಲೀಡರ್‌ಶಿಪ್' ಕಚೇರಿ ಹೊಂದಲು ಮನಸ್ಸು ಮಾಡಿದೆ' ಎಂದು ಮಾಹಿತಿ ನೀಡಿದ್ದಾರೆ.

'ಶುದ್ಧ ಇಂಧನ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಪೆಟ್ರೋನಾಸ್ (ಗೆನಾತ್ರಿ) ಕಂಪನಿಯು ಈ ವರ್ಷದ ಕೊನೆಯ ಹೊತ್ತಿಗೆ 30 ಗಿಗಾವಾಟ್ ಮರುಬಳಕೆ ಮಾಡಬಹುದಾದ ಇಂಧನ ತಯಾರಿಸುವ ಗುರಿ ಹೊಂದಿದೆ. ಅಲ್ಲದೆ, ವಿದ್ಯುತ್ ಚಾಲಿತ ವಾಹನಗಳ ಬ್ಯಾಟರಿ ತ್ಯಾಜ್ಯ ನಿರ್ವಹಣೆಯನ್ನು ಅದು ವೈಜ್ಞಾನಿಕವಾಗಿ ಮಾಡಲು ಆಸಕ್ತಿ ಹೊಂದಿದೆ. ಈ ಉದ್ದೇಶದಿಂದ ಸರ್ಕಾರದ ಸಹಭಾಗಿತ್ವ ಬಯಸಿದೆ' ಎಂದು ಅವರು ವಿವರಿಸಿದ್ದಾರೆ.

'ಸೈಬರ್ ಸೆಕ್ಯುರಿಟಿ ಕ್ಷೇತ್ರದಲ್ಲಿ ಸಿಸ್ಕೋ, ನಗರ ಸಂಚಾರ ವ್ಯವಸ್ಥೆಯೊಂದಿಗೆ ಸ್ವಿಗ್ಗಿ, ವಿದ್ಯುತ್ ಚಾಲಿತ ವಾಹನ ಕ್ಷೇತ್ರದಲ್ಲಿ ವೊಲ್ವೊ ಕಂಪನಿಗಳು ಹೆಚ್ಚಿನ ಬಂಡವಾಳ ಹೂಡಲು ಮುಂದೆ ಬಂದಿವೆ. ಇವುಗಳ ಹೂಡಿಕೆ ಪ್ರಸ್ತಾವಕ್ಕೆ ರಾಜ್ಯ ಸರ್ಕಾರ ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದೆ. ಈ ಹೂಡಿಕೆಗಳ ಸಂಬಂಧವಾಗಿ ಎಚ್‌ಸಿಎಲ್ ಕಂಪನಿಯ ಮುಖ್ಯಸ್ಥ ಬಾಲಸುಬ್ರಮಣಿಯನ್, ಪೆಟ್ರೋನಾಸ್ ಕಂಪನಿಯ ಸಿಇಒ ಸುಶೀಲ್ ಪುರೋಹಿತ್, ಸಿಸ್ಕೋದ ಪ್ರಧಾನ ವ್ಯವಸ್ಥಾಪಕ ಜೀತು ಪಟೇಲ್ ಮತ್ತಿತರರ ಜೊತೆ ವಿಸ್ತೃತ ಮಾತುಕತೆ ನಡೆಸಲಾಗಿದೆ' ಎಂದು ಪಾಟೀಲ ತಿಳಿಸಿದ್ದಾರೆ.

ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಐಟಿಬಿಟಿ ಇಲಾಖೆ ಪ್ರಧಾನ ಕಾರ್ಯದರ್ಶಿ ಏಕ್‌ರೂಪ್ ಕೌರ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಮಹೇಶ್ ನಿಯೋಗದಲ್ಲಿದ್ದಾರೆ.



ಪೆಟ್ರೋನಾಸ್ ಕಂಪನಿಯ ಪ್ರಮುಖರ ಜೊತೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ನಿಯೋಗ



ವಡೋದರಾದಲ್ಲಿ ಕೆರೆಯಲ್ಲಿ ದೋಣಿ ಮಗುಚಿದ್ದು, ರಕ್ಷಣಾ ಕಾರ್ಯ ನಡೆದಿತ್ತು –ಪಿಟಿಐ ಚಿತ್ರ

ಗುಜರಾತ್: ದೋಣಿ ಮಗುಚಿ ವಿದ್ಯಾರ್ಥಿಗಳು ಸೇರಿ 16 ಸಾವು

ವಡೋದರ, ಗುಜರಾತ್ (ಪಿಟಿಐ): ನಗರ ಹೊರವಲಯದ ಕೆರೆಯೊಂದರಲ್ಲಿ ಗುರುವಾರ ದೋಣಿ ಮಗುಚಿಕೊಂಡಿದ್ದು, ಪ್ರವಾಸ ತೆರಳಿದ್ದ 14 ವಿದ್ಯಾರ್ಥಿಗಳು ಮತ್ತು ಇಬ್ಬರು ಶಿಕ್ಷಕರು ಮೃತಪಟ್ಟಿದ್ದಾರೆ.

ಶಾಲೆಯೊಂದರ 24 ವಿದ್ಯಾರ್ಥಿಗಳು, ನಾಲ್ವರು ಶಿಕ್ಷಕರು ಪ್ರವಾಸ ತೆರಳಿದ್ದರು. ಹೊರವಲಯದ ಹರ್ನಿ ಕೆರೆಯಲ್ಲಿ ಅವಘಡ ಸಂಭವಿಸಿದೆ.

ನಾಪತ್ತೆಯಾಗಿರುವ ಇತರರಿಗೆ ಶೋಧ ಕಾರ್ಯ ನಡೆದಿದೆ. ಸದ್ಯ, 14 ಮಕ್ಕಳು ಮತ್ತು ಇಬ್ಬರು ಶಿಕ್ಷಕರ ಶವ ಪತ್ತೆಯಾಗಿದೆ. ಒಬ್ಬ ವಿದ್ಯಾರ್ಥಿಯನ್ನು ರಕ್ಷಿಸಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕೆರೆಯಲ್ಲಿ ದೋಣಿ ಮಗುಚಿ ಪಿಕ್ನಿಕ್‌ಗೆ ಹೊರಟಿದ್ದ 14 ಮಕ್ಕಳು, ಇಬ್ಬರು ಶಿಕ್ಷಕರು ಸಾವಿಗೀಡಾಗಿರುವ ದುರ್ಘಟನೆ ಗುಜರಾತ್‌ನ ಅಹಮದಾಬಾದ್‌ನಲ್ಲಿ ಗುರುವಾರ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಮೃತ ಮಕ್ಕಳೆಲ್ಲ ಹತ್ತು ವರ್ಷದವರಾಗಿದ್ದಾರೆ. ಘಟನೆಗೆ ಕಾರಣ ತಿಳಿದುಬಂದಿಲ್ಲ. ದೋಣಿಯಲ್ಲಿ ತೆರಳಿದ್ದವರಲ್ಲಿ ಯಾರೂ ಜೀವರಕ್ಷಕ ಕವಚ ಧರಿಸಿರಲಿಲ್ಲ ಎಂದು ಘಟನೆಯ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ರಷ್ಯಾ: ಸೇನೆಯನ್ನು ಟೀಕಿಸಿದ್ದಕ್ಕೆ ಜೈಲು

ಮಾಸ್ಕೋ (ಪಿಟಿಐ): ರಷ್ಯಾ ಸೇನೆಯನ್ನು ಅವಮಾನಿಸಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಕ್ಕಾಗಿ ಮಾನವ ಹಕ್ಕುಗಳ ಹೋರಾಟಗಾರ ಗ್ರೆಗರಿ ವಿಂಟರ್ ಎಂಬಾತನಿಗೆ ನ್ಯಾಯಾಲಯವು 3 ವರ್ಷ ಜೈಲು ಶಿಕ್ಷೆ ವಿಧಿಸಿ ಆದೇಶಿಸಿದೆ.

'ಸೇನೆ ಕೈಗೊಂಡ ಕಾರ್ಯಾಚರಣೆ ಕುರಿತು ವಿಶ್ವಾಸಾರ್ಹವಾದ ಮಾಹಿತಿ ರಕ್ಷಣಾ ಸಚಿವಾಲಯದ ಜಾಲತಾಣದಲ್ಲಿದೆ ಎನ್ನುವುದು ಗೊತ್ತಿದ್ದರೂ ವಿಂಟರ್ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿಯನ್ನು ಹಂಚಿಕೊಂಡಿದ್ದಾರೆ' ಎಂದು ನ್ಯಾಯಾಲಯವು ಆದೇಶದಲ್ಲಿ ತಿಳಿಸಿದೆ. ಉಕ್ರೇನ್‌ನ ನಗರಗಳಲ್ಲಿ ರಷ್ಯಾ ಸೇನೆ ನಡೆಸಿದ ಕಾರ್ಯಾಚರಣೆ ಕುರಿತು ಗ್ರೆಗರಿ ವಿಂಟರ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಆಕ್ರೋಶ ಹೊರಹಾಕಿದ್ದರು.

ಚಿಲ್ಲರೆ ಹಣದುಬ್ಬರ ಶೇ 4ಕ್ಕೆ ತಗ್ಗಿಸುವುದು ಅಗತ್ಯ: ಆರ್‌ಬಿಐ



ಮುಂಬೈ (ಪಿಟಿಐ): ಮುಂಬರುವ ತಿಂಗಳುಗಳಲ್ಲಿ ಚಿಲ್ಲರೆ ಹಣದುಬ್ಬರವನ್ನು ಶೇ 4ರಲ್ಲಿ ಕಾಯ್ದುಕೊಳ್ಳುವ ಮೂಲಕ ಬೆಲೆಯಲ್ಲಿ ಸ್ಥಿರತೆ ಕಾಪಾಡಬೇಕಿದೆ. ಆ ಮೂಲಕ 2024–25ನೇ ಹಣಕಾಸು ವರ್ಷದಲ್ಲಿ ಕನಿಷ್ಠ ಶೇ 7ರಷ್ಟು ಆರ್ಥಿಕ ಬೆಳವಣಿಗೆ ದರ (ಜಿಡಿಪಿ) ಸಾಧಿಸುವ ಗುರಿ ಭಾರತದ ಮುಂದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಹೇಳಿದೆ.

ಸದ್ಯ ಜಾಗತಿಕ ಆರ್ಥಿಕತೆಯು ಭಿನ್ನ ದಿಕ್ಕಿನತ್ತ ಸಾಗಿದೆ. ಈ ನಡುವೆಯೇ ಏಷ್ಯಾ ಖಂಡದಲ್ಲಿರುವ ರಾಷ್ಟ್ರಗಳ ಆರ್ಥಿಕತೆಗಳು ವಿಶ್ವದ ಇತರೆ ರಾಷ್ಟ್ರಗಳ ಆರ್ಥಿಕತೆಯ ಬೆಳವಣಿಗೆಯನ್ನು ಮೀರಿಸಲು ಸಿದ್ಧವಾಗಿವೆ ಎಂದು ಗುರುವಾರ ಬಿಡುಗಡೆ ಮಾಡಿರುವ ಆರ್‌ಬಿಐನ ಆರ್ಥಿಕ ಪರಿಶೀಲನಾ ವರದಿಯು ಪ್ರತಿಪಾದಿಸಿದೆ.

2024–25ನೇ ಹಣಕಾಸು ವರ್ಷದಲ್ಲಿ ಜಿಡಿಪಿ ದರವು ಶೇ 7ರಷ್ಟು ಪ್ರಗತಿ ಕಾಣಲು ಹಣದುಬ್ಬರ, ಬಡ್ಡಿದರ, ವಿದೇಶಿ ವಿನಿಮಯ ದರದಲ್ಲಿ ಸ್ಥಿರತೆ ಕಾಯ್ದುಕೊಳ್ಳಬೇಕಿದೆ. ಈ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದ ವೇಳೆಗೆ ಹಣದುಬ್ಬರವು ತಗ್ಗಬೇಕಿದೆ. ಆಗಷ್ಟೇ ನಿರೀಕ್ಷಿತ ಗುರಿ ಸಾಧನೆ ಸಾಧ್ಯವಾಗಲಿದೆ ಎಂದು ಹೇಳಿದೆ.

ಭವಿಷ್ಯದ ತಾರೆಗಳ ಆಟಕ್ಕೆ ವೇದಿಕೆ

ದಕ್ಷಿಣ ಆಫ್ರಿಕಾ: 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಟೂರ್ನಿ ಇಂದಿನಿಂದ



ದಕ್ಷಿಣ ಆಫ್ರಿಕಾದಲ್ಲಿ ಶುಕ್ರವಾರ ಆರಂಭವಾಗಲಿರುವ 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ತಂಡಗಳ ನಾಯಕರು – ಐಸಿಸಿ ಟ್ವಿಟರ್ ಚಿತ್ರ

ಬ್ಲೂಮ್‌ಫಾಂಟೇನ್, ದಕ್ಷಿಣ ಆಫ್ರಿಕಾ (ಪಿಟಿಐ): ಭವಿಷ್ಯದ ಕ್ರಿಕೆಟ್ ತಾರೆಗಳಾಗಿ ಹೊರಹೊಮ್ಮುವ ಕನಸು ಕಾಣುತ್ತಿರುವ ಯುವ ಆಟಗಾರರು ಶುಕ್ರವಾರ ಆರಂಭವಾಗಲಿರುವ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಭಾರತವು ಈ ಟೂರ್ನಿಯ ಇತಿಹಾಸದಲ್ಲಿ ಅತಿ ಹೆಚ್ಚು ಸಲ ಅಂದರೆ; ಐದು ಬಾರಿ ಚಾಂಪಿಯನ್ ಆಗಿದೆ. ಈ ಟೂರ್ನಿಯಲ್ಲಿ ಆಡಿ ಗಮನ ಸೆಳೆದ ಅನೇಕರು ರಾಷ್ಟ್ರೀಯ ತಂಡದಲ್ಲಿ ಮಿಂಚಿ ಖ್ಯಾತನಾಮರಾಗಿದ್ದಾರೆ.

ಯುವರಾಜ್ ಸಿಂಗ್ (2000), ರೋಹಿತ್ ಶರ್ಮಾ (2006), ವಿರಾಟ್ ಕೊಹ್ಲಿ ಮತ್ತು ರವೀಂದ್ರ ಜಡೇಜ (2008), ರಿಷಭ್ ಪಂತ್ ಮತ್ತು ಇಶಾನ್ ಕಿಶನ್ (2016) ಹಾಗೂ ಶುಭಮನ್ ಗಿಲ್ (2018) ಅದರಲ್ಲಿ ಪ್ರಮುಖರು.

ಇವರಲ್ಲದೇ ರವಿಕಾಂತ್ ಶುಕ್ಲಾ, ಮನೀಷ್ ಪಾಂಡೆ, ಉನ್ಮುಕ್ತ್ ಚಾಂದ್, ಯಶ್ ಧುಳ್, ಮನ್ಜೋತ್ ಕಾಲ್ರಾ ಹಾಗೂ ಕಮಲೇಶ್ ನಾಗರಕೋಟಿ ಕೂಡ ದೇಶದ ತಂಡವನ್ನು ಪ್ರತಿನಿಧಿಸುವ ಮುನ್ನ 19 ವರ್ಷದೊಳಗಿನ ವಿಭಾಗದಿಂದ ಗಮನ ಸೆಳೆದವರು.

ಈ ಬಾರಿ ಒಟ್ಟು 16 ತಂಡಗಳು ಕಣದಲ್ಲಿವೆ. ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿದೆ.

ಪ್ರತಿ ಗುಂಪಿನಿಂದ ಅಗ್ರ ಮೂರು ತಂಡಗಳು ಸೂಪರ್ ಸಿಕ್ಸ್ ಹಂತಕ್ಕೆ ಅರ್ಹತೆ ಪಡೆಯಲಿವೆ.

ಈ ಹಂತದಲ್ಲಿ ಎರಡು ವಿಭಾಗಗಳಲ್ಲಿ ತಲಾ ಆರು ತಂಡಗಳು ಆಡಲಿವೆ.

ಪ್ರತಿ ಗುಂಪಿನಿಂದ ಅಗ್ರ ಎರಡು ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ಏಕದಿನ ಮಾದರಿ ಈ ಟೂರ್ನಿಯಲ್ಲಿ ತಂಡವನ್ನು ಪಂಜಾಬ್ ರಾಜ್ಯದ ಉದಯ ಸಹರಾನ್ ಮುನ್ನಡೆಸಲಿದ್ದಾರೆ.

ಭಾರತ ತಂಡವು ಎ ಗುಂಪಿನಲ್ಲಿ ಸ್ಥಾನ ಪಡೆದಿದೆ. ಶನಿವಾರ ಬಾಂಗ್ಲಾದೇಶದ ಎದುರು ಮೊದಲ ಪಂದ್ಯ ಆಡಲಿದೆ.

ಇದೇ ಗುಂಪಿನಲ್ಲಿ ಅಮೆರಿಕ ಮತ್ತು ಐರ್ಲೆಂಡ್ ತಂಡಗಳು ಇವೆ.

ನ್ಯೂಜಿಲೆಂಡ್ ತಂಡದ ಬೌಲರ್ ರೆಹಮಾನ್ ಹೆಕ್ಮತ್, ಪಾಕಿಸ್ತಾನದ ವೇಗಿ ಉಬೇದ್ ಶಾ, ಅಫ್ಗಾನಿಸ್ತಾನದ ಆಫ್‌ಸ್ಪಿನ್ನರ್ ಅಲ್ಲಾಹ್ ಮೊಹಮ್ಮದ್ ಘಜನಫರ್ ಮತ್ತು ಇಂಗ್ಲೆಂಡ್ ಲೂಕ್ ಬೆಂಕೆನ್‌ಸ್ಟೀನ್ ಅವರ ಮೇಲೂ ಭರವಸೆಯ ನೋಟ ನೆಟ್ಟಿದೆ.

ಭಾರತ ಬಿಟ್ಟರೆ ಆಸ್ಟ್ರೇಲಿಯಾ ಮೂರು ಸಲ ಹಾಗೂ ಪಾಕಿಸ್ತಾನ ಎರಡು ಸಲ ಟ್ರೋಫಿ ಜಯಿಸಿದೆ.

ಹೋದ ಸಲ ಬಾಂಗ್ಲಾ ಗೆದ್ದಿತ್ತು. ದಕ್ಷಿಣ ಆಫ್ರಿಕಾ , ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ತಂಡಗಳು ತಲಾ ಒಂದು ಬಾರಿ ಜಯಿಸಿವೆ.

ಬೆನೊನಿಯಲ್ಲಿ ಫೆಬ್ರುವರಿ 6 ಮತ್ತು 8ರಂದು ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. ಇಲ್ಲಿಯೇ 11ರಂದು ಫೈನಲ್ ಆಯೋಜಿಸಲಾಗಿದೆ.

ಇಂದಿನ ಪಂದ್ಯಗಳು: ಐರ್ಲೆಂಡ್–ಅಮೆರಿಕ, ದಕ್ಷಿಣ ಆಫ್ರಿಕಾ–ವೆಸ್ಟ್ ಇಂಡೀಸ್

ಮಹಿಳಾ ಹಾಕಿ ಕ್ವಾಲಿಫೈಯರ್ ಸೆಮಿಫೈನಲ್: ಜರ್ಮನಿಗೆ ಗೆಲುವು

ಶೂಟ್‌ಔಟ್‌ನಲ್ಲಿ ಭಾರತ ತಂಡ ಪರಾಭವ



ಮಹಿಳೆಯರ ಒಲಿಂಪಿಕ್ ಕ್ವಾಲಿಫೈಯರ್ ಸೆಮಿಫೈನಲ್‌ನಲ್ಲಿ ಭಾರತದ ದೀಪಿಕ್ (ಎಡ) ಮತ್ತು ಸೋನಿಕಾ (ಬಲ) ಅವರು ಚೆಂಡನ್ನು ನಿಯಂತ್ರಣಕ್ಕೆ ಪಡೆಯಲು ಜರ್ಮನಿಯ ಆಟಗಾರ್ತಿಯೊಂದಿಗೆ ಪೈಪೋಟಿ ನಡೆಸಿದರು –ಪಿಟಿಐ ಚಿತ್ರ

ರಾಂಚಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಗುರುವಾರ ಇಲ್ಲಿ ನಡೆದ ಎಫ್‌ಐಎಚ್ ಒಲಿಂಪಿಕ್ ಕ್ವಾಲಿಫೈಯರ್ ಸೆಮಿಫೈನಲ್‌ನಲ್ಲಿ ಜರ್ಮನಿಯ ಎದುರು ಶೂಟ್‌ಔಟ್‌ನಲ್ಲಿ ಸೋತಿತು.

ತುರುಸಿನ ಪೈಪೋಟಿ ನಡೆದ ಸೆಮಿಫೈನಲ್ ಪಂದ್ಯದ ನಿಗದಿಯ ವೇಳೆಯಲ್ಲಿ 2–2ರಿಂದ ಟೈ ಆಯಿತು. ನಂತರ ನಡೆದ ಶೂಟೌಟ್‌ನಲ್ಲಿ ಜರ್ಮನಿ ತಂಡವು 4–3ರಿಂದ ಜಯಗಳಿಸಿತು.

ಈ ಪಂದ್ಯದಲ್ಲಿ ಜಯಿಸಿದ್ದರೆ ಭಾರತ ತಂಡವು ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ಅರ್ಹತೆ ಗಿಟ್ಟಿಸುತ್ತಿತ್ತು. ಇದೀಗ ಒಲಿಂಪಿಕ್ ಪ್ರವೇಶಿಸಲು ಇನ್ನೊಂದು ಅವಕಾಶ ಭಾರತಕ್ಕೆ ಉಳಿದಿದೆ. ಅದಕ್ಕಾಗಿ ಶುಕ್ರವಾರ ನಡೆಯಲಿರುವ ಮೂರು ಮತ್ತು ನಾಲ್ಕನೇ ಸ್ಥಾನ ನಿರ್ಧರಿಸುವ ಪಂದ್ಯದಲ್ಲಿ ಜಪಾನ್ ಎದುರು ಜಯಿಸಬೇಕು. ಟೂರ್ನಿಯಲ್ಲಿ ಅಗ್ರ ಮೂರು ಸ್ಥಾನ ಪಡೆಯುವ ತಂಡಗಳು ಮಾತ್ರ ಪ್ಯಾರಿಸ್ ಟಿಕೆಟ್ ಪಡೆಯಲಿವೆ.

ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತದ ದೀಪಿಕಾ (15ನೇ ನಿಮಿಷ) ಮತ್ತು ಇಷಿಕಾ ಚೌಧರಿ (59ನೇ ನಿಮಿಷ) ಗೋಲು ಗಳಿಸಿದರು. ಜರ್ಮನಿಯ ಶಾರ್ಲೊಟ್ ಸ್ಟೇಫನ್‌ಹಾಸ್ಟ್ (27ನಿ, 57ನಿ) ಎರಡು ಗೋಲು ಹೊಡೆದು ಸಮಬಲ ಸಾಧಿಸಲು ಕಾರಣರಾದರು.

ಜರ್ಮನಿ ಆಟಗಾರ್ತಿಯರು ಪಂದ್ಯದ ಆರಂಭದಿಂದಲೇ ಆಕ್ರಮಣಶೀಲ ಆಟವಾಡಿದರು. ಇದರಿಂದ ಭಾರತ ತಂಡದ ಮೇಲೆ ಒತ್ತಡ ಹೆಚ್ಚಿಸಿದರು. ಆದರೆ ಆತಿಥೇಯರು ತಮಗೆ ಲಭಿಸಿದ ಕೆಲವು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಸುವ ಅವಕಾಶ ತಪ್ಪಿಸಿಕೊಂಡರು. ಶೂಟೌಟ್‌ನಲ್ಲಿ ಭಾರತದ ಗೋಲ್‌ಕೀಪರ್ ಎರಡು ಬಾರಿ ಗೋಲು ತಡೆದು ಜರ್ಮನಿ ಮೇಲೆ ಒತ್ತಡ ಹೆಚ್ಚಿಸಿದರು. ಆದರೆ ನವನೀತ್ ಕೌರ್, ನೇಹಾ ಗೋಯಲ್, ಸಂಗೀತಾ ಕುಮಾರಿ ಮತ್ತು ಸೋನಿಕಾ ಗೋಲು ಗಳಿಕೆಯಲ್ಲಿ ಎಡವಿದರು.

ಟೆನಿಸ್: ರುತುಜಾ ಕ್ವಾರ್ಟರ್‌ಗೆ

ಬೆಂಗಳೂರು: ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ರುತುಜಾ ಭೋಸಲೆ, ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ ಭಾರತದ ಏಕೈಕ ಆಟಗಾರ್ತಿ ಎನಿಸಿದರು. ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ರುತುಜಾ ಗುರುವಾರ ನಡೆದ ಪಂದ್ಯದಲ್ಲಿ 2–1 ಮುನ್ನಡೆಯಲ್ಲಿದ್ದಾಗ ಎಂಟನೇ ಶ್ರೇಯಾಂಕದ ಎದುರಾಳಿ ಅಂಕಿತಾ ರೈನಾ ಅನಾರೋಗ್ಯದ ಕಾರಣ ಹಿಂದೆಸರಿದರು.

ಭಾರತದ ಇನ್ನೊಬ್ಬ ಆಟಗಾರ್ತಿ ವೈದೇಹಿ ಚೌಧರಿ ಹೊರಬಿದ್ದರು. ಕೆರೋಲ್ ಮೊನೆಟ್ (ಫ್ರಾನ್ಸ್) ಅವರು 7–6 (5), 4–6, 4–6 ರಿಂದ ವೈದೇಹಿ ವಿರುದ್ಧ ಜಯಗಳಿಸಿದರು.

ಫಲ ನೀಡಿದ ರೋಹಿತ್ ತಂತ್ರಗಾರಿಕೆ



ರೋಹಿತ್ ಶರ್ಮಾ

ಬೆಂಗಳೂರು: ಬುಧವಾರ ರಾತ್ರಿ ಅಫ್ಗನ್ ವಿರುದ್ಧದ ಮೂರನೇ ಮತ್ತು ಕೊನೆಯ ಟಿ20 ಪಂದ್ಯದಲ್ಲಿ ಮೊದಲ ಸೂಪರ್ ಓವರ್‌ನಲ್ಲಿ ಭಾರತದ ಗೆಲುವಿಗೆ ಎರಡು ರನ್‌ಗಳ ಅಗತ್ಯವಿದ್ದಾಗ ನಾಯಕ ರೋಹಿತ್ ಶರ್ಮಾ ಗಾಯಗೊಂಡು ನಿವೃತ್ತಿಯಾಗಿದ್ದು ಚರ್ಚೆಗೆ ಗ್ರಾಸವಾಗಿದೆ.

ಮೊದಲ ಸೂಪರ್ ಓವರ್‌ನಲ್ಲಿ 16 ರನ್‌ಗಳ ಗುರಿ ಬೆನ್ನಟ್ಟಿದ್ದ ಭಾರತಕ್ಕೆ ಗೆಲ್ಲಲು ಕೊನೆಯ ಎಸೆತದಲ್ಲಿ ಎರಡು ರನ್‌ಗಳ ಅಗತ್ಯವಿತ್ತು.

ಆದರೆ ರೋಹಿತ್ ಕ್ವಿಕ್ ರನ್ ಪಡೆಯಲು ಆಗುವುದಿಲ್ಲವೆಂಬ ಕಾರಣಕ್ಕೆ ಗಾಯಗೊಂಡು ನಿವೃತ್ತರಾಗಿ ಹೊರ ನಡೆದರು. ರಿಂಕು ಸಿಂಗ್ ಕ್ರೀಸ್‌ಗೆ ಬಂದರು. ಆದರೆ ಈ ಓವರ್ ಕೂಡ ಸಮಬಲ ಗೊಂಡಿತು.


ಎರಡನೇ ಸೂಪರ್ ಓವರ್ ಆರಂಭವಾದಾಗ ರೋಹಿತ್ ಮತ್ತೆ ಆಡಿದರು. ಇದು ನಿಯಮಕ್ಕೆ ವಿರುದ್ಧವೇ ಎಂಬ ಚರ್ಚೆ ನಡೆಯಿತು.

‘ಈ ರೀತಿ ಒಂದು ಸೂಪರ್ ಓವರ್ ನಲ್ಲಿ ನಿರ್ಗಮಿಸಿದ ಆಟಗಾರ ಮತ್ತೊಂದು ಸೂಪರ್ ಓವರ್ ನಲ್ಲಿ ಬಂದು ಬ್ಯಾಟಿಂಗ್ ಮಾಡಲು ಅವಕಾಶ ಇದೆ. ಆದರೆ ಅದಕ್ಕೆ ಎದುರಾಳಿ ತಂಡದ ಕೋಚ್ ಅಥವಾ ನಾಯಕ ಸಮ್ಮತಿಸಬೇಕು’ ಎಂದು ತಾಂತ್ರಿಕ ಅಧಿಕಾರಿಯೊಬ್ಬರು ನಿಯಮ ವಿವರಿಸಿದ್ದಾರೆ. ರೋಹಿತ್ ಅವರ ಈ ನಿರ್ಧಾರವನ್ನು ಕೋಚ್ ದ್ರಾವಿಡ್ ಶ್ಲಾಘಿಸಿದರು.

‘ಇದು ಆ್ಯಷ್ ಲೆವೆಲ್ ಯೋಚನೆ. ರೋಹಿತ್ ಅವರು ಪಂದ್ಯದಲ್ಲಿ ತಂಡಕ್ಕೆ ಇರುವ ಅಗತ್ಯವನ್ನು ಚುರುಕಾಗಿ ಗುರುತಿಸಿ ನಿರ್ಧಾರ ತೆಗೆದುಕೊಂಡರು’ ಎಂದರು.

2 ವರ್ಷಗಳ ಹಿಂದೆ ಐಪಿಎಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ನಡುವಣ ಪಂದ್ಯದಲ್ಲಿ ಆರ್. ಅಶ್ವಿನ್ (ಆ್ಯಷ್) ಇಂತಹದೇ ತಂತ್ರ ಹೂಡಿದ್ದನ್ನು ದ್ರಾವಿಡ್ ನೆನಪಿಸಿದರು.

ಜೈಪುರ ರಾಷ್ಟ್ರೀಯ ಕುಸ್ತಿ ಟೂರ್ನಿಯಲ್ಲಿ ಸ್ಪರ್ಧಿಸಿ: ಸಾಕ್ಷಿ



ಸಾಕ್ಷಿ ಮಲಿಕ್

ನವದೆಹಲಿ (ಪಿಟಿಐ): ‘ಭಾರತ ಕುಸ್ತಿ ಫೆಡರೇಷನ್‌ನ ಅಡ್‌ಹಾಕ್ ಸಮಿತಿಯು ಜೈಪುರದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕುಸ್ತಿಪಟುಗಳು ಸ್ಪರ್ಧಿಸಲಿ. ಆದರೆ ಅಮಾನತುಗೊಂಡಿರುವ ಸಂಜಯ್ ಸಿಂಗ್ ನೇತೃತ್ವದ ಸಮಿತಿಯು ಪುಣೆಯಲ್ಲಿ ನಡೆಸಲಿರುವ ಟೂರ್ನಿಯಲ್ಲಿ ಬೇಡ’ ಎಂದು ಒಲಿಂಪಿಯನ್ ಸಾಕ್ಷಿ ಮಲಿಕ್ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹೇಳಿಕೆ ನೀಡಿರುವ ಅವರು, ‘ಅಡ್‌ಹಾಕ್ ಸಮಿತಿ ನಡೆಸಲಿರುವ ಟೂರ್ನಿಯು ಅಧಿಕೃತವಾಗಿದೆ. ಅಮಾನತುಗೊಂಡಿರುವ ಸಮಿತಿಯಿಂದ ನಡೆಸುವ ಟೂರ್ನಿಯಲ್ಲಿ ಭಾಗವಹಿಸಬೇಡಿ’ ಎಂದಿದ್ದಾರೆ.

ಜೈಪುರದಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಫೆ.2ರಿಂದ 5ರ ವರೆಗೆ ನಡೆಯಲಿದೆ. ಆದರೆ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳನ್ನು ತರಾತುರಿಯಲ್ಲಿ ಘೋಷಿಸಿದ್ದು ನಿಯಮಬಾಹಿರ ಎಂದು ಆಕ್ಷೇಪಿಸಿದ್ದ ಕೇಂದ್ರ ಕ್ರೀಡಾ ಸಚಿವಾಲಯವು ಸಂಜಯ್ ಅಧ್ಯಕ್ಷತೆಯ ಆಡಳಿತ ಸಮಿತಿಯನ್ನು ಅಮಾನತುಗೊಳಿಸಿತ್ತು. ಇದರಿಂದಾಗಿ ಭಾರತ ಒಲಿಂಪಿಕ್ ಸಂಸ್ಥೆ (ಐಒಎ)ಯು ಭೂಪಿಂದರ್ ಸಿಂಗ್ ಬಜ್ವಾ ನೇತೃತ್ವದ ಅಡ್‌ಹಾಕ್ ಸಮಿತಿಯನ್ನು ರಚಿಸಿತ್ತು.

ಆದರೆ ಕೆಲವು ಕುಸ್ತಿಪಟುಗಳು ಪುಣೆಯಲ್ಲಿ ನಡೆಯಲಿರುವ ಟೂರ್ನಿಗೆ ಹೋಗುವುದಾಗಿ ಈಗಾಗಲೇ ಘೋಷಿಸಿದ್ದಾರೆ.

‘ಡಬ್ಲ್ಯುಎಫ್‌ಐ ಪುಣೆಯಲ್ಲಿ ಸಂಘಟಿಸಲಿರುವ ಟೂರ್ನಿಯಲ್ಲಿ ಆಡುತ್ತೇವೆ. ನಮ್ಮ ಅಖಾಡದ ಎಲ್ಲರೂ ಅಲ್ಲಿಗೆ ಹೋಗುತ್ತೇವೆ. ಈ ವಿವಾದವು ಹರಿಯಾಣಕ್ಕೆ ಮಾತ್ರ ಸೀಮಿತವಾಗಿದೆ. ದೆಹಲಿ, ಪಂಜಾಬ್ ಮತ್ತು ರಾಜಸ್ಥಾನದ ಎಲ್ಲ ಕುಸ್ತಿಪಟುಗಳೂ ಪುಣೆಗೆ ಹೋಗುತ್ತಿದ್ದಾರೆ’ ಎಂದು ರೋಹ್ತಕ್‌ನ ಹೆಸರು ಹೇಳಲು ಇಚ್ಛಿಸದ ಮಹಿಳಾ ಕುಸ್ತಿಪಟು ಹೇಳಿದ್ದಾರೆ.

ಟೆನಿಸ್: ಇತಿಹಾಸದಲ್ಲೇ ಅತಿ ದೀರ್ಘ ಟೈಬ್ರೇಕರ್

ಬ್ಲಿಂಕೊವಾಗೆ ಮಣಿದ ರಿಬಾಕಿನಾ



ಅನ್ನಾ ಬ್ಲಿಂಕೊವಾ, ಎಎಫ್‌ಪಿ ಚಿತ್ರ

ಮೆಲ್ಬರ್ನ್: ಮಹಿಳಾ ಗ್ರ್ಯಾಂಡ್‌ಸ್ಲಾಮ್ ಇತಿಹಾಸದಲ್ಲೇ ಅತ್ಯಂತ ದೀರ್ಘ ಟೈಬ್ರೇಕರ್‌ವರೆಗೆ ಬೆಳೆದ ಪಂದ್ಯದಲ್ಲಿ ಎಲೆನಾ ರಿಬಾಕಿನಾ ಅವರನ್ನು ಪರಾಭವಗೊಳಿಸಿದ ಅನ್ನಾ ಬ್ಲಿಂಕೊವಾ, ಆಸ್ಟ್ರೇಲಿಯನ್ ಓಪನ್ ಟೂರ್ನಿಯ ನಾಲ್ಕನೇ ಸುತ್ತಿಗೆ ಮುನ್ನಡೆದರು. 9 ಬಾರಿ ಮ್ಯಾಚ್ ಪಾಯಿಂಟ್ ಅವಕಾಶ ಕಳೆದುಕೊಂಡ, ಆರು ಬಾರಿ ಉಳಿಸಿಕೊಂಡ ಬ್ಲಿಂಕೊವಾ ಗುರುವಾರ ದೊಡ್ಡ ಅನಿರೀಕ್ಷಿತ ಫಲಿತಾಂಶಕ್ಕೆ ಕಾರಣರಾದರು.

ಕಳೆದ ವರ್ಷ ಈ ಟೂರ್ನಿಯ ಫೈನಲ್ ತಲುಪಿದ್ದ ರಿಬಾಕಿನಾ, ಅಂಕಣದ ಇನ್ನೊಂದು ಬದಿ ಅಷ್ಟೇ ನರ್ವಸ್ ಆಗಿದ್ದರು. ಅಂತಿಮವಾಗಿ ಬ್ಲಿಂಕೊನಾ 6–4, 4–6, 7–6 (20) ರಿಂದ ಜಯಗಳಿಸಿದರು. ಟೈಬ್ರೇಕರ್ 42 ಪಾಯಿಂಟ್‌ಗಳನ್ನು ಕಂಡಿತು. 2022ರ ವಿಂಬಲ್ಡನ್ ಚಾಂಪಿಯನ್ ಸಹ ಆಗಿರುವ ರಿಬಾಕಿನಾ, ಕಳೆದ ವರ್ಷ ಇಲ್ಲಿ ಅರಿನಾ ಸಬಲೆಂಕಾ ಎದುರು ಸೋತಿದ್ದರು. ಅವರು ಆರು ಸರ್ವಿಸ್ ಬ್ರೇಕ್‌ಗಳನ್ನು ಕಂಡ ಮೂರನೇ ಸೆಟ್‌ನಲ್ಲಿ ಎರಡು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿದ್ದರು. ‘ನನ್ನಿಂದಾದಷ್ಟು ಶಾಂತಚಿತ್ತಳಾಗಿ ಆಡಲು ಪ್ರಯತ್ನಿಸಿದೆ’ ಎಂದು ಬ್ಲಿಂಕೋವಾ ಹೇಳಿದರು.

ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ರಾಡ್ ಲೇವರ್ ಅರೇನಾದಲ್ಲಿ ನಡೆದ ದಿನದ ಮೊದಲ ಪಂದ್ಯದಲ್ಲಿ 6–4, 3–6, 6–4 ರಿಂದ 2022ರ ರನ್ನರ್ ಅಪ್ ಡೇನಿಯಲಿ ಕಾಲಿನ್ಸ್ ಅವರನ್ನು 6–4, 3–6, 6–4 ರಿಂದ ಸೋಲಿಸಿದರು. ಮೂರನೇ ಸೆಟ್‌ನಲ್ಲಿ ಶ್ವಾಂಟೆಕ್ 1–4 ಹಿನ್ನಡೆಯಿಂದ ಚೇತರಿಸಿ ಜಯಗಳಿಸಿದ್ದು ವಿಶೇಷವಾಗಿತ್ತು.

ಐದನೇ ಶ್ರೇಯಾಂಕದ ಜೆಸಿಕಾ ಪೆಗುಲಾ ಮತ್ತು 2021ರ ಅಮೆರಿಕ ಓಪನ್ ಚಾಂಪಿಯನ್ ಎಮ್ಮಾ ರಾಡುಕಾನು ಅವರು ಹೊರಬಿದ್ದರು.

ವಿಂಬಲ್ಡನ್ ಚಾಂಪಿಯನ್ ಕಾರ್ಲೋಸ್ ಅಲ್ಕರಾಝ್ 6–4, 6–7 (3), 6–3, 7–6 (3) ರಿಂದ ಲೊರೆಂಝೊ ಸೊನೆಗೊ ಅವರನ್ನು ಸೋಲಿಸಿದರು. ಮೊದಲ ಬಾರಿ ಅವರು ಈ ಟೂರ್ನಿಯಲ್ಲಿ ಸೆಟ್ ಕಳೆದು ನಗಾಲ್ ಸವಾಲು ಅಂತ್ಯ

ನಗಾಲ್ ಸವಾಲು ಅಂತ್ಯ: ಭಾರತದ ಸುಮಿತ್ ನಗಾಲ್ ಅವರ ಸವಾಲನ್ನು ಬದಿಗೊತ್ತಿದ ಚೀನಾದ ಪ್ರತಿಭಾನ್ವಿತ ಜುನ್‌ಚೆಂಗ್ ಶಾಂಗ್ ಆಸ್ಟ್ರೇಲಿಯನ್ ಓಪನ್ ಟೆನಿಸ್ ಚಾಂಪಿಯನ್‌ಷಿಪ್‌ನ ಮೂರನೇ ಸುತ್ತನ್ನು ತಲುಪಿದರು. ಆ ಮೂಲಕ ವರ್ಷದ ಮೊದಲ ಗ್ರ್ಯಾಂಡ್‌ಸ್ಲಾಮ್ ಟೂರ್ನಿಯಲ್ಲಿ ಭಾರತದ ಆಟಗಾರನ ಸ್ಫೂರ್ತಿಯುತ ಓಟಕ್ಕೆ ಗುರುವಾರ ತೆರೆಬಿತ್ತು.

26 ವರ್ಷದ ನಗಾಲ್ ವಿರುದ್ಧ 18 ವರ್ಷದ ಆಟಗಾರ ಶಾಂಗ್ 2–6 6–3, 7–5, 6–4 ರಿಂದ ಗೆದ್ದರು.

ಬೋಪಣ್ಣ–ಎಬ್ಡೆನ್ ಮುನ್ನಡೆ: ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯಾ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಪುರುಷರ ಡಬಲ್ಸ್ ಮೂರನೇ ಸುತ್ತನ್ನು ತಲುಪಿದರು. ಅವರು ಮೊದಲ ಸೆಟ್‌ನ 0–5 ಹಿನ್ನಡೆಯಿಂದ ಚೇತರಿಸಿಕೊಂಡು 7–6 (7), 4–6, 7–6 (10) ರಿಂದ ಸ್ಥಳೀಯ ಆಟಗಾರರಾದ ಜೇಮ್ಸ್ ಡಕ್‌ವರ್ತ್–ಮಾರ್ಕ್ ಪೋಲ್ಮನ್ಸ್ ಜೋಡಿಯನ್ನು ಮಣಿಸಿದರು.

ಒನ್ ವರ್ಲ್ಡ್ ಒನ್ ಫ್ಯಾಮಿಲಿ ಕಪ್: ದಿಗ್ಗಜ ಕ್ರಿಕೆಟಿಗರ ಭರಾಟೆ

‘ಸತ್ಯಸಾಯಿ’ ಅಂಗಳದಲ್ಲಿ ಸಚಿನ್ ಆಟದ ಸೊಬಗು

● ಪ್ರದೀಶ್ ಎಚ್. ಮರೋಡಿ



ಸಚಿನ್ ತೆಂಡೂಲ್ಕರ್ ಬ್ಯಾಟಿಂಗ್ ವೈಖರಿ.

ಚಿಕ್ಕಬಳ್ಳಾಪುರ: ಕ್ರಿಕೆಟ್ ದಂತಕಥೆ ಸಚಿನ್ ತೆಂಡೂಲ್ಕರ್, ಯುವರಾಜ್ ಸಿಂಗ್ ಹಾಗೂ ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಸೇರಿದಂತೆ ಕೆಲವು ಖ್ಯಾತನಾಮ ಕ್ರಿಕೆಟಿಗರು ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಪ್ರೇಕ್ಷಕರಿಗೆ ಕ್ರಿಕೆಟ್‌ನ ರಸದೌತಣ ಉಣಬಡಿಸಿದರು.

‘ಒನ್ ವರ್ಲ್ಡ್ ಒನ್ ಫ್ಯಾಮಿಲಿ ಕಪ್’ ಪ್ರದರ್ಶನ ಟಿ20 ಪಂದ್ಯದಲ್ಲಿ ಸಚಿನ್ ಸಾರಥ್ಯದ ‘ಒನ್ ವರ್ಲ್ಡ್’ 4 ವಿಕೆಟ್‌ಗಳಿಂದ ಯುವರಾಜ್ ನಾಯಕತ್ವದ ‘ಒನ್ ಫ್ಯಾಮಿಲಿ’ ವಿರುದ್ಧ ಗೆದ್ದಿತು.

ಮೊದಲು ಬ್ಯಾಟಿಂಗ್ ಮಾಡಿದ ಒನ್ ಫ್ಯಾಮಿಲಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 180 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಸಚಿನ್ ಬಳಗವು ಒಂದು ಎಸೆತ ಬಾಕಿ ಇರುವಂತೆ 6 ವಿಕೆಟ್‌ಗಳಿಗೆ 184 ರನ್ ಗಳಿಸಿ ಜಯಿಸಿತು. ‘ಸಾಯಿಕೃಷ್ಣ’ ಕ್ರೀಡಾಂಗಣದ ಲೋಕಾರ್ಪಣೆಯ ಪ್ರಯುಕ್ತ ನಡೆದ ಪಂದ್ಯದಲ್ಲಿ ವಿವಿಧ ದೇಶಗಳ 22 ಮಾಜಿ ಕ್ರಿಕೆಟಿಗರು ಕಣದಲ್ಲಿದ್ದರು. ಸಚಿನ್, ಒಂದು ಭರ್ಜರಿ ಸಿಕ್ಸರ್ ಮತ್ತು ಮೂರು ಬೌಂಡರಿ ಗಳಿಸಿದರು. 16 ಎಸೆತಗಳಲ್ಲಿ 27 ರನ್ ಹೊಡೆದರು. ಮುತ್ತಯ್ಯ ಮುರಳೀಧರನ್ ಅವರ ಬೌಲಿಂಗ್‌ನಲ್ಲಿ ಮೊಹಮ್ಮದ್ ಕೈಫ್ ಅವರಿಗೆ ಕ್ಯಾಚಿತ್ತರು.

ಪೀಟರ್ಸನ್ 50 ಎಸೆತಗಳಲ್ಲಿ ಮೂರು ಸಿಕ್ಸರ್ ಮತ್ತು ಐದು ಬೌಂಡರಿ ಸೇರಿದಂತೆ 74 ರನ್ ಗಳಿಸಿದರು. ಕೊನೆಯ ಎರಡು ಎಸೆತಗಳಲ್ಲಿ ಮೂರು ರನ್ ಅಗತ್ಯವಿದ್ದಾಗ ಕ್ರೀಸ್‌ನಲ್ಲಿದ್ದ ಇರ್ಫಾನ್ ಪಠಾಣ್ ತಮ್ಮ ಸಹೋದರ ಯೂಸುಫ್ ಅವರ ಎಸೆತವನ್ನು ಸಿಕ್ಸರ್ ಗೆತ್ತಿದರು.

ಸಂಕ್ಷಿಪ್ತ ಸ್ಕೋರ್: ಒನ್ ಫ್ಯಾಮಿಲಿ: 20 ಓವರ್‌ಗಳಲ್ಲಿ 6ಕ್ಕೆ180 (ಡ್ಯಾರೆನ್ ಮ್ಯಾಡಿ 51, ಯೂಸುಫ್ ಪಠಾಣ್ 38; ಹರ್ಭಜನ್ ಸಿಂಗ್ 30ಕ್ಕೆ 3). ಒನ್ ವರ್ಲ್ಡ್: 19.5 ಓವರ್‌ಗಳಲ್ಲಿ 6ಕ್ಕೆ 184 (ಅಲ್ವಿರೋ ಪೀಟರ್ಸನ್ 74, ಸಚಿನ್ 27, ಚಮಿಂದಾ ವಾಸ್ 46ಕ್ಕೆ 3). **ಫಲಿತಾಂಶ:** ಒನ್ ವರ್ಲ್ಡ್ ತಂಡಕ್ಕೆ 4 ವಿಕೆಟ್ ಜಯ.

ಸಂಕ್ಷಿಪ್ತ ಸುದ್ದಿ

ಮುಂಬೈ ಮೇಲುಗೈ

ಬೆಂಗಳೂರು: ನಾಯಕ ಹಾಗೂ ವಿಕೆಟ್ ಕೀಪರ್ ಆರ್ಯನ್ ಸಕ್ಪಾಲ್ ಅವರ ಅಮೋಘ ಶತಕದ (127, 4x13, 6x3) ನೆರವಿನಿಂದ ಮುಂಬೈ ತಂಡ, ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಫೈನಲ್ ಪಂದ್ಯದ ಎರಡನೇ ದಿನವಾದ ಗುರುವಾರ ಗುಜರಾತ್ ವಿರುದ್ಧ 7 ವಿಕೆಟ್‌ಗೆ 331 ರನ್‌ಗಳೊಡನೆ ದಿನದಾಟ ಪೂರೈಸಿತು.

ಆ ಮೂಲಕ 186 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಸಂಪಾದಿಸಿದೆ. ಸ್ಕೋರುಗಳು: 1ನೇ ಇನಿಂಗ್ಸ್: ಗುಜರಾತ್: 45.4 ಓವರುಗಳಲ್ಲಿ 145, ಮುಂಬೈ: 134 ಓವರುಗಳಲ್ಲಿ 7 ವಿಕೆಟ್‌ಗೆ 331 (ಆರ್ಯನ್ ಸಕ್ಪಾಲ್ 127, ಹರ್ಷ್ ಉದಯ್ ಗಾಯ್ಕರ 69, ಹರ್ಷವರ್ಧನ್ 42, ಸಾರ್ಥಕ್ ಭಿಡೆ ಔಟಾಗದೇ 40; ಕಾವ್ಯ ಪಿ. ಪಟೇಲ್ 38ಕ್ಕೆ4, ಕೇವಲ್ ಪಟೇಲ್ 65ಕ್ಕೆ2).

ಚೆಸ್ ಆಟಗಾರ ರಮೇಶ್ ನಿಧನ



ರಮೇಶ್ ಕೃಷ್ಣರಾವ್

ಮೈಸೂರು: ರಾಷ್ಟ್ರೀಯ ಚೆಸ್ ಆಟಗಾರರಾಗಿದ್ದ ರಮೇಶ್ ಕೃಷ್ಣರಾವ್ (64) ಅವರು ಜಯನಗರದ ತಮ್ಮ ಮನೆಯಲ್ಲಿ ಬುಧವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಚೆಸ್ ರಾಷ್ಟ್ರೀಯ ಆಟಗಾರ ಕಾರ್ತಿಕ್ ರಮೇಶ್ ಇದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಗುರುವಾರ ಬೆಳಿಗ್ಗೆ ನಡೆಯಿತು.

ಸರ್ಕಾರಿ ಉದ್ಯೋಗಿಗಳ ಚೆಸ್ ಚಾಂಪಿಯನ್‌ಷಿಪ್ ನಲ್ಲಿ ಸತತ 10 ಬಾರಿ ಚಾಂಪಿಯನ್ ಆಗಿದ್ದರು.

ರಾಷ್ಟ್ರೀಯ ‘ಬಿ’ ಆಟಗಾರರಾಗಿದ್ದ ಅವರು, ಮೈಸೂರಿನಲ್ಲಿ ಚೆಸ್ ಸಂಸ್ಕೃತಿ ಬೆಳೆಸಲು ‘ಮೈಸೂರು ಜಿಲ್ಲಾ ಚೆಸ್ ಅಸೋಸಿಯೇಷನ್’ ಅನ್ನು ಅಭಿವೃದ್ಧಿಪಡಿಸಿದ್ದರು. ಗ್ರ್ಯಾಂಡ್‌ಮಾಸ್ಟರ್ ಗಿರೀಶ್ ಕೌಶಿಕ್ ಅವರಿಗೆ ಕೋಚ್ ಆಗಿದ್ದರು.

ಮಣಿಪುರ ಹಿಂಸಾಚಾರ: ಐದು ಮಂದಿ ಸಾವು

ನಿಂಗ್‌ತೌಖೋಂಗ್ ಖಖುನೌ ಮತ್ತು ಕಾಂಗ್‌ಚುಪ್‌ನಲ್ಲಿ ನಡೆದ ಪ್ರತ್ಯೇಕ ಘಟನೆಗಳು

ಪ್ರಜಾವಾಣಿ ವಾರ್ತೆ/ಪಿಟಿಐ

ಗುವಾಹಟಿ/ಇಂಫಾಲ್: ಸಂಘರ್ಷ ಪೀಡಿತ ಮಣಿಪುರದಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದ್ದು, ಕಳೆದ 24 ಗಂಟೆಗಳಲ್ಲಿ ನಡೆದ ಮೂರು ಪ್ರತ್ಯೇಕ ಘಟನೆಗಳಲ್ಲಿ ತಂದೆ– ಮಗ ಸೇರಿದಂತೆ ಐವರು ಮೃತಪಟ್ಟಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ.

ಮೈತೇಯಿ ಸಮುದಾಯ ಪ್ರಾಬಲ್ಯ ವಿರುವ ಬಿಷ್ಣುಪುರ ಜಿಲ್ಲೆಯ ನಿಂಗ್‌ತೌಖೋಂಗ್ ಖಖುನೌ ಗ್ರಾಮದ ಮೇಲೆ ಸಂಜೆ 4.30ರ ಸುಮಾರಿಗೆ ದಾಳಿ ನಡೆಸಿದ ಶಂಕಿತ ಉಗ್ರರು, ತಂದೆ– ಮಗ ಸೇರಿ ಮೂವರನ್ನು ಕೊಂದಿದ್ದಾರೆ. ಈ ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೃತರನ್ನು ಓಯಿನಮ್ ಬಮೊಯಿಜಾವೊ (61), ಅವರ ಗಮನ ಓಯಿನಮ್ ಮಣಿತೊಂಬಾ ಮತ್ತು ಅವರ ನೆರೆ ಮನೆಯ ಥಿಯಮ್ ಸೋಮನ್ ಎಂದು ಗ್ರಾಮಸ್ಥರು ಗುರುತಿಸಿದ್ದಾರೆ. ಈ ಮೂವರು ಮೈತೇಯಿ ಸಮುದಾಯಕ್ಕೆ ಸೇರಿದವರು. ಈ ಗ್ರಾಮವು ಕುಕಿ ಸಮುದಾಯದವರು ಪ್ರಾಬಲ್ಯವಿರುವ ಚುರಚಂದಪುರ ಜಿಲ್ಲೆಗೆ ಹೊಂದಿಕೊಂಡಿದೆ.

ಸ್ವಯಂ ಸೇವಕ ಸಾವು: ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಎರಡು ಸಮುದಾಯಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಗ್ರಾಮ ಸ್ವಯಂ ಸೇವಕರೊಬ್ಬರು ಮೃತಪಟ್ಟಿದ್ದಾರೆ. ಮೃತರನ್ನು ಮೈತೇಯಿ ಸಮುದಾಯದ ಟಿ. ಮನೋರಂಜನ್ (26) ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಸಮೀಪದ ಗುಡ್ಡಗಾಡು ಪ್ರದೇಶಗಳಿಂದ ಬಂದಿದ್ದ ಶಂಕಿತ ಉಗ್ರರು ಬುಧವಾರ ರಾತ್ರಿ ಕಾಂಗ್‌ಚುಪ್ ಪ್ರದೇಶದ ಮೇಲೆ ದಾಳಿ ನಡೆಸಿದರು. ಅದಕ್ಕೆ ಎದುರಾಗಿ ಗ್ರಾಮ ಸ್ವಯಂ ಸೇವಕರು ಪ್ರತಿದಾಳಿ ನಡೆಸಿದಾಗ ಈ ಘಟನೆ ನಡೆದಿದೆ ಎಂದು ಹೇಳಿದ್ದಾರೆ.

> **ಮಣಿಪುರದ ಗಡಿ ಪಟ್ಟಣ ಮೋರೆಯಲ್ಲಿ ಕಮಾಂಡೊಗಳ ಮೇಲಿನ ದಾಳಿಯಲ್ಲಿ ಮ್ಯಾನ್ಮಾರ್‌ನ ಕೆಲವು ಉಗ್ರರು ಭಾಗಿಯಾಗಿರಬಹುದು ಎಂಬ ಶಂಕೆಯಿದೆ**
> **ಕುಲದೀಪ್ ಸಿಂಗ್,** ಮಣಿಪುರದ ಭದ್ರತಾ ಸಲಹೆಗಾರ

ಪ್ರತಿಭಟನೆ: ಇದರ ಬೆನ್ನಲ್ಲೇ, ಭಾರಿ ಸಂಖ್ಯೆಯಲ್ಲಿ ಮಹಿಳೆಯರಿದ್ದ ಗುಂಪು ಇಂಫಾಲ್‌ನಲ್ಲಿ ರ್‍ಯಾಲಿ ನಡೆಸಿ ಹಿಂಸಾಚಾರವನ್ನು ಖಂಡಿಸಿದೆ. ಪ್ರತಿಭಟನಕಾರರ ಮೆರವಣಿಗೆಯು ರಾಜಭವನದ ಕಡೆಗೆ ಸಾಗುತ್ತಿದ್ದಾಗ, ಭದ್ರತಾ ಸಿಬ್ಬಂದಿ ಅವರನ್ನು ತಡೆದರು. ಈ ವೇಳೆ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆದು, ಪರಿಸ್ಥಿತಿ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿತು. ಆಗ ಗುಂಪನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಸ್‌ಎಫ್‌ನ ಮೂವರಿಗೆ ಗುಂಡೇಟು

ಇಂಫಾಲ್ (ಪಿಟಿಐ): ಮಣಿಪುರದ ಥೌಬಲ್ ಜಿಲ್ಲೆಯಲ್ಲಿ ಬುಧವಾರ ತಡರಾತ್ರಿ ಬಂದೂಕುಧಾರಿಗಳು ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಇದರಲ್ಲಿ ಬಿಎಸ್‌ಎಫ್‌ನ ಮೂವರು ಸಿಬ್ಬಂದಿಗೆ ಗುಂಡು ತಾಗಿದ್ದು, ಅವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಥೌಬಲ್ ಪೊಲೀಸ್ ಪ್ರಧಾನ ಕಚೇರಿಯ ಮೇಲೆ ದಾಳಿ ನಡೆಸಿದ ಗುಂಪಿನಲ್ಲಿದ್ದ ಬಂದೂಕುಧಾರಿಗಳು ಭದ್ರತಾ ಸಿಬ್ಬಂದಿ ಮೇಲೆ ಗುಂಡು ಹಾರಿಸಿದರು. ಮೊದಲಿಗೆ ಈ ಗುಂಪು ಥೌಬಲ್ ಜಿಲ್ಲೆಯ ಖಂಗಾಬೊಕ್‌ನಲ್ಲಿರುವ ಭಾರತೀಯ ಮೀಸಲು ಪಡೆಯ ಮೂರನೇ ಬೆಟಾಲಿಯನ್ ಅನ್ನು ಗುರಿಯಾಗಿಸಿತ್ತು. ಅಲ್ಲಿ ಭದ್ರತಾ ಪಡೆಗಳು ಈ ಗುಂಪನ್ನು ಹಿಮ್ಮೆಟ್ಟಿಸಿತ್ತು. ಬಳಿಕ ಈ ಗುಂಪು ಪೊಲೀಸ್ ಪ್ರಧಾನ ಕಚೇರಿಯತ್ತ ಸಾಗಿತು. ಇದರಲ್ಲಿದ್ದ ಬಂದೂಕುಧಾರಿಗಳು ಅಲ್ಲಿ ಗುಂಡು ಹಾರಿಸಿದರು ಎಂದು ಅವರು ಹೇಳಿದ್ದಾರೆ.

ಗಾಯಗೊಂಡ ಬಿಎಸ್‌ಎಫ್ ಸಿಬ್ಬಂದಿಯನ್ನು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಈ ಘಟನೆಯ ಬಳಿಕ ಥೌಬಲ್‌ನಲ್ಲಿ ಜಿಲ್ಲಾಡಳಿತ ಕರ್ಫ್ಯೂ ಜಾರಿಗೊಳಿಸಿದೆ.

ಮೊರೆ ಎಂಬಲ್ಲಿ ಬುಧವಾರ ಶಸ್ತ್ರಸಜ್ಜಿತ ಬಂಡುಕೋರರು ನಡೆಸಿದ ದಾಳಿಯಲ್ಲಿ ಮಣಿಪುರ ಪೊಲೀಸ್ ಕಮಾಂಡೊದ ಇಬ್ಬರು ಮೃತಪಟ್ಟಿದ್ದರು. ಮತ್ತಿಬ್ಬರು ಗುಂಡೇಟಿನಿಂದ ಗಾಯಗೊಂಡಿದ್ದರು. ಅದರ ಬೆನ್ನಲ್ಲೇ ತೌಬಲ್‌ನಲ್ಲಿ ಭದ್ರತಾ ಪಡೆಗಳ ಮೇಲೆ ದಾಳಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಚಿಂಗ್: ಮಾರ್ಗಸೂಚಿ ಪ್ರಕಟ

ಒಂದನೇ ಪುಟದಿಂದ

ಮಾರ್ಗಸೂಚಿಯಲ್ಲಿ ಏನೇನಿದೆ:

- ಯಾವುದೇ ಕೋಚಿಂಗ್ ಕೇಂದ್ರಗಳು ಪದವಿಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿರುವವರನ್ನು ಬೋಧಕರನ್ನಾಗಿ ನೇಮಿಸಿಕೊಳ್ಳುವಂತಿಲ್ಲ. ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವ ಸಂಸ್ಥೆಗಳು ಪೋಷಕರಿಗೆ ತಪ್ಪು ದಾರಿಗೆಳೆಯುವಂತಹ ಭರವಸೆಗಳನ್ನು ನೀಡುವಂತಿಲ್ಲ. 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳುವಂತಿಲ್ಲ. 10ನೇ ತರಗತಿಯ ಅಂತಿಮ ಪರೀಕ್ಷೆ ಬರೆದ ಬಳಿಕವಷ್ಟೇ ವಿದ್ಯಾರ್ಥಿಯನ್ನು ದಾಖಲಿಸಿಕೊಳ್ಳಬೇಕು.
- ಕೇಂದ್ರಗಳಲ್ಲಿನ ತರಬೇತಿಯ ಗುಣಮಟ್ಟ ಅಥವಾ ಲಭ್ಯವಿರುವ ಸೌಲಭ್ಯ ಅಥವಾ ವಿದ್ಯಾರ್ಥಿಗಳು ಪಡೆದ ಫಲಿತಾಂಶಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿ ತಪ್ಪು ಮಾಹಿತಿ ನೀಡುವ ಜಾಹೀರಾತುಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಕಟಿಸುವಂತಿಲ್ಲ.
- ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ವ್ಯಕ್ತಿಯನ್ನು ಬೋಧಕನೆಂದು ನೇಮಿಸಿಕೊಳ್ಳುವಂತಿಲ್ಲ.
- ಪ್ರತಿ ಕೋಚಿಂಗ್ ಕೇಂದ್ರಗಳು ತಮ್ಮದೇ ಆದ ವೆಬ್‌ಸೈಟ್ ಹೊಂದಿರಬೇಕು. ಅದರಲ್ಲಿ ತನ್ನ ಎಲ್ಲ ಬೋಧಕರ ಅರ್ಹತೆ, ಲಭ್ಯವಿರುವ ಕೋರ್ಸ್‌ಗಳು, ಅದರ ಅವಧಿ, ಪಠ್ಯಕ್ರಮ, ಹಾಸ್ಟೆಲ್ ಸೌಲಭ್ಯ, ಪರಿಷ್ಕರಿಸಿದ ಶುಲ್ಕ ವಿವರಗಳನ್ನು ಪ್ರಕಟಿಸಬೇಕು.
- ಕಲಿಕೆಯಿಂದ ವಿದ್ಯಾರ್ಥಿಗಳು ಒತ್ತಡಕ್ಕೆ ಸಿಲುಕದಂತೆಯೂ ಕೋಚಿಂಗ್ ಕೇಂದ್ರಗಳು ನೋಡಿಕೊಳ್ಳಬೇಕು. ಅಲ್ಲದೆ ಮನೋವೈದ್ಯರು ಮತ್ತು ನುರಿತ ಸಮಾಲೋಚಕರ ಹೆಸರು ಮತ್ತು ಅವರು ಲಭ್ಯವಿರುವ ಸಮಯದ ಮಾಹಿತಿಯನ್ನು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ನೀಡಬೇಕು. ಈ ಮೂಲಕ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಮಾರ್ಗದರ್ಶನ ದೊರೆಯುವಂತೆ ನೋಡಿಕೊಳ್ಳಬೇಕು.
- ವಿವಿಧ ಕೋರ್ಸ್‌ಗಳಿಗೆ ವಿಧಿಸುವ ಬೋಧನಾ ಶುಲ್ಕ ನ್ಯಾಯೋಚಿತ ಮತ್ತು ಸಮಂಜಸವಾಗಿರಬೇಕು. ಈ ಶುಲ್ಕಕ್ಕೆ ಸರಿಯಾದ ರಸೀದಿಗಳನ್ನು ನೀಡಬೇಕು.
- ಯಾವುದೇ ಕೋರ್ಸ್‌ಗೆ ಪೂರ್ಣ ಶುಲ್ಕ ಪಾವತಿಸಿದ ವಿದ್ಯಾರ್ಥಿಯೂ ಕೋರ್ಸ್ ಅನ್ನು ಅರ್ಧಕ್ಕೆ ಮೊಟಕುಗೊಳಿಸಿದರೆ, ಉಳಿದ ಮೊತ್ತವನ್ನು ಲೆಕ್ಕ ಹಾಕಿ, 10 ದಿನಗಳಲ್ಲಿ ಮರುಪಾವತಿಸಬೇಕು. ಅಂತೆಯೇ ವಿದ್ಯಾರ್ಥಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದರೆ ಹಾಸ್ಟೆಲ್ ಶುಲ್ಕ, ಮೆಸ್ ಶುಲ್ಕ ಇತ್ಯಾದಿಗಳನ್ನೂ ಮರು ಪಾವತಿಸಬೇಕು.
- **ದಂಡ:** ಅತಿಯಾದ ಶುಲ್ಕ ವಿಧಿಸುವ, ವಿದ್ಯಾರ್ಥಿಗಳ ಆತ್ಮಹತ್ಯೆ ಅಥವಾ ಇತರ ದುಷ್ಕೃತ್ಯಗಳಿಗೆ ಕಾರಣವಾಗುವ ಕೋಚಿಂಗ್ ಕೇಂದ್ರಗಳಿಗೆ ₹1 ಲಕ್ಷ ದಂಡ ವಿಧಿಸಲು ಅಥವಾ ಕೇಂದ್ರದ ನೋಂದಣಿಯನ್ನು ರದ್ದುಗೊಳಿಸಲು ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.
- ಕೋಚಿಂಗ್ ಕೇಂದ್ರಗಳ ಚಟುವಟಿಕೆಗಳ ಮೇಲೆ ನಿಗಾ, ಮೇಲ್ವಿಚಾರಣೆ, ನೋಂದಣಿಯ ಜವಾಬ್ದಾರಿ ಆಯಾ ರಾಜ್ಯ ಸರ್ಕಾರಗಳಿಗೆ ಸೇರಿದೆ.

ಬಸವಣ್ಣ ಸಾಂಸ್ಕೃತಿಕ ನಾಯಕ

ಒಂದನೇ ಪುಟದಿಂದ

ಚನ್ನಮ್ಮನ ಕಿತ್ತೂರು: ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕನ್ನು ‘ಚನ್ನಮ್ಮನ ಕಿತ್ತೂರು ತಾಲ್ಲೂಕು’ ಎಂದು ನಾಮಕರಣ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಬ್ರಿಟಿಶರ ವಿರುದ್ಧ ವೀರ ಹೋರಾಟ ನಡೆಸಿದ್ದ ಕಿತ್ತೂರು ರಾಣಿ ಚನ್ನಮ್ಮ ಅವರ ಕರ್ಮಭೂಮಿ ಇದಾಗಿದೆ.

ಆರೂಢ ನಂದಿಹಾಳ ಗ್ರಾಮ: ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ನಂದಿಹಾಳ ಪಿ.ಎಚ್. ಗ್ರಾಮದ ಹೆಸರನ್ನು ‘ಆರೂಢ ನಂದಿಹಾಳ’ ಎಂದು ನಾಮಕರಣ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಗುರು ಆರೂಢರು ನಂದಿಹಾಳ ಗ್ರಾಮದಲ್ಲಿ ಜನಿಸಿ, ಹುಬ್ಬಳ್ಳಿಯ ಸಿದ್ಧಾರೂಢರ ಪರಮ ಶಿಷ್ಯರೂ ಆಗಿದ್ದರು ಎಂದು ಪಾಟೀಲ ತಿಳಿಸಿದರು.

ಒಳಮೀಸಲು: ಕೇಂದ್ರಕ್ಕೆ ಶಿಫಾರಸು

ಒಂದನೇ ಪುಟದಿಂದ

ಒಳ ಮೀಸಲಾತಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಏಳು ಸದಸ್ಯರ ಪೀಠ ರಚನೆ ಆಗಿರುವ ವಿಚಾರದತ್ತ ಸಚಿವರ ಗಮನ ಸೆಳೆದಾಗ, ‘ಅದಕ್ಕೂ ಕೇಂದ್ರಕ್ಕೆ ನಾವು ಶಿಫಾರಸು ಮಾಡುವುದಕ್ಕೂ ಸಂಬಂಧವಿಲ್ಲ. ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕಾಗಿರುವುದು ಸಂಸತ್ತು. ಹೀಗಾಗಿ ನಾವು 341ನೇ ಅನುಚ್ಛೇದಕ್ಕೆ ತಿದ್ದುಪಡಿಗೆ ಬೇಡಿಕೆ ಸಲ್ಲಿಸಲಿರುವುದು ಅಪ್ರಸ್ತುತ ಆಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ನಮ್ಮ ಅಭಿಪ್ರಾಯ ತಿಳಿಸಿದ್ದೇವೆ. ಇದರಲ್ಲಿ ರಾಜಕೀಯ ಇಲ್ಲ, ದಾರಿ ತಪ್ಪಿಸುವ ಕ್ರಮ ಅಲ್ಲ’ ಎಂದು ಮಹದೇವಪ್ಪ ಸ್ಪಷ್ಟಪಡಿಸಿದರು.

‘ಹಿಂದಿನ ಸರ್ಕಾರ ಎ.ಜೆ.ಸದಾಶಿವ ಆಯೋಗದ ವರದಿ ಅಪ್ರಸ್ತುತ ಮತ್ತು ಸಮಾಪನಗೊಳಿಸಲಾಗಿದೆ ಎಂದು ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡಿದೆ. ಆದರೆ, ಈ ತೀರ್ಮಾನವನ್ನು ಮರು ಪರಿಶೀಲಿಸುವ ಉದ್ದೇಶವಿಲ್ಲ’ ಎಂದು ಎಚ್.ಕೆ.ಪಾಟೀಲ ಸಮಜಾಯಿಷಿ ನೀಡಿದರು. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಸದಾಶಿವ ಆಯೋಗ ಶಿಫಾರಸು ಮಾಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮೀಸಲಾತಿ ನೀಡುವ ತೀರ್ಮಾನ ಕೈಗೊಂಡಿತ್ತು. ಈ ಕಾರಣ ಮುಂದೊಡ್ಡಿದ್ದ ಆಗಿನ ಸರ್ಕಾರ ಆಯೋಗದ ವರದಿಯನ್ನು ಸಮಾಪನಗೊಳಿಸಿತ್ತು.

ಅಹಂಕಾರ ಬಿಡಿ, ಕ್ಷಮೆ ಕೇಳಿ: ಸಿಂಧಿಯಾಗೆ ತರೂರ್ ಸಲಹೆ



ಶಶಿ ತರೂರ್

ನವದೆಹಲಿ (ಪಿಟಿಐ): ‘ಪಕ್ಷ ಬದಲಿಸಿದ ನಂತರ ಜ್ಯೋತಿರಾದಿತ್ಯ ಸಿಂಧಿಯಾ ಅವರೂ ಮೋದಿ ಸರ್ಕಾರದಂತೆ ಜನರ ಬಗ್ಗೆ ನಿರ್ಲಕ್ಷ್ಯದ ವರ್ತನೆ ಬೆಳೆಸಿಕೊಂಡಿವುದು ಬೇಸರದ ಸಂಗತಿ’ ಎಂದು ಕಾಂಗ್ರೆಸ್ ನಾಯಕ ಶಶಿತರೂರ್ ಟೀಕಿಸಿದ್ದಾರೆ.

ದಟ್ಟ ಮಂಜಿನಿಂದ ದೆಹಲಿಯಲ್ಲಿ ವಿಮಾನಯಾನದಲ್ಲಿ ಆಗಿರುವ ತೀವ್ರ ವ್ಯತ್ಯಯದ ಹಿನ್ನೆಲೆಯಲ್ಲಿ ಅವರು ಈ ಕುರಿತು ತರಾಟೆಗೆ ತೆಗೆದುಕೊಂಡಿದ್ದಾರೆ.

ವಿಮಾನಯಾನ ವ್ಯತ್ಯಯ ಕುರಿತ ಸಿಂಧಿಯಾ ಹೇಳಿಕೆಗೆ ಪ್ರತಿಯಾಗಿ ‘ಎಕ್ಸ್’ ನಲ್ಲಿ ಸರಣಿ ಪೋಸ್ಟ್ ಮಾಡಿರುವ ಅವರು, ‘ಸಚಿವರು ಆರಾಮವಾಗಿ ಇರುವ ಧೋರಣೆ ಬಿಟ್ಟು ಜನರ ಕೋಪ ತಣಿಸಲು ಗಮನಹರಿಸಲಿ’ ಎಂದಿದ್ದಾರೆ.

ಬುಧವಾರ ಹೇಳಿಕೆ ನೀಡಿದ್ದ ಸಿಂಧಿಯಾ ಅವರು, ‘ತರೂರ್ ನಿಘಂಟಿನಲ್ಲಿ ಕಳೆದುಹೋಗಿದ್ದಾರೆ. ಇಂಟರ್‌ನೆಟ್‌ನಲ್ಲಿ ಆಯ್ದ ಪತ್ರಿಕಾ ಹೇಳಿಕೆಗಳಿಂದ ಅಂಕಿ– ಅಂಶ ಆಯ್ಕೆ ಮಾಡುವ ಸಂಶೋಧನೆಗೆ ಸೀಮಿತವಾಗಿದ್ದಾರೆ’ ಎಂದು ಟೀಕಿಸಿದ್ದರು.

ಇದಕ್ಕೆ ತರೂರ್, ‘ಸಿಂಧಿಯಾ ಅವರ ಹೇಳಿಕೆಗೆ ಪ್ರತಿಕ್ರಿಯಿಸಲು ನಿಘಂಟಿನ ಅಗತ್ಯವಿಲ್ಲ. ಜ 14, 15ರಂದು ವಿಮಾನಯಾನ ರದ್ದತಿಯಿಂದ 80 ಸಾವಿರ ಪ್ರಯಾಣಿಕರಿಗೆ, ವಿಳಂಬದಿಂದಾಗಿ ಲಕ್ಷಾಂತರ ಪ್ರಯಾಣಿಕರಿಗೆ ಸಮಸ್ಯೆಯಾಗಿದೆ. ಸಚಿವರೇ, ಅಹಂಕಾರ ಬಿಡಿ, ಮೊದಲು ಜನರ ಕ್ಷಮೆ ಕೇಳಿ’ ಎಂದು ಪ್ರತಿಕ್ರಿಯಿಸಿದರು.

ಮಂಜುನಾಥ್ ವಿರುದ್ಧ ಕ್ರಮಕ್ಕೆ ಆದೇಶ

ಒಂದನೇ ಪುಟದಿಂದ

‘ಒಂದು ವೇಳೆ ಜಾತಿ ಪರಿಶೀಲನಾ ಸಮಿತಿಯ ನಿರ್ಣಯದ ಬಗ್ಗೆ ನಿಮಗೇನಾದರೂ ಆಕ್ಷೇಪಣೆ ಉದ್ಭವಿಸಿದರೆ ಪುನಃ ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಬಹುದು’ ಎಂದು ಮಂಜುನಾಥ್‌ಗೆ ಹೇಳಿತ್ತು.

ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಈ ಕುರಿತು ವಿಚಾರಣೆ ನಡೆಸಿದ್ದ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಯು 2021ರ ಅಕ್ಟೋಬರ್ 27ರಂದು ತನ್ನ ವರದಿ ಸಲ್ಲಿಸಿತ್ತು.

ಈ ವರದಿಯಲ್ಲಿ, ‘ಜಿ.ಮಂಜುನಾಥ್ ಬುಡಗ ಜಂಗಮ ಜಾತಿಗೆ ಸೇರಿಲ್ಲ. ಬೈರಾಗಿ ಜಾತಿಗೆ ಸೇರಿದವರು. ಸ್ವಾತಂತ್ರ್ಯ ಪೂರ್ವದಲ್ಲಿ ಕೋಲಾರದ ಗೆಜಿಟಿಯರ್‌ನಲ್ಲಿ ಬುಡಗ ಜಂಗಮ ಜಾತಿಯನ್ನು ಮಾಲಾ ನ್ಯಾಸಿ, ಬೈರಾಗಿ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಆದರೆ, ಅರ್ಜಿದಾರ ಮಂಜುನಾಥ್ ಅವರ ಸಂಬಂಧಿಕರು ಇತ್ತೀಚಿನ ದಿನಗಳಲ್ಲಿ ಬುಡಗ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ’ ಎಂದು ತಿಳಿಸಲಾಗಿತ್ತು. ಈ ವರದಿಯನ್ನು ಆಕ್ಷೇಪಿಸಿ ಮಂಜುನಾಥ್ ಹೈಕೋರ್ಟ್‌ನಲ್ಲಿ ಪುನಃ ರಿಟ್ ಅರ್ಜಿ ಸಲ್ಲಿಸಿದ್ದರು.

ಗುಂಡಿನ ದಾಳಿ: ಆರೋಪಿ ಗುರುತಿಸಿದ ಪ್ರತ್ಯಕ್ಷದರ್ಶಿ

ಜಮ್ಮು (ಪಿಟಿಐ): ಶ್ರೀನಗರದಲ್ಲಿ 1990ರ ಜನವರಿ 5ರಂದು ವಾಯುಪಡೆ ಸಿಬ್ಬಂದಿ ಗುಂಪಿನತ್ತ ಗುಂಡಿನ ದಾಳಿ ನಡೆಸಿದ್ದು, ಜೆಕೆಎಲ್‌ಎಫ್ ಮುಖ್ಯಸ್ಥ ಯಾಸಿನ್ ಮಲಿಕ್ ಎಂದು ಪ್ರತ್ಯಕ್ಷದರ್ಶಿ ಗುರುತಿಸಿದ್ದಾರೆ. ಅಂದು ಗುಂಡಿನ ದಾಳಿಯಿಂದ ನಾಲ್ವರು ಸಿಬ್ಬಂದಿ ಹುತಾತ್ಮರಾಗಿದ್ದರು.

ಸಿಬಿಐ ವಿಶೇಷ ಕೋರ್ಟ್‌ನ ಎದುರು ಪ್ರತ್ಯಕ್ಷದರ್ಶಿ, ವಾಯುಪಡೆಯ ಮಾಜಿ ಸಿಬ್ಬಂದಿ ರಾಜ್ವರ್ ಉಮೇಶ್ವರ್ ಸಿಂಗ್ ಅವರನ್ನು ಗುರುವಾರ ಹಾಜರುಪಡಿಸಲಾಗಿತ್ತು. ಅಂದಿನ ಕೃತ್ಯವನ್ನು ಸ್ಮರಿಸಿ ಸಿಂಗ್, ಗುಂಡು ಹಾರಿಸಿದ್ದು ಯಾಸಿನ್ ಮಲಿಕ್ ಎಂದು ತಿಳಿಸಿದರು.

ಆರೋಪಿ ಮಲಿಕ್ ದೆಹಲಿಯ ತಿಹಾರ್ ಜೈಲಿನಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದ. 2019ರಿಂದಲೂ ಆತ ಜೈಲಿನಲ್ಲಿದ್ದಾನೆ.

ಅಂದು ಗುಂಡಿನ ದಾಳಿಯಲ್ಲಿ ಸ್ಕ್ವಾಡ್ರನ್ ಲೀಡರ್ ರವಿ ಖನ್ನಾ ಸೇರಿ ನಾಲ್ವರು ಮೃತಪಟ್ಟಿದ್ದರೆ, 40 ಜನರು ಗಾಯಗೊಂಡಿದ್ದರು. ಶ್ರೀನಗರ ಹೊರವಲಯದ ರಾವಲ್ ಪೊರಾದಲ್ಲಿ ಸೇನಾ ವಾಹನಕ್ಕಾಗಿ ಕಾಯುತ್ತಿದ್ದ ಸಿಬ್ಬಂದಿಯ ಮೇಲೆ ಗುಂಡಿನ ದಾಳಿ ನಡೆದಿತ್ತು.

ಸಚಿನ್ ವಿರುದ್ಧ ನಕಲಿ ವಿಡಿಯೊ: ಎಫ್‌ಐಆರ್

ಮುಂಬೈ (ಪಿಟಿಐ): ಸುಲಭವಾಗಿ ಹಣ ಗಳಿಸಲು ಗೇಮಿಂಗ್ ಆ್ಯಪ್ ಬಳಸುವಂತೆ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಪ್ರಚಾರ ಮಾಡುತ್ತಿದ್ದಾರೆ ಎಂಬ ನಕಲಿ ವಿಡಿಯೊ ಹರಿದಾಡಿದ ಹಿನ್ನೆಲೆಯಲ್ಲಿ ಮುಂಬೈ ಪೊಲೀಸರು ಆನ್‌ಲೈನ್ ಆಟದ ಸೇವೆ ಒದಗಿಸುವ ಜಾಲತಾಣ ಮತ್ತು ಫೇಸ್ ಬುಕ್ ಪುಟದ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿ ಯೊಬ್ಬರು ಗುರುವಾರ ತಿಳಿಸಿದ್ದಾರೆ.

ಪಶ್ಚಿಮ ವಲಯದ ಸೈಬರ್ ಪೊಲೀಸ್ ಠಾಣೆಯಲ್ಲಿ ಸಚಿನ್ ಅವರ ಆಪ್ತ ಸಹಾಯಕ ಮಂಗಳವಾರ ಸಲ್ಲಿಸಿದ ದೂರಿನ ಮೇರೆಗೆ ಐಪಿಸಿ ಸೆಕ್ಷನ್ 500 (ಮಾನಹಾನಿ) ಮತ್ತು ಐಟಿ ಕಾಯ್ದೆಯ ಸೆಕ್ಷನ್ 66 (ಎ) (ಸಂವಹನ ಸೇವೆಯ ಮೂಲಕ ಆಕ್ರಮಣಕಾರಿ ಸಂದೇಶ ಕಳುಹಿಸುವುದು) ಅಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ತಂತ್ರಜ್ಞಾನ ದುರುಪಯೋಗ ಪಡಿಸಿಕೊಂಡು ಗೇಮಿಂಗ್ ಆ್ಯಪ್ ಉತ್ತೇಜಿಸುವಂತೆ ಸಚಿನ್ ಪ್ರಚಾರ ಮಾಡುತ್ತಿದ್ದಾರೆ ಎಂಬ ನಕಲಿ ವಿಡಿಯೊ ಹರಿಯಬಿಡಲಾಗಿತ್ತು. ಇತ್ತೀಚೆಗೆ ಈ ವಿಷಯದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ಸಚಿನ್, ಎಕ್ಸ್‌ನಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದರು.

ಮೈಸೂರಿನಲ್ಲಿ ಕರ್ನಾಟಕ–ಗೋವಾ ರಣಜಿ ಪಂದ್ಯ ಇಂದಿನಿಂದ

ಜಯದ ಹಾದಿಗೆ ಮರಳುವ ವಿಶ್ವಾಸ

• ಆರ್. ಜಿತೇಂದ್ರ



ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ಕರ್ನಾಟಕ ರಣಜಿ ತಂಡದ ಆಟಗಾರರು ಅಭ್ಯಾಸ ನಡೆಸಿದರು. ಪ್ರಜಾವಾಣಿ ಚಿತ್ರ/ಅನೂಪ್ ರಾಘ್.ಟಿ.

ಮೈಸೂರು: ಅಹಮದಾಬಾದಿನಲ್ಲಿ ಈಚೆಗೆ ಗುಜರಾತ್ ತಂಡದ ಎದುರು ಗೆಲುವನ್ನು ಕೈಚೆಲ್ಲಿದ ಆಘಾತದಿಂದ ಹೊರಬರುವ ಪ್ರಯತ್ನದಲ್ಲಿರುವ ಕರ್ನಾಟಕ ತಂಡವು ಶುಕ್ರವಾರದಿಂದ ಇಲ್ಲಿ ಆರಂಭವಾಗಲಿರುವ ರಣಜಿ ಟೂರ್ನಿಯ ಪಂದ್ಯದಲ್ಲಿ ಗೋವಾ ಎದುರು ಕಣಕ್ಕಿಳಿಯಲಿದೆ.

ಮಯಂಕ್ ಅಗರವಾಲ್ ನಾಯಕತ್ವದ ತಂಡವು ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಜಯದ ಹಾದಿಗೆ ಮರಳುವ ವಿಶ್ವಾಸದಲ್ಲಿದೆ.

ಟೂರ್ನಿಯ ಸಿ ಗುಂಪಿನಲ್ಲಿ ಆಡುತ್ತಿರುವ ರಾಜ್ಯ ತಂಡವು ಹುಬ್ಬಳ್ಳಿಯಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಪಂಜಾಬ್ ಎದುರು ಗೆದ್ದಿತ್ತು. ಆದರೆ, ಎರಡನೇ ಪಂದ್ಯದಲ್ಲಿ ಗುಜರಾತ್ ಎದುರು 110 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಕರ್ನಾಟಕ ತಂಡವು ಸೋತಿತ್ತು. ಗುರಿ ಸಾಧಿಸುವ ಹಾದಿಯಲ್ಲಿ ಆರಂಭಿಕ ಜೋಡಿ ಮಯಂಕ್ ಅಗರವಾಲ್ ಮತ್ತು ದೇವದತ್ತ ಪಡಿಕ್ಕಲ್ ಅವರು ಮೊದಲ ವಿಕೆಟ್‌ಗೆ 50 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದ್ದರು. ಆದರೆ, ನಂತರದ 63 ರನ್‌ಗಳ ಅಂತರದಲ್ಲಿ ಆಲೌಟ್ ಆಗಿತ್ತು.

ಇದೀಗ ಆ ಕಹಿ ನೆನಪು ಮರೆಯಲು ಗೋವಾ ಎದುರು ಜಯಿಸುವ ಛಲದಲ್ಲಿರುವ ಕರ್ನಾಟಕ ತಂಡವು ಗುರುವಾರ ಕಠಿಣ ಅಭ್ಯಾಸ ನಡೆಸಿತು.

ಮಾನಸಗಂಗೋತ್ರಿಯ ಅಂಗಳದಲ್ಲಿ ಮೂರು ವರ್ಷದ ಬಳಿಕ ಮತ್ತೆ ರಣಜಿ ಪಂದ್ಯ ನಡೆಯಲಿದೆ. ಹಸಿರಿನಿಂದ ಕಂಗೊಳಿಸುತ್ತಿದ್ದು, ಆರಂಭದಲ್ಲಿ ಬ್ಯಾಟಿಂಗ್‌ಗೆ ನೆರವಾಗುವ ನಿರೀಕ್ಷೆ ಇದೆ. ಕರ್ನಾಟಕ ತಂಡದಲ್ಲಿ ಅನುಭವಿ ಬ್ಯಾಟರ್‌ಗಳು ಇದ್ದಾರೆ. ನಾಯಕ ಮಯಂಕ್ ಪಂಜಾಬ್ ಎದುರು ಎರಡೂ ಇನಿಂಗ್ಸ್‌ಗಳಲ್ಲಿ ಸೊನ್ನೆ ಸುತ್ತಿದ್ದರು. ಆದರೆ, ಗುಜರಾತ್ ಎದುರು ಶತಕ ಸಿಡಿಸುವ ಮೂಲಕ ಲಯಕ್ಕೆ ಮರಳಿದ್ದಾರೆ. ದೇವದತ್ತ ಪಡಿಕ್ಕಲ್ ಹಾಗೂ ಮನೀಷ್ ಪಾಂಡೆ ಉತ್ತಮ ಲಯ ಕಾಯ್ದುಕೊಂಡಿದ್ದಾರೆ. ಆದರೆ, ಮೈಸೂರಿನವರೇ ಆದ ಬ್ಯಾಟರ್ ನಿಕಿನ್ ಜೋಸ್ ಅವರು ನಿರೀಕ್ಷೆಗೆ ತಕ್ಕಂತೆ ಆಡಿಲ್ಲ. ಸಮರ್ಥ್ ಕೂಡ ಲಯಕ್ಕೆ ಮರಳಬೇಕಿದೆ.

ಬೌಲಿಂಗ್ ವಿಭಾಗದಲ್ಲಿ ಮಧ್ಯಮವೇಗಿ ವಿ. ಕೌಶಿಕ್ ನಿರಂತರ ಯಶಸ್ಸು ಸಾಧಿಸುತ್ತಿದ್ದಾರೆ. ವೈಶಾಖ ವಿಜಯಕುಮಾರ್ ಕೂಡ ಉತ್ತಮ ಲಯದಲ್ಲಿದ್ದಾರೆ. ಆದರೆ ಗುಜರಾತ್ ಎದುರಿನ ಪಂದ್ಯದ ವೇಳೆ ಸ್ನಾಯುಸೆಳೆತದಿಂದ ಬಳಲಿದ್ದ ವೇಗಿ ಪ್ರಸಿದ್ಧ ಕೃಷ್ಣ ಅವರು ಇಲ್ಲಿ ಆಡುವುದು ಇನ್ನೂ ಖಚಿತವಾಗಿಲ್ಲ. ಒಂದೊಮ್ಮೆ ಅವರು ಆಡದಿದ್ದರೆ ಎಂ. ವೆಂಕಟೇಶ್ ಸ್ಥಾನ ಪಡೆಯುವ ಸಾಧ್ಯತೆ ಇದೆ. ಸ್ಪಿನ್ ವಿಭಾಗದಲ್ಲಿ ಅನುಭವಿ ಶುಭಾಂಗ್ ಹೆಗಡೆ ರೋಹಿತ್ ಕುಮಾರ್ ಹಾಗೂ ಶಶಿಕುಮಾರ್ ಕಾಂಬ್ಳೆ ಇದ್ದಾರೆ.

ಈ ಪಂದ್ಯದ ತರುವಾಯ ಕರ್ನಾಟಕವು ತ್ರಿಪುರ, ರೈಲ್ವೇಸ್, ತಮಿಳುನಾಡು ಹಾಗೂ ಚಂಡೀಗಢ ತಂಡಗಳನ್ನು ಎದುರಿಸಲಿದೆ. ಆ ಸವಾಲುಗಳಿಗಾಗಿ ಸಿದ್ಧರಾಗಲು ಕೂಡ ಗೋವಾ ಎದುರಿನ ಪಂದ್ಯದಲ್ಲಿ ಜಯದ ಮುನ್ನುಡಿ ಬರೆಯುವುದು ಅವಶ್ಯವಾಗಿದೆ.

ಪ್ರವಾಸಿ ಗೋವಾ ತಂಡವು ಈ ಋತುವಿನಲ್ಲಿ ಮಿಶ್ರಫಲ ಕಂಡಿದ್ದು, ಇನ್ನೂ ಗೆಲುವು ಸಾಧ್ಯವಾಗಿಲ್ಲ. ತ್ರಿಪುರ ಎದುರು 237 ರನ್‌ಗಳ ಭಾರಿ ಅಂತರದಿಂದ ಪರಾಭವಗೊಂಡಿದ್ದ ತಂಡವು ಹಿಂದಿನ ಪಂದ್ಯದಲ್ಲಿ ಚಂಡೀಗಡ ಎದುರು ಡ್ರಾ ಮಾಡಿಕೊಂಡಿತ್ತು. ನಾಯಕ ದರ್ಶನ್ ಮಿಸಾಳ್, ಸುಯಶ್ ಪ್ರಭುದೇಸಾಯಿ ಫಾರ್ಮ್‌ನಲ್ಲಿದ್ದಾರೆ. ರಾಹುಲ್ ತ್ರಿಪಾಠಿಯವರಂತಹ ಅನುಭವಿ ಆಟಗಾರರು ತಂಡದಲ್ಲಿದ್ದು, ಯುವ ಆಲ್‌ರೌಂಡರ್‌ಗಳು ತಂಡಕ್ಕೆ ನೆರವಾಗುವ ನಿರೀಕ್ಷೆ ಇದೆ. ಆಲ್‌ರೌಂಡರ್ ಅರ್ಜುನ್ ತೆಂಡೂಲ್ಕರ್ ಸಹ ಬಳಗದಲ್ಲಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಶೂಟಿಂಗ್ ರೇಂಜ್ ತೊರೆಯಲು ರಾಣಾಗೆ ಸೂಚನೆ

ನವದೆಹಲಿ (ಪಿಟಿಐ): ಕರ್ಣಿ ಸಿಂಗ್ ಶೂಟಿಂಗ್ ರೇಂಜ್ ತೊರೆಯುವಂತೆ ಭಾರತದ ಹೈ ಪರ್ಫಾಮೆನ್ಸ್ ನಿರ್ದೇಶಕ ಪಿಯರೆ ಬೇಚಾಂಪ್ ತಮಗೆ ಹೇಳಿದರು ಎಂದು ಶೂಟಿಂಗ್ ಕೋಚ್ ಜಸ್ಪಾಲ್ ರಾಣಾ ಗುರುವಾರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅವರು ಒಲಿಂಪಿಯನ್ ಮನು ಭಾಕರ್ ಅವರಿಗೆ ತರಬೇತುದಾರರಾಗಿದ್ದಾರೆ.

'ಪ್ಯಾರಿಸ್ ಒಲಿಂಪಿಕ್ಸ್‌ಗೆ ತಯಾರಿ ನಡೆಸುತ್ತಿರುವ ಮನು ಅವರ ತರಬೇತಿಯ ಮೇಲ್ವಿಚಾರಣೆಗಾಗಿ ಈ ರೇಂಜ್‌ಗೆ ಭೇಟಿ ನೀಡಿದ್ದೆ' ಎಂದು ರಾಣಾ ತಿಳಿಸಿದ್ದಾರೆ.

ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ಜಾರಿಗೆ ತಂದ 'ಪ್ರಮಾಣಿತ ಕಾರ್ಯಾಚರಣೆ ವಿಧಾನ' (ಎಸ್‌ಒಪಿ) ಅನ್ನು ಬೇಚಾಂಪ್ ಉಲ್ಲೇಖಿಸಿ, ರೇಂಜ್‌ನಿಂದ ಹೊರ ಹೋಗಬೇಕೆಂದರು ಎಂದು ರಾಣಾ ಹೇಳಿದರು.

'ಶೂಟರ್‌ಗಳು ಅಭ್ಯಾಸ ಮಾಡುತ್ತಿದ್ದ ಸ್ಥಳದಿಂದ ನಾನು ಸಾಕಷ್ಟು ದೂರದಲ್ಲಿ ನಿಂತಿದ್ದೆ. ಆದರೆ, ಅವರು ಬಂದು ಇಲ್ಲಿ ನಿಲ್ಲಬೇಡಿ, ರೇಂಜ್ ತೊರೆಯಬೇಕು. ಇಲ್ಲವಾದರೆ ನಾನು ಎನ್‌ಆರ್‌ಎಐನೊಂದಿಗೆ ತೊಂದರೆಗೆ ಸಿಲುಕುತ್ತೇನೆಂದರು' ಎಂದು ರಾಣಾ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎನ್‌ಆರ್‌ಎಐ, ಕ್ರೀಡೆಯ ಉತ್ತಮ ಹಿತದೃಷ್ಟಿಯಿಂದ ಶಿಬಿರಗಳು ಹಾಗೂ ಸ್ಪರ್ಧೆಗಳ ಸಮಯದಲ್ಲಿ ಎಸ್‌ಒಪಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಶೂಟರ್‌ಗಳು ಮತ್ತು ವೈಯಕ್ತಿಕ ತರಬೇತುದಾರರಿಗೆ ಸೂಚಿಸಲಾಗಿದೆ ಎಂದು ತಿಳಿಸಿದೆ.

ಚೆಸ್: ಹಲವು ಗ್ರ್ಯಾಂಡ್‌ಮಾಸ್ಟರ್‌ಗಳಿಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶಾಲಾ ವಿದ್ಯಾರ್ಥಿ ಸಾತ್ವಿಕ್ ಅಡಿಗ ಮತ್ತು ತಮಿಳುನಾಡಿನ ವಿ.ರಾಘವ್, ಗುರುವಾರ ಆರಂಭವಾದ ಬೆಂಗಳೂರು ಇಂಟರ್‌ನ್ಯಾಷನಲ್ ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿಯ (ಕೆಟಗರಿ ಎ) ಮೊದಲ ಸುತ್ತಿನಲ್ಲಿ ಗ್ರ್ಯಾಂಡ್‌ಮಾಸ್ಟರ್ಸ್‌ಗಳ ಜೊತೆ ಪಾಯಿಂಟ್ ಹಂಚಿಕೊಳ್ಳುವ ಮೂಲಕ ಗಮನ ಸೆಳೆದರು. ಮೊದಲ ಸುತ್ತಿನಲ್ಲಿ ಗ್ರ್ಯಾಂಡ್ ಮಾಸ್ಟರ್ ಆಟಗಾರರಿಗೆ ಯುವ ಪ್ರತಿಭಾನ್ವಿತರು ತೀವ್ರ ಪೈಪೋಟಿ ನೀಡಿದರು.

ಮಹಾರಾಷ್ಟ್ರದ ಗ್ರ್ಯಾಂಡ್ ಮಾಸ್ಟರ್ ಸಂಕಲ್ಪ್ ಗುಪ್ತಾ, ತೆಲಂಗಾಣದ ಫಿಡೆಮಾಸ್ಟರ್ ಮಟ್ಟಾ ವಿನಯಕುಮಾರ್ ಅವರಿಗೆ 64 ನಡೆಗಳಲ್ಲಿ ಸೋತಿದ್ದು ದಿನದ ದೊಡ್ಡ ಅನಿರೀಕ್ಷಿತವಾಗಿತ್ತು. ಒಟ್ಟಾರೆ ಮೊದಲ ಹತ್ತು ಬೋರ್ಡ್‌ಗಳಲ್ಲಿ ಐವರು ಜಿಎಂ ಆಟಗಾರರು 'ಡ್ರಾ' ಮಾಡಿಕೊಂಡರೆ, ಒಬ್ಬರು ಸೋಲನುಭವಿಸಿದರು. ಜೊತೆಗೆ ಇನ್ನೂ ಕೆಲವು ಜಿಎಂ ಆಟಗಾರರು ನಂತರದ ಬೋರ್ಡ್‌ಗಳಲ್ಲಿ ಹಿನ್ನಡೆ ಕಾಣಬೇಕಾಯಿತು.



ಸಾತ್ವಿಕ್ ಅಡಿಗ.

ರಾಷ್ಟ್ರೀಯ ಚಾಂಪಿಯನ್ ಜಿಎಂ ಸೇತುರಾಮನ್ (2594) ಎರಡನೇ ಬೋರ್ಡ್‌ನಲ್ಲಿ ವಿ.ರಾಘವ್ (2150) ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು. ನಾಲ್ಕನೇ ಬೋರ್ಡ್‌ನಲ್ಲಿ ಅನುಭವಿ ಜಿಎಂ ದೀಪ್ತಾಯನ ಘೋಷ್ (ಪಶ್ಚಿಯ ಬಂಗಾಳ, ರೇಟಿಂಗ್ 2568) 52 ನಡೆಗಳ ನಂತರ ಸಾತ್ವಿಕ್ (ರೇಟಿಂಗ್ 2142) ಜೊತೆ 'ಡ್ರಾ' ಒಪ್ಪಂದಕ್ಕೆ ಸಹಿ ಮಾಡಬೇಕಾಯಿತು. ಕಳೆದ ತಿಂಗಳು ಸ್ಪೇನ್‌ನ ಲಾರ್ಕಾದಲ್ಲಿ ಮೂರು ಟೂರ್ನಿಗಳಲ್ಲಿ ಆಡಿದ್ದ ಸಾತ್ವಿಕ್ 480 ರೇಟಿಂಗ್ ಪಾಯಿಂಟ್ಸ್ ಸಂಪಾದಿಸಿದ್ದರು. ಏಳನೇ ಬೋರ್ಡ್‌ನಲ್ಲಿ ಜಿಎಂ ಎಂ.ಆರ್. ಲಲಿತ್ ಬಾಬು ಅವರು ಮಹಾರಾಷ್ಟ್ರದ ಗೌರವ್ ಜಾಗಡೆ ಜೊತೆ, ಬಂಗಾಳದ ಜಿಎಂ ಸಯಾಂತನ ದಾಸ್ ಅವರು ಹತ್ತನೇ ಬೋರ್ಡ್‌ನಲ್ಲಿ ಆಂಧ್ರಪ್ರದೇಶದ ಪೃಥ್ವಿ ಕುಮಾರ್ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಮೊದಲ ಬೋರ್ಡ್‌ನಲ್ಲಿ ಜಿಎಂ ಅಭಿಜಿತ್ ಗುಪ್ತಾ, ಕರ್ನಾಟಕದ ಅಪಾರ್ ಸಕ್ಸೇನಾ ವಿರುದ್ಧ, ಇಂಗ್ಲೆಂಡ್‌ನ ನೈಜೆಲ್ ಶಾರ್ಟ್ ಮೂರನೇ ಬೋರ್ಡ್‌ನಲ್ಲಿ ಐಎಂ ನಿಶಾ ಮೊಹತಾ ವಿರುದ್ಧ, ಬಂಗಾಳದ ಐಎಂ ಅರಣ್ಯಕ್ ಘೋಷ್, ಐದನೇ ಬೋರ್ಡ್‌ನಲ್ಲಿ ಮಹಾರಾಷ್ಟ್ರದ ಐಎಂ ಅನೂಪ್ ದೇಶಮುಖ್ ವಿರುದ್ಧ ಜಯಗಳಿಸಿದರು. 'ಎಲೈಟ್' ವಿಭಾಗದಲ್ಲಿ 31 ಗ್ರ್ಯಾಂಡ್‌ಮಾಸ್ಟರ್‌ಗಳು, ನಾಲ್ವರು ಡಬ್ಲ್ಯುಜಿಎಂ ಆಟಗಾರ್ತಿಯರು, 41 ಐಎಂ ಆಟಗಾರರು, 10 ಡಬ್ಲ್ಯುಐಎಂ ಆಟಗಾರ್ತಿಯರು ಒಳಗೊಂಡಂತೆ 210 ಮಂದಿ ಕಣದಲ್ಲಿದ್ದಾರೆ. ಒಟ್ಟು 18 ದೇಶಗಳ ಸ್ಪರ್ಧಿಗಳು ಇದ್ದಾರೆ.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಬೆಂಗಳೂರು ನಗರ ಜಿಲ್ಲಾ ಚೆಸ್ ಸಂಸ್ಥೆ ಈ ಟೂರ್ನಿಯನ್ನು ನಡೆಸುತ್ತಿದೆ.

ಪ್ರಮುಖ ಟೂರ್ನಿಯಾಗಲಿ: ಆನಂದ್

ಟೂರ್ನಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಉದ್ಘಾಟಿಸಿದ ಭಾರತದ ಚೆಸ್ ದಿಗ್ಗಜ ಹಾಗೂ ಫಿಡೆ ಡೆಪ್ಯುಟಿ ಅಧ್ಯಕ್ಷ ವಿಶ್ವನಾಥನ್ ಆನಂದ್ ಮಾತನಾಡಿ, 'ಇದು ಭಾರತದ ಚೆಸ್ ಕ್ಯಾಲೆಂಡರ್‌ನಲ್ಲಿ ಪ್ರಮುಖ ಟೂರ್ನಿಯಾಗಿ ಮೂಡಿಬರಲಿ' ಎಂದು ಹಾರೈಸಿದರು.

'ನನ್ನ ಚೆಸ್ ಜೀವನದ ಎರಡನೇ ಪ್ರಮುಖ ರಾಷ್ಟ್ರೀಯ ಪ್ರಶಸ್ತಿ ತುಮಕೂರಿನಲ್ಲಿ (1987, ರಾಷ್ಟ್ರೀಯ ಬಿ ಚಾಂಪಿಯನ್‌ಷಿಪ್‌ನಲ್ಲಿ) ಬಂದಿತ್ತು. ಅದು ಬಿಟ್ಟರೆ ಕರ್ನಾಟಕದಲ್ಲಿ ನಾನು ಆಡಿಲ್ಲ. ಆದರೆ ಬೆಂಗಳೂರಿಗೆ ಸಾಕಷ್ಟು ಸಲ ಭೇಟಿ ನೀಡಿದ್ದೇನೆ' ಎಂದರು.

ಉದ್ಘಾಟನೆ ಕಾರ್ಯಕ್ರಮದಲ್ಲಿ ಕ್ರೀಡಾ ಸಚಿವ ಬಿ.ನಾಗೇಂದ್ರ, ಐಎಸಿಎಫ್ ಹಂಗಾಮಿ ಕಾರ್ಯದರ್ಶಿ ಎ.ಕೆ.ವರ್ಮಾ, ಟೂರ್ನಿಯ ಪ್ರಧಾನ ಪೋಷಕ ಹಾಗೂ ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ ಪ್ರಸಾದ್, ಫಿಡೆ ಉಪಾಧ್ಯಕ್ಷ ನೈಜೆಲ್ ಶಾರ್ಟ್, ನೆಹರು ಯುವ ಕೇಂದ್ರದ ಪ್ರಾದೇಶಿಕ ನಿರ್ದೇಶಕ ಎಂ.ಎನ್. ನಟರಾಜ್, ರಾಜ್ಯ ಚೆಸ್ ಸಂಸ್ಥೆ ಅಧ್ಯಕ್ಷ ಡಿ.ಪಿ.ಅನಂತ, ಕಾರ್ಯದರ್ಶಿ ಅರವಿಂದ ಶಾಸ್ತ್ರಿ, ಬಿಯುಡಿಸಿಎ ಅಧ್ಯಕ್ಷೆ ಎಂ.ಯು. ಸೌಮ್ಯಾ ಹಾಜರಿದ್ದರು.